ಜನಶಕ್ತಿ

ಕನ್ನಡ ವಾರಪತ್ರಿಕೆ


Blog :janashakthi.wordpress.com   e-mail : js_weekly@yahoo.com

ಸಂಪುಟ 7 ಸಂಚಿಕೆ 41
ಅಕ್ಟೋಬರ್ 13, 2013   ಪುಟ 16   ರೂ. 10/-



ಕೋಲಾರ ಚಿನ್ನದ ಗಣಿಗೆ ಕನ್ನ?





ಸ್ಯಾಮ್ ಅಂಕಲ್‌ಗೆ ಯಾಕೆ ಗರ ಬಡಿದಿದೆ?



ಧರ್ಮಸ್ಥಳ : ಸೌಜನ್ಯಳ ಅತ್ಯಾಚಾರ – ಕೊಲೆಗೆ ಒಂದು ವರ್ಷ!

ಅಕ್ಟೋಬರ್ 8 : ರ್ಯಾಯ ಧೋರಣೆಗಳಿಗಾಗಿ ಎಡಪಕ್ಷಗಳ ರ್‍ಯಾಲಿ





ತೃಣಮೂಲ ಕಾಂಗ್ರೆಸ್ ಗುಂಡಾಗಿರಿ ವಿರುದ್ಧ ಪ್ರತಿಭಟನೆ

ಪಶ್ಚಿಮ ಬಂಗಾಳದಲ್ಲಿ ರೈತ-ಕೂಲಿಕಾರರ ಮೇಲೆ, ದಲಿತರ ಮೇಲೆ, ಮಹಿಳೆಯರ ಮೇಲೆ, ಮಾಧ್ಯಮ ಪ್ರತಿನಿಧಿಗಳ ಮೇಲೆ, ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಅಲ್ಲಿನ ತೃಣಮೂಲ ಕಾಂಗ್ರೆಸ್ಸಿನ ಶ್ರೀಮತಿ ಮಮತಾ ಬ್ಯಾನರ್ಜಿಯವರ ಸರಕಾರ ಹಾಗೂ ಅವರ ಗುಂಡಾಗಳೂ ದಾಳಿ ನಡೆಸಿ 100 ಕ್ಕೂ ಹೆಚ್ಚು ಜನರನ್ನು ಕೊಲೆ ಮಾಡಿದ್ದಾರೆ.

ಪ್ರಜಾಪ್ರಭುತ್ವ ನೀತಿಗಳನ್ನು, ಮೌಲ್ಯಗಳನ್ನು ಗಾಳಿಗೆ ತೂರಿ, ಗುಂಡಾ ವೃತ್ತಿ ನಡೆಸಿದ್ದಾರೆ. ಇದನ್ನು ಕೂಡಲೇ ತಡೆಗಟ್ಟಬೇಕು. ಹಾಗೂ ವಿರೋಧ ಪಕ್ಷದವರಿಗೆ ರಕ್ಷಣೆ ಒದಗಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ ಬಿಜಾಪುರ ಜಿಲ್ಲಾ ಸಮಿತಿಯು ಜಿಲ್ಲಾಧಿಕಾರಿಗಳಾದ ರುತ್ವಿಕ್ ರಂಜನ್ ಪಾಂಡೆಯವರ ಮುಖಾಂತರ ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು ಹಾಗೂ ರಾಜ್ಯಪಾಲರು ಕರ್ನಾಟಕ ಸರ್ಕಾರ ಇವರಿಗೆ ಮನವಿ ಅರ್ಪಿಸಿತು.

ಇದಕ್ಕೂ ಮೊದಲು ನಗರದ ಇಂಡಿ ರೋಡ ಎಪಿಎಂಸಿಯಿಂದ ಬೃಹತ್ ಮೆರವಣಿಗೆ ಹೊರಡಿಸಿ ನಗರದ ಮುಖ್ಯ ಬೀದಿಗಳಲ್ಲಿ ಹಾಯ್ದು ಜಿಲ್ಲಾಧಿಕಾರಿ ಕಛೇರಿಗೆ ಬಂದು ಪ್ರತಿಭಟನಾ ಸಭೆ ನಡೆಸಲಾಯಿತು.

ಮೆರವಣಿಗೆಯುದ್ದಕ್ಕೂ ಪ. ಬಂಗಾಳ ತೃಣಮೂಲ ಕಾಂಗ್ರೆಸ್ಸಿನ ಗುಂಡಾಗಿರಿಗೆ ದಿಕ್ಕಾರ, ಪ. ಬಂಗಾಳದಲ್ಲಿ ಪ್ರಜಾಪ್ರಭುತ್ವ ಉಳಿಸಿ,! ಗುಂಡಾಗಿರಿ ಹತ್ತಿಕ್ಕಿರಿ!! ಮಮತಾ ಬ್ಯಾನರ್ಜ ಗುಂಡಾಗಿರಿಗೆ ದಿಕ್ಕಾರ್!! ಬಡವರ ಭೂಮಿ ಉಳಿಸಿ.! ಅಕ್ರಮ ಭೂಮಿ ಸಾಗುವಳಿ ಸಕ್ರಮಗೊಳಿಸಿ, ನಿವೇಶನ ರಹಿತರಿಗೆ ನಿವೇಶನ ಕೊಡಿ ಮೊದಲಾದ ಘೋಷಣೆಗಳನ್ನು ಮೆರವಣಿಗೆಕಾರರು ಕೂಗುತ್ತಿದ್ದರು.

ಬಿಜಾಪುರ, ಇಂಡಿ, ಸಿಂದಗಿ, ಬ. ಬಾಗೇವಾಡಿ ತಾಲೂಕುಗಳಲ್ಲಿಯ ಅಕ್ರಮ ಭೂ ಸಾಗುವಳಿದಾರರ ಭೂಮಿ ಸಕ್ರಮಗೊಳಿಸಬೇಕು, ನಿವೇಶನ ರಹಿತರಿಗೆ ಮನೆ ನಿವೇಶನಗಳನ್ನು ನೀಡಬೇಕು ಎಂದು ಆಗ್ರಹಿಸಿ ಜಿಲ್ಲಾಧಿಕಾರಿಗಳಿಗೆ ಪ್ರತ್ಯೇಕ ಮನವಿ ಅರ್ಪಿಸಲಾಯಿತು. ಈ ಸಂಧರ್ಭದಲ್ಲಿ ಜಿಲ್ಲಾ ಗೌರವ ಅಧ್ಯಕ್ಷ ಭೀಮಶಿ ಕಲಾದಗಿ ಮತ್ತು ಜಿಲ್ಲಾ ಅಧ್ಯಕ್ಷ ಅಣ್ಣಾರಾಯ ಈಳಗೇರ ಅವರು ಮಾತನಾಡಿ ಪ. ಬಂಗಾಳದಲ್ಲಿ ಮಮತಾ ಬ್ಯಾನರ್ಜಿಯವರ ರೈತ – ಕೂಲಿಕಾರರ ಮೇಲಿನ ಗುಂಡಾ ದಾಳಿಯನ್ನು ಖಂಡಿಸಿದರು.

ರೈತ ಮುಖಂಡರಾದ ರಾಮಣ್ಣಾ ಶಿರಗೊಳ, ಖಾಜೇಸಾಬ ಕೋಲಾರ, ರಾಮಚಂದ್ರ ಕೂಡಗಿ, ದುಂಡಪ್ಪ ತಿಮ್ಮಣ್ಣಾ ವಡ್ಡರ್, ಶಿವಯೋಗೆಪ್ಪ ಪೂಜಾರಿ, ಮೈಬೂಬಿ ಚಟ್ನಳ್ಳಿ, ಶಿವರಾಯ ಬಂಗಾರ, ಹಿರಾಬಾಯಿ ಹಜೇರಿ, ಸೋನಾಬಾಯಿ ಬ್ಯಾಳಿ, ಜುಬೇದಾ ಹಣಗಿ, ಬಾಬು ಸಾಬಗಡೆದ, ಮೈಸುದ್ದಿನ ಮುಲ್ಲಾ ಮುಂತಾದ ಮುಖಂಡರು ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಮಹಿಳೆಯ ಪಾಲುಗೊಂಡಿದ್ದರು.

– ಅಣ್ಣಾರಾಯ ಈಳಗೇ

ಪಶ್ಚಿಮ ಬಂಗಾಳದ ಪರಿಸ್ಥಿತಿ

ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ನಡೆದ ಪಂಚಾಯತ್ ಚುನಾವಣೆಯಲ್ಲಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಮುನ್ನಡೆ ಗಳಿಸಿದೆ. ಆದರೆ, ಇದರ ಹಿಂದೆ ಟಿಎಂಸಿಯ ಅತ್ಯಂತ ಹೇಯ ಕುತಂತ್ರವೊಂದು ನಡೆದ ಗುಮಾನಿ ಬಲವಾಗಿದೆ. ಮತ ಎಣಿ–ಕೆ ಸಂದರ್ಭದಲ್ಲಿ ಭಾರೀ ಗೋಲ್‌ಮಾಲ್ ನಡೆದಿರುವ ಶಂಕೆ ಇದೆ. ಇದಕ್ಕೆ ಪುಷ್ಟಿ ನೀಡುವಂತೆ ವಿಧಾನಸಭೆಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಪ್ರತಿಪಕ್ಷ ನಾಯಕ ಸೂರ್ಯಕಾಂತ್ ಮಿಶ್ರಾ, ಮತ ಎಣಿಕೆ ಸಂದರ್ಭದಲ್ಲಿ ಚುನಾವಣಾ ಮತಪತ್ರಗಳನ್ನು ರಹಸ್ಯವಾಗಿ ಮುದ್ರಿಸಲಾಗಿದೆ ಎಂದು ಆರೋಪಿಸಿದ್ದಾರೆ.

ಅಲ್ಲದೆ, ಪಂಚಾಯತ್ ಚುನಾವಣೆಯಲ್ಲಿ ನಡೆದ ಮತ್ತು ಈಗಲೂ ಮುಂದುವರಿಯುತ್ತಿರುವ ದಾಳಿ, ದೌರ್ಜನ್ಯಗಳನ್ನು ಪ್ರಸ್ತಾಪಿಸುವ ಗೊತ್ತುವಳಿಯನ್ನೂ ಸದನದಲ್ಲಿ ಅವರು ಮಂಡಿಸಿದ್ದಾರೆ. ಸ್ಪೀಕರ್ ಅದಕ್ಕೆ ಅವಕಾಶ ನೀಡದ ಕಾರಣ ಪ್ರತಿಭಟನಾರ್ಥವಾಗಿ ಕಲಾಪವನ್ನು ಬಹಿಷ್ಕರಿಸಲಾಯಿತು. ಬಳಿಕ ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯುವ ಹಿನ್ನೆಲೆಯಲ್ಲಿ ಕಲಾಪದಲ್ಲಿ ಭಾಗವಹಿಸುವ ನಿರ್ಧಾರ ಕೈಗೊಳ್ಳಲಾಯಿತು.

ಪಂಚಾಯತ್ ಚುನಾವಣೆ ಹಿಂಸಾತ್ಮಕವಾಗಿ ನಡೆದಿದೆ. ಈಗಲೂ ಬಹುತೇಕ ಕಡೆಗಳಲ್ಲಿ ತೃಣಮೂಲ ಕಾರ್ಯಕರ್ತರ ಗೂಂಡಾ ಸೇನೆ ಹಿಂಸೆಯಲ್ಲಿ ಸಕ್ರಿಯವಾಗಿದೆ. ಚುನಾವಣೆಯಲ್ಲಿ ಅನೀತಿ ಹಾಗೂ ಅಕ್ರಮಗಳಿಂದಾಗಿ ದೊಡ್ಡ ಮಟ್ಟದಲ್ಲಿ ಪ್ರಜಾಪ್ರಭುತ್ವದ ಪ್ರಕ್ರಿಯೆಯನ್ನು ಬಲಿ ತೆಗೆದುಕೊಳ್ಳುವ ಕಾರ್ಯ ನಡೆಯಿತು.

ಚುನಾವಣಾ ಆಯೋಗ ಕಡೆ ಘಳಿಗೆ ವರೆಗೂ ಬರ್ದ್ವಾನ್ ನಂತಹ ಜಿಲ್ಲೆಗಳಲ್ಲಿ ಮತಗಳ ಕುರಿತ ಸ್ಪಷ್ಟ ಮಾಹಿತಿಯನ್ನು ವೆಬ್ ಸೈಟ್ ಗೆ ಅಪ್ ಲೋಡ್ ಮಾಡಿರಲಿಲ್ಲ. ಎಡರಂಗದ ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸಬಾರದು ಎಂಬ ಏಕೈಕ ಉದ್ದೇಶದಿಂದ ಹೀಗೆ ಮಾಡಲಾಯಿತು. ಸುಮಾರು 12 ಸಾವಿರ ಸ್ಥಾನಗಳಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯಲು ಆಡಳಿತಾರೂಢ ತೃಣಮೂಲ ಪಕ್ಷ ಅವಕಾಶ ನೀಡಲಿಲ್ಲ. ಇದು ಸದನದಲ್ಲಿ ಚರ್ಚೆಯಾಗುತ್ತದೆ ಎಂಬ ಭೀತಿಯಿಂದ ಸೂರ್ಯಕಾಂತ್ ಮಿಶ್ರಾ ಮಂಡಿಸಿದ ಗೊತ್ತುವಳಿಯ ಚರ್ಚೆಗೆ ಸ್ಪೀಕರ್ ಅವಕಾಶ ನೀಡಲಿಲ್ಲ.

ಸಿಪಿಎಂ ನಿಂದ ಪ್ರಾಥಮಿಕ ಪರಾಮರ್ಶೆ

ಚುನಾವಣಾ ಫಲಿತಾಂಶದ ಬಗ್ಗೆ ಸಿಪಿಎಂ ರಾಜ್ಯ ಸಮಿತಿ ವಿಮರ್ಶೆ ನಡೆಸಿತು. ತೃಣಮೂಲದ ಭಯೋತ್ಪಾದನೆಯನ್ನು ಎದುರಿಸುವುದು, ಜನಸಮುದಾಯದೊಂದಿಗೆ ನಿಕಟ ಬಾಂಧವ್ಯವನ್ನು ಮುಂದುವರಿಸುವುದು ಮುಖ್ಯ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಈ ಹಿನ್ನೆಲೆಯಲ್ಲಿ ಫಲಿತಾಂಶ ಎಡರಂಗದ ಪಾಲಿಗೆ ಸಕಾರಾತ್ಮಕವಾಗಿತ್ತು.

ವ್ಯಾಪಕ ಹಿಂಸಾಚಾರದ ನಡುವೆ ನಡೆದ ಈ ಚುನಾವಣೆಯಲ್ಲಿ ಹಲವು ಕ್ಷೇತ್ರಗಳಲ್ಲಿ ನಾಮಪತ್ರ ಹಾಕುವುದರಿಂದ ಹಿಡಿದು, ಪ್ರಚಾರ, ಮತ ಎಣಿಕೆ ವರೆಗೆ ಎಲ್ಲದಕ್ಕೂ ಅಡಚಣೆ ಉಂಟಾಗಿತ್ತು. ಇದ–ರಿಂದಾಗಿ ಜನಾಭಿಪ್ರಾಯ ಸೂಕ್ತ ರೀತಿಯಲ್ಲಿ ಪ್ರತಿಫಲನವಾಗಿಲ್ಲ. ಅಧಿಕಾರ ಗಳಿಸಲು ತೃಣಮೂಲ ಹಿಂಸೆಯ ಮಾರ್ಗವನ್ನು ಅನುಸರಿಸಿತು. ಎಡ ಕಾರ್ಯಕರ್ತ ಹಿತೈಷಿಗಳಂತೂ ಜೀವದ ಹಂಗುತೊರೆ ತೃಣಮೂಲದ ಹಿಂಸಾಚಾರವ ಎದುರಿಸಿಯೇ ಚುನಾವಣಾ ಪ್ರಕ್ರಿಯೆಯ ಪಾಲ್ಗೊಂಡರು.

ಹಿಂಸಾಚಾರದ ಫಲವಾಗಿ ಎಡರಂ ಅಭ್ಯರ್ಥಿಗಳಿಗೆ 5206 ಕಡೆಗಳ ನಾಮಪತ್ರವನ್ನೇ ಸಲ್ಲಿಸಲು ಸಾಧ್ಯವಾಗಿ 782 ಪಂಚಾಯತ್ ಸಮಿತಿಗಳು, 8 ಜಿ ಪರಿಷತ್ ಸ್ಥಾನಗಳೂ ಎಡ ಅಭ್ಯರ್ಥಿ ಸ್ಪರ್ಧೆಯಿಂದ ವಂಚಿತವಾದವು. ಇ 2176 ಕ್ಷೇತ್ರಗಳಲ್ಲಿ ಒತ್ತಡ ಹಾಕಿ ನಾಮ ಹಿಂದಕ್ಕೆ ಪಡೆಯುವಂತೆ ಮಾಡಲಾಯಿ ಆಡಳಿತಾರೂಢ ತೃಣಮೂಲದ ಗೂಂಡಾಗ 3834 ಮತಗಟ್ಟೆಗಳನ್ನು ಸಂಪೂರ್ಣವ ವಶಪಡಿಸಿದರೆ, 2309 ಮತಗಟ್ಟೆಗಳ ಭಾಗಶಃ ವಶಕ್ಕೆ ಪಡೆದುಕೊಂಡಿದ್ದರು.

ಇಷ್ಟೆಲ್ಲ ಅನ್ಯಾಯ, ಅಕ್ರಮಗಳ ಮ ಎಡರಂಗ ಮಹತ್ವದ ಸಾಧನೆಯ ಮಾಡಿದೆ. 16 ಜಿಲ್ಲೆಗಳಲ್ಲಿ ಶೇಕಡಾ 37. ಮತ ಗಳಿಕೆಯನ್ನು ದಾಖಲಿಸಿದೆ. ತೃಣಮೂ ಕಾಂಗ್ರೆಸ್ ಶೇ. 43.03 ಪ್ರಮಾಣದ ವ ಗಳಿಸಿದೆ. ನಾಲ್ಕು ಜಿಲ್ಲೆಗಳಲ್ಲಿ ಎಡರಂಗದ ವ ಗಳಿಕೆ ಶೇಕಡಾ 40ರ ಗಡಿ ದಾಟಿತ್ತು. ಇ ಆರು ಜಿಲ್ಲೆಗಳಲ್ಲಿ ಎಡ ಅಭ್ಯರ್ಥಿಗಳ ವ ಗಳಿಕೆ ಶೇ. 37ರಿಂದ 40ರ ಮಧ್ಯದಲ್ಲಿತ್ತು.

ತೋಳು ಬಲದ ಜೊತೆ ತೃಣಮೂ ಕಾಂಗ್ರೆಸ್ ಹಣ ಬಲದಲ್ಲೂ ಕಮ್ಮಿ ಇರ ಎಂಬುದನ್ನು ಸಿಪಿಎಂ ರಾಜ್ಯ ಸಮಿತಿ ವಿಮರ್ಶೆಯಲ್ಲಿ ಗಮನಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಅಡ್ಡಪಲ್ಲಕಿ ವಿವಾದ

ಜೇವರ್ಗಿಯಲ್ಲಿ ಅಕ್ಟೋಬರ್ 5 ರಿಂದ ನಡೆಸಲು ಉದ್ದೇಶಿಸಿರುವ ರಂಬಾಪುರಿ ಜಗದ್ಗುರುಗಳ ದಸರಾ ದರ್ಬಾರ್ ಭಾಗವಾಗಿ ನಡೆಯಬೇಕಾದ ಅಡ್ಡಪಲ್ಲಕಿ ಉತ್ಸವದ ಸುತ್ತ ವಿವಾದವೊಂದು ತಲೆದೋರಿದ್ದು ಸಮಾಜದಲ್ಲಿ ಈಗಾಗಲೇ ಹರಡಿಕೊಳ್ಳುತ್ತಿರುವ ಅಶಾಂತಿಯ ಅಗ್ನಿಗೆ ತುಪ್ಪ ಸುರಿದಿದೆ.

ರಂಬಾಪುರಿ ಜಗದ್ಗುರುಗಳು ಹಿಂದಿನಿಂದಲೂ ಪ್ರತಿವರ್ಷ ಒಂದೊಂದು ಊರಲ್ಲಿ ದಸರಾ ದರ್ಬಾರ್ ನಡೆಸುತ್ತಾ ಬಂದಿರುತ್ತಾರೆ. ಸ್ಥಳೀಯ ಭಕ್ತರು ಈ ಉತ್ಸವದ ವ್ಯವಸ್ಥೆ ಮಾಡುತ್ತಾರೆ. ಹತ್ತು ದಿನಗಳವರೆಗೆ ನಡೆಸುವ ಪೂಜೆ, ಪ್ರವಚನ, ಪ್ರಸಾದಕ್ಕಾಗಿ ಕೋಟ್ಯಾಂತರ ರೂ. ಖರ್ಚು ಆಗುತ್ತದೆ. ರೇಣುಕಾಚಾರ್ಯ ಪರಂಪರೆಯ ಸ್ವಾಮಿಗಳು ಮತ್ತು ಭಕ್ತರು ಅಪಾರ ಸಂಖ್ಯೆಯಲ್ಲಿ ಭಾಗವಹಿಸುತ್ತಿರುತ್ತಾರೆ. ಸರ್ವ ಸಂಗ ಪರಿತ್ಯಾಗಿಗಳಾದ ಮಠಾಧೀಶರು ಈ ರೀತಿ ರಾಜ ವೈಭವದಲ್ಲಿ ಮೆರೆಯುವುದು, ಭಕ್ತರ ಹೆಗಲುಗಳ ಮೇಲೆ ರಾರಾಜಿಸುವ ಪದ್ಧತಿಯ ಬಗ್ಗೆ ಹಿಂದಿನಿಂದಲೂ ಆಕ್ಷೇಪಗಳು ಕೇಳಿ ಬರುತ್ತಾ ಇದ್ದವು.

ಅಡ್ಡ ಪಲ್ಲಕಿ ಉತ್ಸವಕ್ಕೆ ಇದುವರೆಗೆ ತಾತ್ವಿಕ ಭಿನ್ನಾಭಿಪ್ರಾಯಗಳನ್ನು ಎತ್ತುತ್ತಿದ್ದವರು ಈ ಸಲ ಉತ್ಸವವನ್ನೇ ತಡೆಯಲು ಮುಂದಾಗಿರುವುದು ಗಮನಾರ್ಹ ಬೆಳವಣಿಗೆಯಾಗಿದೆ. ಉತ್ಸವಕ್ಕೆ ಬಹಿರಂಗ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಉತ್ಸವಕ್ಕೆ ಪರ್ಯಾಯವಾಗಿ ಬಸವತತ್ವ ಪ್ರವಚನ ಕಾರ್ಯಕ್ರಮವನ್ನು ಅದೇ ಜೇವರ್ಗಿಯಲ್ಲಿ ಆರಂಭಿಸಿದ್ದಾರೆ.

ದಸರಾ ದರ್ಬಾರ್ ಹಾಗೂ ಅಡ್ಡಪಲ್ಲಕಿ ಉತ್ಸವಗಳು ಪುರೋಹಿತಶಾಹಿ ವ್ಯವಸ್ಥೆಯನ್ನು ಬಲಪಡಿಸುತ್ತವೆ. ಅಲ್ಲಿ ಇತರ ಪರಂಪರೆಯ ಮಠಾಧೀಶರನ್ನು ಕೆಳಗೆ ಕೂಡಿಸಿ ಭೇದಭಾವ ಮಾಡಲಾಗುತ್ತದೆ. ಅಡ್ಡಪಲ್ಲಕಿ ಉತ್ಸವದ ಹೆಸರಿನಲ್ಲಿ ಮನುಷ್ಯನನ್ನು ಮನುಷ್ಯರು ಹೊತ್ತುಕೊಂಡು ಮೆರವಣಿಗೆ ಮಾಡುವುದು ಅನಿಷ್ಟ ಪದ್ಧತಿ. ಇದು ನಮ್ಮ ದೇಶದ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ ಎಂದು ಬಸವ ಪರಂಪರೆಯ ಸ್ವಾಮಿಗಳು ಮತ್ತು ಇತರ ಪ್ರಗತಿಪರ ಸಂಘಟನೆಗಳ ಅಭಿಪ್ರಾಯವಾಗಿದೆ.

ವಿವಿಧ ಧಾರ್ಮಿಕ ನಂಬಿಕೆಗಳ ಬಗ್ಗೆ, ಆಚರಣೆಗಳ ಬಗ್ಗೆ ನಮ್ಮ ಸಮಾಜದಲ್ಲಿ ಆಗಾಗ ಈ ರೀತಿಯ ವಿವಾದಗಳು ಬುಗಿಲೇಳುತ್ತಿರುತ್ತವೆ. ಇದು ಒಂದು ಆರೋಗ್ಯಕರ ಬೆಳವಣಿಗೆಯೆಂದೇ ಪರಿಗಣಿಸಬಹುದು. ಹಿಂದೇ ಯಾವುದೋ ಒಂದು ಕಾಲದಲ್ಲಿ ಆರಂಭವಾದ ಇಂತಹ ಧಾರ್ಮಿಕ – ಸಾಮಾಜಿಕ ನಂಬಿಕೆಗಳು ಯಾವಾಗಲೂ ಪ್ರಸ್ತುತವಾಗಿರುತ್ತವೆ ಎಂದು ಹೇಳಲಾಗದು. ಅರ್ಥ ಕಳೆದುಕೊಂಡ ಪದ್ಧತಿಗಳನ್ನು ನಾವು ಸಮಾಜದ ಮುನ್ನಡೆಯ ದೃಷ್ಟಿಯಿಂದ ಕೈಬಿಡ ಬೇಕಾಗುತ್ತದೆ.

ಹಿಂದೆ ರಾಜ ರಾಣಿಯರನ್ನು ಪಲ್ಲಕಿಗಳಲ್ಲಿ ಕೂಡಿಸಿ ಗುಲಾಮರಿಂದ ಹೊತ್ತೊಯ್ಯಲಾಗುತಿತ್ತು. ಹಿಂದೆ ರಾಜ ಪುರೋಹಿತರಿಗೆ ರಾಜನಷ್ಟೇ ಗೌರವ ಸಲ್ಲುತಿತ್ತು. ಆದರೆ ಪ್ರಜಾಪ್ರಭುತ್ವದ ಈ ಕಾಲಘಟ್ಟದಲ್ಲಿ ಅಂತಹ ಆಚರಣೆಗಳಿಗೆ ಅರ್ಥವಿಲ್ಲ. ಅಂತಹ ರಾಜವೈಭವವನ್ನು ಸಾಂಕೇತಿಕವಾಗಿ ಆಚರಿಸುವುದು ಸಹ ಅಮಾನವೀಯವೇ ಆಗಿರುತ್ತದೆ.


ಮಠಾಧೀಶರ ಪಾದಪೂಜೆ ಮಾಡುವುದು ಸಹ ಅದೇ ರೀತಿಯ ಅರ್ಥ ...ದುಕೊಂಡ ಪ್ರಾಚೀನ ಪದ್ಧತಿಯಾಗಿದೆ ಕೆಲವು ಮಠಾಧೀಶರು ಪಾದಪೂಜೆಯನ್ನು ಕೇವಲ ತಮ್ಮ ಆದಾಯದ ಮೂಲವಾಗಿ ಮಾಡಿಸಿಕೊಳ್ಳುತ್ತಾರೆ. ಅದಕ್ಕಿಂತ ಭಕ್ತ–ರಿಂದ ತಮಗೆ ಬೇಕಾಗುವ ಆರ್ಥಿಕ ನೆರವನ್ನು ನೇರವಾಗಿ ಕೇಳಿ ಪಡೆಯುವುದೇ ಹೆಚ್ಚು ಸಮಂಜಸ.

ಇಂತಹ ವಿವಾದಗಳು ಹುಟ್ಟಿಕೊಂಡಾಗ ಮುಕ್ತವಾದ ಚರ್ಚೆಗೆ ಆಸ್ಪದವಾಗಬೇಕೇ ಹೊರತು ಸಮಾಜದಲ್ಲಿ ದ್ವೇಷ, ದೌರ್ಜನ್ಯಗಳಿಗೆ ನೆಪವಾಗಬಾರದು.ಆರಂಭದಲ್ಲಿ ಸಾರ್ವಜನಿಕ ಚಿಂತನ – ಮಂಥನವೇ ಹೆಚ್ಚಾಗಿ ನಡೆಯಬೇಕು. ಎರಡೂ ಗುಂಪುಗಳ ನಡುವೆ ಅವಸರ, ಆವೇಶಕ್ಕೆ ಎಡೆ ಕೊಡಬಾರದು. ಇಂತಹ ಜಿಜ್ಞಾಸೆ ಆಯಾ ಸಮುದಾಯಗಳ ಒಳಗಿನಿಂದಲೇ ಮೂಡಿಬರುವುದು ಹೆಚ್ಚು ಒಳ್ಳೆಯದು.

ಮುಸ್ಲಿಂ ಸಮಾಜದಲ್ಲಿ ಮಹಿಳೆಯರಿಗೆ ಮಸೀದಿಗೆ ಹೋಗಿ ನಮಾಜ್ ಮಾಡುವ ಅವಕಾಶ ಇಲ್ಲ. ನಮಗೂ ಆ ಹಕ್ಕು ಇದೆ, ಕುರಾನ್ ಅದನ್ನು ನಿರ್ಬಂಧಿಸಿಲ್ಲ ಎನ್ನುವ ಧ್ವನಿ ಅಲ್ಲಲ್ಲಿ ಅವರೊಳಗಿಂದ ಹೊರಹೊಮ್ಮುತ್ತಿದೆ. ಇದನ್ನು ಮುಸ್ಲಿಂ ಸಮಾಜ ಸಕಾರಾತ್ಮಕವಾಗಿ ಪರಿಗಣಿಸುವುದು ಆಗಬೇಕಿದೆ. ಕಥೋಲಿಕ್ ಕ್ರೈಸ್ತರಲ್ಲಿ ಮಹಿಳೆಯರಿಗೆ ಗುರುದೀಕ್ಷೆ ನೀಡಲಾಗುವುದಿಲ್ಲ. ಕಥೋಲಿಕ್ ಕ್ರೈಸ್ತ ಮಹಿಳೆಯರು ಸನ್ಯಾಸ ದೀಕ್ಷೆ ಪಡೆಯಬಹುದು; ಆದರೆ ಪ್ರಾದ್ರಿಗಳಾಗುವಂತಿಲ್ಲ. ಆದರೆ ಕಥೋಲಿಕ್ ...ಸ್ತರಲ್ಲಿ ಮಹಿಳೆಯರಿಗೂ ಗುರುದೀಕ್ಷೆ ಪಡೆಯುವ ಸಮಾನ ಹಕ್ಕು ನೀಡಬೇಕೆಂಬ ...ದ ಪ್ರಬಲವಾಗುತ್ತಾ ಇದೆ. ಹೀಗೆ ಆಯಾ ಸಮಾಜದಲ್ಲಿ ಇರಬಹುದಾದ ಮನುಷ್ಯ ವಿರೋಧಿ ನಂಬಿಕೆಗಳನ್ನು, ಆಚರಣೆಗಳನ್ನು ಚರ್ಚೆಗೆ ಒಳಪಡಿಸುವ ಪ್ರಯತ್ನಗಳು ಸ್ವಾಗತಾರ್ಹ ಎಂದೇ ಹೇಳಬಹುದು.

ಸತ್ಯ ಶೋಧನೆಯಾಗಬೇಕಾದುದು ಯಾವುದು?

ಬಿಜೆಪಿ ಈಗ ತುಂಬಾ ಬ್ಯುಸಿಯಾಗಿದೆ!. ಅಧಿಕಾರ ಕಳೆದುಕೊಂಡು ಹತಾಶೆಯಲ್ಲಿರುವ ಅದು ಇದೀಗ ಅತೀ ಚುರುಕಾದಂತೆ ಆಡುತ್ತಿದೆ. ಎಂತಹ ವಿಚಿತ್ರ ನೋಡಿ! ರಾಜ್ಯದಲ್ಲಿ ಎಗ್ಗಿಲ್ಲದ ಅಕ್ರಮ ಗಣಿಗಾರಿಕೆ–ಸಾಗಾಣಿಕೆಗೆ ಮುಕ್ತ ಅವಕಾಶ ಕೊಟ್ಟು ಹಲವು ಅಕ್ರಮಗಳನ್ನು ಎಸಗಿ ಕೊನೆಗೆ ಜೈಲು ಸೇರಿ ಮೊಕದ್ದಮೆ ಎದುರಿಸುತ್ತಿರುವಾಗಲೂ ಅದೀಗ 'ಕೆಲವರ' ಗಣಿಗಾರಿಕೆ ಅಕ್ರಮಗಳ ವಿರುದ್ಧ ಪ್ರತಿಭಟನೆಯನ್ನು ನಡೆಸಿದೆ. ಇನ್ನೂ ವಿಚಿತ್ರವೆಂದರೆ ಅಮಾಯಕ ಮುಸ್ಲಿಂ ಯುವಕರ ಮೇಲೆ ದುರುದ್ದೇಶ ಅಥವಾ ಪೂರ್ವಗ್ರಹದಿಂದ ಮೊಕದ್ದಮೆ ಹೂಡಿ ಹಿಂಸಿಸದಂತೆ ಕೇಂದ್ರ ಗೃಹ ಸಚಿವರು ವಿಳಂಬವಾದರೂ ಕಳುಹಿಸಿದ ಸುತ್ತೋಲೆಯಿಂದಲೇ ಕೋಮು ಗಲಭೆಗೆ ಪ್ರಚೋದನೆಯಾಗುವುದು ಎಂದು ಬಿಜೆಪಿ ನಾಯಕರು ವಾದಿಸತೊಡಗಿದ್ದಾರೆ. ಹಾಗೇ ಮುಂದುವರೆದು ರಾಜ್ಯದಲ್ಲಿ 'ಬಹುಸಂಖ್ಯಾತರ' ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದು ಅದಕ್ಕಾಗಿ ಸತ್ಯ ಶೋಧನಾ ಸಮಿತಿಯನ್ನು ರಚಿಸುವುದಾಗಿ ವಕ್ತಾರ ಸಿ.ಟಿ.ರವಿ ಪ್ರಕಟಿಸಿದ್ದಾರೆ! ಈ ವರಸೆಗಳಾದರೂ ಯಾಕೆ?



ಅವರು ಹೇಗಾದರೂ ಮೋದಿಯನ್ನು ಪ್ರಧಾನಿಯನ್ನಾಗಿಸಲೇಬೇಕಲ್ಲವೇ? ಅದಕ್ಕಾಗಿಯೇನೋ ಬಿಜೆಪಿಯು ಗುಜರಾತ್‌ನ 'ಅಭಿವೃದ್ಧಿಯ ಮಾದರಿ'ಯನ್ನು ಬಾಯಲ್ಲಿ ಹೇಳುತ್ತಿದೆ. ಆದರೆ ಅಂತಹದು ಹೆಚ್ಚಿನ ಬಲವನ್ನು ತರುವ ವಿಶ್ವಾಸ ಅದಕ್ಕಿಲ್ಲ. ಹೀಗಾಗಿಯೇ ತನ್ನ 'ಹಿಂದುತ್ವದ ಕೋಮುವಾದೀ' ಅಜೆಂಡಾಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ. ಅದರ ಒಂದೇ ದಾರಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ತೀವ್ರ ಕೋಮು ವಿಭಜನೆ ತರುವುದು, ಅದಕ್ಕಾಗಿ ಗಲಭೆ ಹೊತ್ತಿಸುವುದು. ಅಲ್ಲಿ ಓಟಿನ ಬೆಂಕಿ ಕಾಯಿಸಿಕೊಳ್ಳುವುದು. ಇಲ್ಲೂ ಚಾತುರ್ವರ್ಣ್ಯದಂತೆ ಅವರದ್ದೇ ಆದ 'ಶ್ರಮ ವಿಭಜನೆ' ಇದೆ. ಸಾಮಾಜಿಕ ಕೋಲಾಹಲವನ್ನು ಸಂಘಪರಿವಾರದ ಉಳಿದವರು ವಹಿಸಿಕೊಂಡರೆ ಓಟಿನ ಬೇಟೆಗೆ ಬಿಜೆಪಿ ರಾಜಕೀಯವಾಗಿ ಯತ್ನಿಸುತ್ತದೆ. ಯಾವಾಗ ಬಿಜೆಪಿ ತನ್ನ ನೆಲೆ, ರಾಜಕೀಯ ಪ್ರಭಾವವನ್ನು ಕಳೆದುಕೊಳ್ಳುತ್ತದೆಯೋ ಆಗೆಲ್ಲಾ 'ಸಂಘವು' ಕೋಮುವಾದೀ ಕಾರ್ಯಾಚರಣೆ ಮೂಲಕ ಮತ್ತೇ ಬಲ–ನೆಲೆಯನ್ನು ಕ್ರೋಢೀಕರಿಸುತ್ತಾ ಬಂದಿರುವುದು ನಮ್ಮ ರಾಜ್ಯದಲ್ಲಿನ ಅನುಭವ. ಈಗಲೂ ಅದೇ ಹಳೇ ಚಾಳಿಗೆ ಮೊರೆ!

ಕೋಮುವಿಭಜನೆ ತರಬಲ್ಲ ಅಂತಹ ಗಲಭೆಗಳನ್ನೂ ದೇಶವ್ಯಾಪಿ, ಎಲ್ಲೆಂದರಲ್ಲಲ್ಲಿ ತರುವುದು ಅದರ ಕಾರ್ಯತಂತ್ರವಲ್ಲ; ಹಾಗಾದಲ್ಲಿ ಜನರಿಂದ ತಿರಸ್ಕಾರಕ್ಕೆ ಒಳಗಾಗಬೇಕಾಗುವುದೆಂಬ ಎಚ್ಚರವೂ ಅದಕ್ಕಿದೆ! ವಿಶೇಷವಾಗಿ ಸದಾ ಕೋಮುತ್ವೇಷದಿಂದ ಉರಿಯುವಂತೆ, ಸದಾ ತಲ್ಲಣ, ಆತಂಕದಲ್ಲೇ ಬದುಕು ಸಾಗಿಸುವಂತೆ ಮಾಡಿದ್ದ ನಮ್ಮ ಕರಾವಳಿಯಲ್ಲಿ ಜನತೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಸೋಲಿನ ಮೂಲಕ ಪಾಠ ಕಲಿಸಿದರು. ಆದ್ದರಿಂದಲೇ ಹಿಂದಿನ ಅನುಭವಗಳನ್ನು ಆಧರಿಸಿ ರಾಜಕೀಯವಾಗಿ ಫಲ ನೀಡಬಹುದೆಂಬ ಪ್ರದೇಶಗಳನ್ನು ಅದು ಆಯ್ದು ಮತೀಯ ಗಲಭೆ ಸೃಷ್ಟಿಸಲು ಯತ್ನಿಸುತ್ತಿದೆ. ಕೋಮು ಆಧಾರದಲ್ಲಿ ಜನರನ್ನು ಎತ್ತಿ ಕಟ್ಟಿ ವಿಭಜಿಸಿ ಮುಂಬರುವ ಚುನಾವಣೆಯಲ್ಲಿ ಅದರ ಲಾಭ ಹೊಡೆಯಲು ಹಂಚಿಕೆ ರೂಪಿಸಿದೆ.

ಆದ್ದರಿಂದಲೇ ಅದು ಉತ್ತರ ಪ್ರದೇಶ ಅಯೋಧ್ಯಾ ವಿವಾದವನ್ನು ಕೆದಕಿ ಆ ಮೂಲಕ ದೇಶದಲ್ಲಿ ಹಬ್ಬಿಸಲು ಯತ್ನಿಸಿತು. ಆದರೆ ಆ ಪ್ರಯತ್ನಕ್ಕೆ ಅಷ್ಟು ನಿರೀಕ್ಷಿತ ಸ್ಪಂದನ ಜನತೆಯಿಂದ ಸಿಗಲಿಲ್ಲ. ಆದರೆ ಅಷ್ಟಕ್ಕೇ ಕೂಡುವ ಜಾಯಮಾನ ಸಂಘಪರಿವಾರದ್ದೇನಲ್ಲ. ಸಂಸದರ ಸ್ಥಾನಗಳ ಲೆಕ್ಕದಲ್ಲಿ ಕರ್ನಾಟಕ ಅದರ ಮಹತ್ವದ ರಾಜ್ಯ. ಈಗಿರುವ 18 ಸ್ಥಾನವನ್ನು ಉಳಿಸಿಕೊಳ್ಳುವುದು ಅದಕ್ಕೆ ಸವಾಲು. ಇಲ್ಲಿ ಬಿಜೆಪಿ ಸೋತರೂ ಆರೆಸ್ಸೆಸ್ ನ ಶಕ್ತಿ, ಸಂಘಟನಾ ಸಾಮರ್ಥ್ಯವೇನೋ ಕಡಿಮೆಯಾಗಿಲ್ಲ. ಹೀಗಾಗಿಯೇ ಅದು ಮುಂಬರುವ ಲೋಕಸಭಾ ಚುನಾವಣೆಯ ಅವಧಿಯೊಳಗೆ ರಾಜಕೀಯ ಶಕ್ತಿ–ನೆಲೆಯ ಕ್ರೋಢೀಕರಣಕ್ಕೆ ಪ್ರಯತ್ನ ನಡೆಸಿದೆ. ರಾಷ್ಟ್ರ ಮಟ್ಟದಲ್ಲಿಯೇ ಹಿಂದುತ್ವವೇ ತನ್ನ ಮೂಲ ಅಜೆ–ಂಡಾ ಎಂದು ಪುನರುಚ್ಚರಿಸಿದೆ.


ಇ ದ ರ ಲಿ ಆರಿಸಿಕೊಂಡಿರುವುದು ದೊಡ್ಡ ಹಬ್ಬಗಳನ್ನು. ಅದರಲ್ಲೂ ಅತ್ಯಂತ ವ್ಯಾಪಕವಾಗಿ ಆಚರಿಸಲ್ಪಡುವ, ವಿಶೇಷವಾಗಿ ಯುವಜನರೇ ಹೆಚ್ಚಾಗಿ ತೊಡಗುವ ಗಣೇಶನ ಹಬ್ಬವನ್ನು. ಇದನ್ನು ಸಾರ್ವಜನಿಕ ಆಚರಣೆಯನ್ನಾಗಿಸಿ ಆ ಸಂದರ್ಭಗಳನ್ನು ತನ್ನ ಗುರಿಗೆ ಬಳಸುವ ಹುನ್ನಾರಗಳನ್ನು ಹೆಣೆದಿತ್ತು. ಇತ್ತೀಚಿನಲ್ಲಿ ಚಿಕ್ಕಮಗಳೂರಿನ ಆಲ್ದೂರಿನಲ್ಲಿ , ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ, ತುಮಕೂರು ಜಿಲ್ಲೆಯ ಶಿರಾದಲ್ಲಿ ನಡೆದ ಗಲಭೆಗಳನ್ನು ಪರಿಶೀಲಿಸಬೇಕು. ಖಂಡಿತಕ್ಕೂ ಇವೆಲ್ಲವೂ ಪೂರ್ವ ಯೋಜಿತವೆಂದೇ ಕಾಣುತ್ತವೆ. ಅವುಗಳನ್ನು ಮಾಡಿದವರು ಯಾರು? ಅದರ ಫಲ ಪಡೆಯಲು ಯತ್ನಿಸುವವರೇ ಇದೀಗ ಉಲ್ಟಾ ಶೋಧನಾ ಸಮಿತಿಯನ್ನೂ ನೇಮಿಸುತ್ತಿದ್ದಾರೆ! ಸತ್ಯಶೋಧನೆಯಾಗಬೇಕಾದುದು ಯಾವುದು? ಯಾರದ್ದು?

ಇದೇ ಹೊತ್ತಿನಲ್ಲಿ ಅಲ್ಪಸಂಖ್ಯಾತ ಮೂಲಭೂತವಾದಿಗಳ ಹುನ್ನಾರದ ಬಗೆಯೂ ಕುರುಡಾಗಿರಬೇಕಿಲ್ಲ. ಈಗಲೂ ಸಾಮರಸ್ಯಕ್ಕೆ ವಿಷ ಹಿಂಡುವವರ ಬಗ್ಗೆ ರಾಜ್ಯದ ಎಲ್ಲಾ ಸಮುದಾಯಗಳ ಜನತೆ ಎಚ್ಚರ ವಹಿಸಲೇ ಬೇಕಿದೆ. ಯಾಕೆಂದರೆ ಮುಂದೆ ದಸರಾ, ದೀಪಾವಳಿಯಂತಹ ಹಬ್ಬಗಳಿವೆ. ಆ ಸ್ನೇಹ, ಸೌಹಾರ್ಧತೆ, ಸಂಭ್ರಮ, ಸಂಕುಚಿತ ರಾಜಕೀಯ ದಳ್ಳುರಿಗೆ ದಹಿಸುವಂತಾಗಬಾರದು.



ಯುವಜನ ಚಳುವಳಿಯ ಸಂಘಟಕ ಎಸ್. ಶಿವರಾಮ್ ಇನ್ನಿಲ್ಲ.

ಸಣ್ಣ ವಯಸ್ಸಿನಲ್ಲೇ ಊರು ತೊರೆದು ಬೆಂಗಳೂರಿಗೆ ಬಂದು ನಂತರ ಜನಚಳುವಳಿ, ಹೋರಾಟಗಳಲ್ಲಿ ಕಲೆತು ಯುವಜನ ಚಳುವಳಿ-ಸಂಘಟನೆ ಕಟ್ಟಿ ತ್ಯಾಗಮಯ ಜೀವನ ನಡೆಸಿದ ಒಬ್ಬ ವಿಶಿಷ್ಟ ಸಂಗಾತಿ ಎಸ್. ಶಿವರಾಮ್.



ಆರಂಭದಲ್ಲಿ ಸಂಗಾತಿ ಶಿವರಾಂ ತಮ್ಮ ಊರು-ಮೂಲ ಇತ್ಯಾದಿಗಳ ಬಗೆಗೆ ಕೇಳಿದವರಿಗೆ ತನ್ನದು ಒಂಟಿ ಜೀವ, ಯಾವ ಊರು ಗೊತ್ತಿಲ್ಲ. ಸಂಬಂಧಿಕರು ಇಲ್ಲವೇ ಇಲ್ಲವೆಂದು ಹೇಳುತ್ತಿದ್ದರು. ಅಷ್ಟೇ. ಆ ಬಗ್ಗೆ ಮಾತು ಮುಂದುವರಿಸುತ್ತಿರಲಿಲ್ಲ. ಸಣ್ಣ ಹುಡುಗನಾಗಿದ್ದಾಗಲೇ ಊರುಬಿಟ್ಟು ಬೆಂಗಳೂರಿನ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು ಎಂಬುದು ಮಾತ್ರ ಗೊತ್ತು. 'ಹಾಗೂ ಹೀಗೂ ಕಾಲ ಕಳೆಯುತ್ತ ಸುಲ್ತಾನ್‌ಪೇಟೆ ಸಂದುಗಳಲ್ಲಿ, ಸಿಟಿ ಮಾರ್ಕೆಟ್, ಚಾಮರಾಜಪೇಟೆ ರಸ್ತೆಗಳಲ್ಲಿ ತಿರುಗಾಡಿ ಕಲಾವಿದರೊಬ್ಬರ ಸಂಪರ್ಕ ಪಡೆದು ಬೋರ್ಡ್, ಬ್ಯಾನರ್ ಬರೆಯುವುದನ್ನು ಕಲಿತುಕೊಂಡೆ' ಎಂದು ಒಮ್ಮೆ ಹೇಳಿದ್ದರು. ಈ ಕಲಿಕೆಯೊಡನೆ ಬೆಂಗಳೂರಿನ ಸುಲ್ತಾನ್‌ಪೇಟೆಯಲ್ಲಿ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ, ಜಿಲ್ಲಾ ಸಮಿತಿಗಳೆಲ್ಲವೂ ಇದ್ದ ಪಕ್ಷದ ಕಛೇರಿ ಮೆಟ್ಟಿಲೇರಿದವರು ನಮ್ಮ ಎಸ್.ಶಿವರಾಂ.

ಕಛೇರಿಯಲ್ಲೇ ಕೆಲವು ವರುಷ ತಂಗಿದ್ದ ಅವರು ಪಕ್ಷದ ಕಛೇರಿ ಕೆಲಸಗಳಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಿದರು. ನಂತರ 79-80ರ ಕಾಲಾವಧಿಯಲ್ಲಿ ರಾಜ್ಯದಲ್ಲಿ ಯುವಜನ ಸಂಘಟನೆಯನ್ನು ಕಟ್ಟಬೇಕೆಂಬ ಯತ್ನಗಳು ಆರಂಭವಾದಾಗ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ('ಡಿವೈಓ')ವನ್ನು ಸಂಘಟಿಸುವ ಕೆಲಸದಲ್ಲಿ ತೊಡಗಿಸಿಕೊಂಡರು. ಅದೇ ಸುಲ್ತಾನ್ ಪೇಟೆ ಕಚೇರಿಯಲ್ಲಿ ತಮಗೆ ಇದ್ದ-ಬದ್ದ ಸಂಪರ್ಕಗಳಿಂದ, ಯುವ ಸಂಗಾತಿಗಳ ವಿಳಾಸ ಪಡೆದು ನೂರಾರು ಪೋಸ್ಟ್ ಕಾರ್ಡ್‌ಗಳನ್ನು ಬರೆದು ಎಲ್ಲಾ ಗೆಳೆಯರಿಗೂ ಯುವಜನರ ಸಭೆಗೆ ಬರಲು ಕೋರಿದರು.

ಜನಪರ ಹೋರಾಟ, ಸಂದೇಶಗಳ ಗೋಡೆ ಬರಹ ಬರೆಯುವುದೆಂದರೆ ಶಿವರಾಂಗೆ ಬಹಳ ಪ್ರೀತಿ. ಲಾಲ್‌ಬಾಗ್‌ನಲ್ಲಿ 'ಕ್ಯೂಬಾ ಯುವಜನ ಮೇಳ' ನಡೆದ ಸಮಯದಲ್ಲಿ ಬೆಂಗಳೂರಿನ ಗೋಡೆಗಳ ಮೇಲೆ ಗೋಡೆಗಳು ಮಾತನಾಡುವಂತೆ 'ಗೋಡೆಬರಹ' ಮೂಡಿಸಿ ಜನರ ಗಮನ ಸೆಳೆಯುವಂತೆ ಮಾಡಿದವರಲ್ಲಿ ಎಸ್.ಶಿವರಾಂ ಪ್ರಮುಖರು. ಶಿವರಾಂ ಡಿವೈಓ ಸಂಘಟನೆ ಒಂದೆರಡು ವರ್ಷದಲ್ಲಿ ರಾಜ್ಯದ ಹಲವು ಜಿಲ್ಲೆಗಳಿಗೆ ಹರಡಲು ದುಡಿದರು. 1980ರಲ್ಲಿ ಪಂಜಾಬಿನ ಲೂಧಿಯಾನದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ)ನ ಸ್ಥಾಪನಾ ಸಮ್ಮೇಳನ ನಡೆಯಿತು. ರಾಜ್ಯದಿಂದ ಕಾ॥ ಜಿ.ವಿ.ಶ್ರೀರಾಮರೆಡ್ಡಿಯವರು ಕೇಂದ್ರ ಸಮಿತಿಗೆ ಆಯ್ಕೆಯಾದರು. ಇವರ ಜೊತೆಯಲ್ಲೇ ನಿರಂತರವಾಗಿ ಶಿವರಾಂ ಡಿವೈಎಫ್‌ಐ ಸಂಘಟನೆ ಕಟ್ಟಲು ಶ್ರಮಿಸಿದರು. ಎರಡು ಅವಧಿಗೂ ಹೆಚ್ಚು ಕಾಲ ಅವರು ಡಿವೈಎಫ್‌ಐ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು.

ಶಿವರಾಂ ಬೆಂಗಳೂರಿನ ಶ್ರೀರಾಮಪುರದಲ್ಲಿ ಹಲವು ಘಟಕಗಳ ರಚನೆಗೆ ಪ್ರೇರಣೆಯಾದರು. ಪೀಣ್ಯ ಪ್ರದೇಶ, ರಾಜಗೋಪಾಲನಗರದಲ್ಲಿ ಒಮ್ಮೆ ಭಾರಿ ಮಳೆಯಿಂದಾಗಿ ಜನ ಮನೆ ಮಾರು ಕಳೆದುಕೊಂಡು ನಿರಾಶ್ರಿತರಾದರು. ಆಗ ಶಿವರಾಂ ಸ್ಥಳೀಯ ಡಿವೈಎಫ್‌ಐ ಘಟಕದೊಂದಿಗೆ ನಮ್ಮೆಲ್ಲರನ್ನು ಕೂಡಿಸಿಕೊಂಡು ವಿಮಾ ಸಂಘಟನೆ, ಜನವಾದಿ ಮಹಿಳಾ ಸಂಘ ಜೊತೆಗೂಡಿ ನೊಂದ ಜನರಿಗೆ ರಾಗಿ ಆಹಾರ ಧಾನ್ಯ ಹಂಚಿ ನೆರವು ಒದಗಿಸಲು ಕಾರಣರಾದರು.

ನಂತರ ಚಾಮರಾಜಪೇಟೆಯಲ್ಲಿ ಎಸ್ಸೆಫೈ-ಡಿವೈಎಫ್‌ಐ ವಿದ್ಯಾರ್ಥಿ-ಯುವಜನ ಸಂಘಟನೆಗಳ ಜಂಟಿ ಕಛೇರಿ ಆರಂಭಿಸಲಾಯಿತು. ಶಿವರಾಂ-ಎಸ್. ಆರ್. ಆರಾಧ್ಯ ಜೊತೆಗಿದ್ದು ಕೆಲಸ ನಿರ್ವಹಿಸುತ್ತಿದ್ದರು. ಚಾಮರಾಜಪೇಟೆಯ ಸ್ಥಳೀಯ ಕನ್ನಡ ಪರ ಸಂಘಗಳ ಜೊತೆ ಸೇರಿ ಅಲ್ಲಿನ 2ನೇ ಮುಖ್ಯರಸ್ತೆಗೆ ಸಾಹಿತಿ ವಿ.ಸೀತಾರಾಮಯ್ಯ ರವರ ಹೆಸರು, ರಾಯನ್ ಸರ್ಕಲ್‌ಗೆ ಟಿ.ಪಿ. ಕೈಲಾಸಂ ಹೆಸರು ಇಡಲು ಮುತುವರ್ಜಿ ವಹಿಸಿದರು. ಅವರು ರಾಯಚೂರು ಸಂಗಾತಿಗಳ ನೆರವಿನಿಂದ ಮದುವೆ ಮಾಡಿಕೊಂಡರು.

ಶಿವರಾಂ ಅವರದ್ದು ಸರಳ ಜೀವನ. ನೇರ ನುಡಿ. ಸಂಗಾತಿಗಳ ಜೊತೆ ಪ್ರೀತಿಯಿಂದ ಇರುತ್ತಿದ್ದರು. ಅವರ ಕುಟುಂಬ[…] ಸದಸ್ಯರ ಜೊತೆಗೂ ಉತ್ತಮ ಬಾಂಧ[…] ಇಟ್ಟುಕೊಳ್ಳುತ್ತಿದ್ದರು. ಅನೇಕ ಸಂಗಾತಿಗಳಿ[…] ತಮ್ಮ ಮನೆಯಲ್ಲಿ ತಿಂಗಳುಗಟ್ಟಲೆ ಆಶ್ರಯ ನೀಡಿದ್ದರು. ಕಷ್ಟದಿಂದ ಬಂದ ಸಂಗಾತಿಗಳಿ[…] ಧೈರ್ಯ ತುಂಬಿ ಉತ್ಸಾಹದಲ್ಲಿ ಕೆಲ[…] ಮಾಡುವಂತೆ ಪ್ರೇರೇಪಿಸುತ್ತಿದ್ದರು[…] ಚಳುವಳಿಯ ಭಾಗವಾಗಿ 1984 ರ[…] ಮಾಸ್ಕೋದಲ್ಲಿ ನಡೆದ ವಿಶ್ವ ಯುವಜನ-ವಿದ್ಯಾರ್ಥಿ ಉತ್ಸವಕ್ಕೆ ಪ್ರತಿನಿಧಿಯಾಗಿ ಒಮ[…] 'ಸೋವಿಯತ್ ರಷ್ಯಾ'ಕ್ಕೂ ಹೋಗಿ ಬಂದರು[…] ಆ ಬಗ್ಗೆ ಕಿರುಹೊತ್ತಿಗೆಯನ್ನೂ ಬರೆದರು[…] ಸಂಗಾತಿಗಳಲ್ಲಿ ಓದುವ ಅಭ್ಯಾಸವನ್ನೂ ಮೈಗೂಡಿಸಿದರು.

ಟೈಲರಿಂಗ್ ವೃತ್ತಿ ಮಾಡುತ್ತಿದ್ದ ಅವ[…] ಪತ್ನಿ ರಾಯಚೂರಿಗೆ ತೆರಳಿದ ಮೇಲೆ ಎರಡ[…] ಗಂಡು ಮಕ್ಕಳೊಂದಿಗೆ ಬೆಂಗಳೂರಿನಲ್ಲೇ ಉಳಿದು ಓದಿಸಿ ಬೆಳೆಸಿದರು. 201[…] ಸೆಪ್ಟೆಂಬರ್ ಮೊದಲವಾರದಲ್ಲಿ ಅವರ[…] ರಾಯಚೂರಿನಲ್ಲಿ ನಿಧನರಾಗಿದ್ದಾರೆ. ಅವರಿ[…] ಸುಮಾರು 58 ವರ್ಷ ವಯಸ್ಸಾಗಿತ್ತು[…] ಅವರು ಅನಾರೋಗ್ಯದಿಂದ ರಾಯಚೂ[…] ಆಸ್ಪತ್ರೆಯಲ್ಲಿ ನಿಧನರಾದಾಗ ಅಲ್ಲಿಯ ಪಕ್ಷ[…] ತಾಲೂಕು ಕಾರ್ಯದರ್ಶಿ ಕೆ.ಜಿ. ವೀರೇಶ[…] ಸಿಐಟಿಯುವಿನ ಚನ್ನಬಸಯ್ಯ, ಜೆಎ[…] ಡಿವೈಎಫ್‌ಐನ ಕೆ. ಮಲ್ಲೇಶಪ್ಪ, ನಾಗೇಂದ್ರ[…] 'ರಿಂಸ್'ನ ಈರಣ್ಣ ಮತ್ತು ಹಲವು ಹಿತೈಷಿಗಳ[…] ಅಂತ್ಯ ಸಂಸ್ಕಾರವನ್ನು ನಡೆಸಿ ಭಾವ ಪೂರ್ಣ[…] ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ಶ್ರದ್ಧಾಂಜಲಿ

ಸಿಪಿಐ(ಎಂ), ಕರ್ನಾಟಕ ರಾಜ್ಯ ಸಮಿತಿ[…] ಡಿವೈಎಫ್‌ಐ ಸಂಘಟನೆ ಅಗಲಿದ ಸಂಗಾತಿ[…] ಶ್ರದ್ಧಾಂಜಲಿ ಸಲ್ಲಿಸಿವೆ. 'ಜನಶಕ್ತಿ'ಯು[…] ಸಂಗಾತಿಯ ಅಗಲಿಕೆಯ ಸಂದರ್ಭದ[…] ಕಂಬನಿ ಮಿಡಿಯುತ್ತದೆ.

– ಗೋಪಾಲಕೃಷ್ಣ ಅರಳಹಳ್ಳಿ

ತುಮಕೂರು: 'ಕಾಯ್ದೆ ಜಾರಿಮಾಡಿ ಬೀದಿಬದಿ ವ್ಯಾಪಾರಿಗಳಿಗೆ ವ್ಯಾಪಾರ ಮಾಡಿ ಬದುಕಲು ಬಿಡಿ' – ಸಮಾವೇಶದದಲ್ಲಿ ಒತ್ತಾಯ

ತುಮಕೂರು ಜಿಲ್ಲಾ ಫುಟ್‌ಪಾತ್ ವ್ಯಾಪಾರಿಗಳ ಸಂಘ (ಸಿಐಟಿಯು)ದ ನೇತೃತ್ವದಲ್ಲಿ ಸೆಪ್ಟೆಂಬರ್, 23, 2013 ರಂದು ತುಮಕೂರು ನಗರದ ಟೌನ್‌ಹಾಲ್ ವೃತ್ತದಲ್ಲಿ ಸಮಾವೇಶಗೊಂಡು 'ಬೀದಿಬದಿ ವ್ಯಾಪಾರಿಗಳ ಸಂರಕ್ಷಣಾ ಕಾಯಿದೆ 2013'ರ ಅನ್ವಯ ಪುಟ್‌ಪಾತ್ ವ್ಯಾಪಾರಿಗಳಿಗೆ ವ್ಯಾಪಾರ ಮಾಡಿ ಬದುಕಲು ಅನುವು ಮಾಡಿಕೊಡಬೇಕೆಂದು ನಗರಸಭೆ ಹಾಗೂ ಜಿಲ್ಲಾಡಳಿತವನ್ನು ಒತ್ತಾಯಿಸಲಾಯಿತು.



ಪ್ರತಿಭಟನೆ ಉದ್ದೇಶಿಸಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಸೈಯದ್ ಮುಜೀಬ್ ಮಾತನಾಡುತ್ತಾ ಸಿಐಟಿಯು ನೇತೃತ್ವದಲ್ಲಿ ನಿರಂತರವಾಗಿ ಕಳೆದ 10-12 ವರ್ಷಗಳಿಂದ ಪುಟ್‌ಪಾತ್ ವ್ಯಾಪಾರಿಗಳ ಬೇಡಿಕೆಗಳ ಸಂಬಂಧ ನಗರಸಭೆ, ಜಿಲ್ಲಾಡಳಿತ ಪೊಲೀಸ್ ಇಲಾಖೆಗೆ ಹೋರಾಟ ನಡೆಸಿ ಮನವಿ ಸಲ್ಲಿಸುತ್ತಾ ಬಂದಿದೆ. ಆದರೆ ನಗರಸಭೆ, ಪುಟ್‌ಪಾತ್ ವ್ಯಾಪಾರಿಗಳಿಗೆ 'ವ್ಯಾಪಾರ ವಲಯ' ಗುರುತಿಸಿ ಗುರುತಿನ ಚೀಟಿ ನೀಡಲು ಸಾಧ್ಯವಾಗಿಲ್ಲ. ಈಗಲಾದರೂ ಕಾಯ್ದೆಯ ಅನ್ವಯ ಅಗತ್ಯ ರಕ್ಷಣೆ ಹಾಗೂ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕಾದದ್ದು ತುಮಕೂರು ನಗರಸಭೆಯ ಸಂವಿಧಾನಬದ್ಧ ಕರ್ತವ್ಯವಾಗಿದೆ ಎಂದು ಒತ್ತಾಯಿಸಿದರು. ಪೊಲೀಸ್ ಇಲಾಖೆ ನಗರದ ಎಲ್ಲಾ ಪುಟ್‌ಪಾತ್ ವ್ಯಾಪಾರಿಗಳಿಗೆ ನೀಡಿರುವ ನೋಟೀಸನ್ನು ವಾಪಸ್ ಪಡೆದು ಅವರಿಗೆ ಸಾರ್ವಜನಿಕರಿಗೆ ತೊಂದರೆ ಆಗದಂತೆ ವ್ಯಾಪಾರ ಮಾಡಲು ಅನುವು ಮಾಡಿಕೊಡಬೇಕೆಂದು ಆಗ್ರಹಿಸಿದರು.

ನಗರಸಭೆ ಆಯುಕ್ತರು ಹಾಗೂ ಅಧ್ಯಕ್ಷರಾದ ಗೀತಾ ರುದ್ರೇಶ್ ಮನವಿ ಸ್ವೀಕರಿಸಿ ಅಕ್ಟೋಬರ್ 5 ರಂದು ನಡೆಯುವ ನಗರಸಭೆ ಸಭೆಯಲ್ಲಿ ಬೇಡಿಕೆಗಳ ಸಂಬಂಧ ಚರ್ಚೆಯಲ್ಲಿಟ್ಟು ಚರ್ಚಿಸಿ ಅನುಕೂಲ ಮಾಡಿಕೊಡುತ್ತೇವೆ ಎಂದರು. ಪುಟ್‌ಪಾತ್ ವ್ಯಾಪಾರಿಗಳಿಗೆ ತೊಂದರೆಯಾದರೆ ವ್ಯಾಪಾರಿಗಳ ಜೊತೆಗೆ ತಾವೂ ಸಹ ಹೋರಾಟಕ್ಕೆ ಇಳಿಯುತ್ತೇವೆ ಎಂದು ಅವರು ಭರವಸೆ ನೀಡಿದರು.


ನಗರಸಭೆಯಿಂದ ಅಶೋಕರ[…] ಮುಖಾಂತರ ಜಿಲ್ಲಾಧಿಕಾರಿಗಳ ಕಚೇರಿವರೆಗೂ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗ[…] ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿ[…] ಮಾತನಾಡಿದ ಜಿಲ್ಲಾಧಿಕಾರಿಗಳು ಕಾಯ[…] ಅನ್ವಯ ಜಾರಿ ಮಾಡಲು ಕಾಲಾವಕಾ[…] ಬೇಕಾಗಿರುತ್ತದೆ. ಈ ಸಂಬಂಧ ನಗರಸ[…] ಆಯುಕ್ತರ ಜೊತೆ ಸಭೆ ನಡೆಸಿ ಸೂ[…] ತೀರ್ಮಾನ ಕೈಗೊಳ್ಳುತ್ತೇವೆ ಎಂದರು[…] ಪೊಲೀಸರು ನೀಡಿರುವ ನೋಟೀ[…] ಬಗ್ಗೆ ಪ್ರಸ್ತಾಪಿಸಿದಾಗ ಪೊಲೀ[…] ವರಿಷ್ಠಾಧಿಕಾರಿಗಳ ಜೊತೆ ಮಾತನಾ[…] ಬಗೆಹರಿಸಲಾಗುವುದು ಎಂದರು. ಈ[…] ಹಾಲಿ ವ್ಯಾಪಾರ ಮಾಡುತ್ತಿರುವ ಸ್ಥಳಗಳ[…] ಸಾರ್ವಜನಿಕರಿಗೆ ತೊಂದರೆಯಾಗದಂ[…] ವ್ಯಾಪಾರ ಮಾಡಬೇಕೆಂದರು.

ಸಿಐಟಿಯು ಜಿಲ್ಲಾ ಉಪಾಧ್[…] ಬಿ.ಉಮೇಶ್, ಕಾರ್ಯದರ್ಶಿ ಎನ[…] ಕೆ.ಸುಬ್ರಹ್ಮಣ್ಯ, ಖಜಾಂಚಿ ಲಕ್ಷ್ಮಮ್ಮ ಸಂಘಟನ[…] ಕಾರ್ಯದರ್ಶಿ ಇಬ್ರಾಹಿಂ ಮಾತನಾಡಿದ[…] ಪ್ರತಿಭಟನೆಯ ನೇತೃತ್ವವನ್ನು ಸೈಯದ[…] ಜಿಯಾಉಲ್ಲಾ, ಶಬ್ಬೀರಿ, ವೆಂಕಟೇಶ[…] ಜಾಕೀರ್, ರಾಜಣ್ಣ, ಮೊಹಮದ್ ಯಾಸೀನ[…] ಮುಂತಾದವರು ವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಎಲ್ಲಿದೆಯೋ..ನ್ಯಾಯ.?
ಧರ್ಮಸ್ಥಳ ಸೌಜನ್ಯ ಅತ್ಯಾಚಾರ ಪ್ರಕರಣಕ್ಕೆ ಒಂದು ವರ್ಷ :

ಪ್ರಶಾಂತ್ ಬೆಳ್ತಂಗಡಿ



ಧರ್ಮಸ್ಥಳದ ಕು. ಸೌಜನ್ಯ ಅತ್ಯಾಚಾರಕ್ಕೊಳಗಾಗಿ, ಕೊಲೆಯಾಗಿ ಅಕ್ಟೋಬರ್ 9ಕ್ಕೆ 1ವರ್ಷ ತುಂಬಲಿದೆ. ಹೌದು, ಕಳೆದ ವರ್ಷ ಅಯಿಯಿಕ್ಟೋಬರ್ 9ರಂದು ಸಂಜೆ 4.30ರ ಸುಮಾರಿಗೆ ಉಜಿರೆಯ ಎಸ್.ಡಿ.ಎಂ. ಕಾಲೇಜಿನಿಂದ ಮನೆಗೆ ಹೋಗಲು ಧರ್ಮಸ್ಥಳ ಸ್ನಾನ ಘಟ್ಟದಲ್ಲಿ ಬಸ್ಸಿನಿಂದ ಇಳಿದು ಮನೆ ಕಡೆ ಹೆಜ್ಜೆ ಹಾಕಿದಳು. ಅಂದು ಜೋರಾಗಿ ಮಳೆ ಬರುತ್ತಿತ್ತು . ಆದರೆ ಆ ದಿನ ಸೌಜನ್ಯ ಮನೆ ಸೇರಲೇ ಇಲ್ಲ. ಮನೆಮಂದಿ ಗಾಬರಿಗೊಂಡು ಪೋಲೀಸ್ ಠಾಣೆಗೆ ದೂರು ನೀಡಿ ರಾತ್ರಿಯಿಡೀ ಕುಟುಂಬಸ್ಥರ ಮನೆ, ಕಾಡು-ಮೇಡು ಹುಡುಕಾಡಿದರು. ಸೌಜನ್ಯ ಮಾತ್ರ ಪತ್ತೆಯಾಗಲೇ ಇಲ್ಲ. ಮರುದಿನ ಬೆಳಿಗ್ಗೆಯಿಂದ ಮತ್ತೆ ಹುಡುಕಾಟ ಆರಂಭವಾಯಿತು. ಮಧ್ಯಾಹ್ನ 11.30ರ ಸುಮಾರಿಗೆ ರಾಜ್ಯ ಹೆದ್ದಾರಿಯಿಂದ ಸುಮಾರು 30 ಮೀಟ- ರ್ ದೂರದಲ್ಲಿ ಅರೆನಗ್ನವಾಗಿ ಮೃತದೇಹ ಪತ್ತೆಯಾಯಿತು. ಅವಳು ಧರಿಸಿದ್ದ ಕಾಲೇಜಿನ ಸಮವಸ್ತ್ರ ಪೂರ್ತಿಯಾಗಿ ಹರಿದಿತ್ತು. ಒಳಉಡುಪುಗಳು ನಾಪತ್ತೆಯಾಗಿತ್ತು. ಮೃತ ದೇಹದ ಸಮೀಪ ಅಪರಿಚಿತ ದೂರವಾಣಿ ಸಂಖ್ಯೆಯಿರುವ ಚೀಟಿ ಪತ್ತೆಯಾಯಿತು. ಸೌಜನ್ಯ ನಾಪತ್ತೆಯಾದ ದಿನ ಜೋರಾಗಿ ಮಳೆ ಸುರಿಯುತ್ತಿದ್ದರೂ ಕೂಡ ಅವಳ ಸಮವಸ್ತ್ರ, ಕಾಲೇಜಿನ ಬ್ಯಾಗ್, ಪುಸ್ತಕ ಯಾವುದು ಒದ್ದೆಯಾಗಿರಲಿಲ್ಲ. ಮೃತದೇಹ ನೋಡಿದಾಗ ತೀರ ವಿಕೃತವಾಗಿ ಅತ್ಯಾಚಾರ ನಡೆಸಿ ಕೊಲೆ ನಡೆಸಿರುವುದು ಕಂಡು ಬರುತ್ತಿತ್ತು.

ಅ. 11 ರಂದು ತಾಲೂಕಿನಾದ್ಯಂತ ಜನರ ಆಕ್ರೋಶ ಮುಗಿಲು ಮುಟ್ಟಿತ್ತು. ಉಜಿರೆ ಬಸ್ ನಿಲ್ದಾಣ, ತಾಲೂಕು ಕಚೇರಿ ಎದುರು, ಪೋಲೀಸ್ ಠಾಣೆಯ ಎದುರು ಮೇಲಿಂದ ಮೇಲೆ ಪ್ರತಿಭಟನೆಗಳು ನಡೆದವು. ಜನರ ಆಕ್ರೋಶ ಜೋರಾಗುತ್ತಿದ್ದಂತೆಯೇ ಯಾ- ರೋ ಒಬ್ಬ ಮಾನಸಿಕ ಅಸ್ವಸ್ಥನನ್ನು ಬಂಧಿಸಿ, ಆತನೇ ಅತ್ಯಾಚಾರಿ ಕೊಲೆಗಡುಕನೆಂದು ಕೇಸು ಜಡಿದು, ಜೈಲಿಗೆ ಹಾಕಿಸಲಾಯಿತು. ಆದರೆ ಜನರು ಮಾತ್ರ ಪೋಲೀಸರ ವಾದವನ್ನು ಒಪ್ಪಲು ಸಿದ್ದರಿಲ್ಲ. ನಿಜವಾದ ಆರೋಪಿಗಳನ್ನು ಬಂಧಿಸಬೇಕು, ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕೆಂದು ಒತ್ತಾಯಿಸಿ ಡಿವೈಎಫ್ಐ ಮತ್ತು ಜೆ.ಎಂ.ಎಸ್ ಮಾತ್ರ ಪ್ರತಿಭಟನೆಯನ್ನು ನಡೆಸಿದವು.

ಪೋಲೀಸರ ಸಂಶಯಾಸ್ಪದ ನಡೆ :

ಒಟ್ಟು ಪ್ರಕರಣದಲ್ಲಿ ಪೋಲೀಸರ ತನಿಖೆ ಸಂಶಯಾಸ್ಪದವಾಗಿದೆ. ಮೃತದೇಹದ ಸಮೀಪ ದೊರೆತ ಅಪರಿಚಿತ ದೂರವಾಣಿ ಸಂಖ್ಯೆ ಯಾರದು ಎಂಬುದರ ಬಗ್ಗೆ ತನಿಖೆಯೇ ನಡೆಸಿಲ್ಲ. ಸೌಜನ್ಯಳ ಮೃತದೇಹದಲ್ಲಿ ನಾಪತ್ತೆಯಾದ ಒಳಉಡುಪುಗಳ ಪತ್ತೆ ಇನ್ನೂ ಆಗಿಲ್ಲ. ಆದರೆ ಪೋಲೀಸರು ಸೌಜನ್ಯಳ ಮನೆಯಿಂದ ಕೆಲವೊಂದು ಒಳಉಡುಪುಗಳನ್ನು ಒಯ್ದಿರುವುದು ಸಂಶಯಕ್ಕೆ ಎಡೆ ಮಾಡಿ ಕೊಟ್ಟಿದೆ. ಜೋರಾಗಿ ಮಳೆ ಬರುತ್ತಿದ್ದರೂ



ಸೌಜನ್ಯಳ ಕಾಲೇಜಿನ ಸಮವಸ್ತ್ರ, ಬ್ಯಾಗ್, ಪುಸ್ತಕ ಒದ್ದೆಯಾಗದಿರುವುದು ನೋಡಿದಾಗ ಸೌಜನ್ಯಳನ್ನು ಅಪಹರಿಸಿ ವಸತಿ ಗೃಹದಲ್ಲಿ ಕೂಡಿಹಾಕಿ ಅತ್ಯಾಚಾರಗೈದು, ಕೊಲೆಗೈದು ಮದ್ಯರಾತ್ರಿ ಇಲ್ಲಿ ತಂದು ಹಾಕಲಾಗಿದೆಯಾದರೂ, ಪೋಲೀಸರು ಮಾತ್ರ ಆ ನಿಟ್ಟಿನಲ್ಲಿ ತನಿಖೆ ನಡೆಸಲೇ ಇಲ್ಲ. ಮನೆಯವರು ಸಂಶಯ ವ್ಯಕ್ತಪಡಿಸಿ ಕೆಲವರ ವಿಳಾಸವನ್ನು ನೀಡಿದರೂ ಕೂಡಾ ಅವರನ್ನು ಬಂಧಿಸುವುದು ಬಿಡಿ, ಅವರನ್ನು ತನಿಖೆಗೆ ಒಳಪಡಿಸ- ದಿರುವುದನ್ನು ನೋಡಿದಾಗ ಸೌಜನ್ಯಳ ನಿಗೂಢ ಸಾವಿನ ಹಿಂದೆ ಪಾಳೇಗಾರಿ ಸಂಸ್ಕೃತಿಯ ಸ್ಥಾಪಿತ ಹಿತಾಸಕ್ತಿಗಳ ಕಾಣದ ಕೈ ಗೋಚರಿಸುತ್ತದೆ.

ಸಿಬಿಐಗೆ ಒತ್ತಾಯಿಸಿದರೆ ಸಿಒಡಿಗೆ ಕೊಟ್ಟ ಬಿಜೆಪಿ ಸರ್ಕಾರ :

ಸೌಜನ್ಯಳ ಸಾವು ನಡೆದು ಒಂದು ತಿಂಗಳೊಳಗೆ ಅಂದಿನ ಗೃಹ ಸಚಿವ ಆರ್. ಅಶೋಕ್ ಧರ್ಮಸ್ಥಳಕ್ಕೆ ಬಂದಿದ್ದರು. ಗೃಹ ಸಚಿವ ವಾಸ್ತವ್ಯವಿದ್ದ ಧರ್ಮಸ್ಥಳದಿಂದ ಸೌಜನ್ಯ ಮನೆ ಕೇವಲ 1 ಕಿ.ಮೀ ಅಂತರ ಮಾತ್ರ ಆದರೆ ಸೌಜನ್ಯಕ್ಕೂ ಕೂಡ ಸೌಜನ್ಯಳ ಮನೆಗೆ ಅವರು ಬೇಟಿ ನೀಡಲಿಲ್ಲ. ವಿಪರ್ಯಾಸವೆಂದರೆ ನ್ಯಾಯಕ್ಕಾಗಿ ಪರಿತಪಿಸುತ್ತಿದ್ದ ದುಃಖತಪ್ತ ಸೌಜನ್ಯಳ ಮನೆಯವರು ಗೃಹ ಸಚಿವರನ್ನು ಬೇಟಿ ಮಾಡಿ ಸೌಜನ್ಯ ಸಾವಿನ ಬಗ್ಗೆ ಸಂಶಯ ವ್ಯಕ್ತಪಡಿಸಿ ಸಿಬಿಐ ತನಿಖೆಗೆ ಒತ್ತಾಯಿಸಿದ್ದರು. ಸಿಬಿಐ ತನಿಖೆಗೆ ಒಪ್ಪಿಸುವ ಭರವಸೆ ನೀಡಿದ್ದಲ್ಲದೆ ದ.ಕ ಜಿಲ್ಲೆಯಲ್ಲಿ ಅದೇ ದಿನ ನಡೆದ 4 ಪತ್ರಿಕಾ ಗೋಷ್ಠಿಯಲ್ಲೂ ಕೂಡ ಸೌಜನ್ಯ ಕೊಲೆ ಪ್ರಕರಣವನ್ನು ಸಿಬಿಐಗೆ ವಹಿಸುವ ಬಗ್ಗೆ ಮಾತನಾಡಿದ್ದರು. ಧರ್ಮಸ್ಥಳದಿಂದ ವಾಪಸ್ಸಾದ ಗೃಹ ಸಚಿವರು ಮಾತ್ರ ಹೇಳಿದ ಭರವಸೆಯನ್ನು ಮರೆತು ಪ್ರಕರಣವನ್ನು ಸಿಬಿಐಗೆ ವಹಿಸುವ ಬದಲು ಸಿಒಡಿಗೆ ವಹಿಸಿದ್ದರು.

ಸಂಘ ಪರಿವಾರಿಗಳ ಗೋಸುಂಬೆತನ :

ಸೌಜನ್ಯ ಅತ್ಯಾಚಾರ, ಕೊಲೆ ಪ್ರಕರಣ ನಡೆದ ಸಂದರ್ಭ, ಶಂಕಿತ ಅತ್ಯಾಚಾ- ರಿಯ ಬಂಧನ ನಡೆದಾಗ ಹೋರಾಟಗಳಲ್ಲಿ ಸಂಘಪರಿವಾರವೇ ಮೇಲುಗೈ ಸಾಧಿಸಿತು. ಯಾವಾಗ ಈ ಪ್ರಕರಣದಲ್ಲಿ ಸ್ಥಾಪಿತ ಹಿತಾಸಕ್ತಿಗಳ ಕೈವಾಡ ಗೋಚರಿಸಿತೋ, ಅಂದೇ ಅವರ ಹೋರಾಟವೂ ನಿಂತೇ- ಹೋಯ್ತು. ಅಂದಿನಿಂದ ಅವರಿಗೆ ಸೌಜನ್ಯ ಸಂಘಪರಿವಾರಗಳಿಗೆ ಅವಳು ಓರ್ವ ಹಿಂದುವಾಗಿ, ಮಾತೆಯಾಗಿ ಕಾಣಲೇ ಇಲ್ಲ. ಹಿಂದು ಮಹಿಳೆಯರ ಮಾನ, ಪ್ರಾಣದ ಬಗ್ಗೆ ಬೊಗಳೆ ಬಿಡುವ ಅವರಿಗೆ ಸೌಜನ್ಯಳ ಮಾನ-ಪ್ರಾಣ ಹೋದ ಬಗ್ಗೆ ಚಿಂತೆಯೇ ಇಲ್ಲ. ಒಟ್ಟಿನಲ್ಲಿ ಸಂಘಪರಿವಾರವೂ ಪಾಳೆಗಾರಿ ಸಂಸ್ಕೃತಿಗೆ ಶರಣಾಗಿ ಹೋರಾಟವನ್ನೇ ಮೊಟಕುಗೊಳಿಸಿತು. ಸಂಘ ಪರಿವಾರದ ಗೋಸುಂಬೆತನ ಬಯಲಾಯಿತು.

ಹೋರಾಟದ ಹಾದಿನಲ್ಲಿ ಡಿ.ವೈ.ಎಫ್.ಐ ಮತ್ತು ಜೆ.ಎಂ.ಎಸ್ :

ಸೌಜನ್ಯ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ-ಯೇ, ಶವ ದೊರೆತ ಸ್ಥಳ ಹಾಗೂ ಆಸ್ಪತ್ರೆಗೆ ಬೇಟಿ ನೀಡಿದ ಡಿ.ವೈ.ಎಫ್.ಐ ಮತ್ತು ಜೆ.ಎಂ. ಎಸ್ ನಾಯಕರು, ಸ್ಥಳದಲ್ಲಿದ್ದ ಸೌಜನ್ಯಳ ಮನೆಯವರಿಗೆ ಸಾಂತ್ವನ ಹೇಳಿ ದೈರ್ಯ ತುಂಬಿದರು. ಅದೇ ಸಂದರ್ಭ ಪೋಲೀಸ್ ಅಧಿಕಾರಿಗಳನ್ನು ಬೇಟಿಯಾಗಿ ತಕ್ಷಣ ನಿಜವಾದ ಆರೋಪಿಗಳನ್ನು ಬಂಧಿಸಿ ಜೈಲಿಗಟ್ಟಲು ಒತ್ತಾಯಿಸಲಾಯಿತು. 2012 ಅಕ್ಟೋಬರ್ 12 ರಂದು ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿ, ಘಟನೆ ಗಂಭೀರವಾಗಿದ್ದು, ಪ್ರಕರಣ ಸಮಗ್ರ ತನಿಖೆಗಾಗಿ ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಒತ್ತಾಯಿಸಲಾಯಿತು. ಮತ್ತು ಹೋರಾಟವನ್ನು ತೀವ್ರಗೊಳಿಸುವ ಎಚ್ಚರಿಕೆಯನ್ನು ನೀಡಲಾಯಿತು. ಸರ್ಕಾರದ ಹಠಮಾರಿ ಧೋರಣೆಯನ್ನು ತೀವ್ರವಾಗಿ ವಿರೋಧಿಸಿ ಫೆಬ್ರವರಿ ತಿಂಗಳ 4ರಂದು ತಾಲೂಕು ತಹಶೀಲ್ದಾರರ ಕಚೇರಿ ಎದುರು 24 ಗಂಟೆಗಳ ಕಾಲ ಹಗಲು-ರಾತ್ರಿ ಹೋರಾಟ ನಡೆಸಲಾಯಿತು. ಪ್ರತಿಭಟನೆಯಲ್ಲಿ ಜೆ.ಎಂ.ಎಸ್ ನ ರಾಜ್ಯ ಉಪಾಧ್ಯಕ್ಷೆ ವಿ.ಗೀತಾ, ಡಿ.ವೈ.ಎಫ್.ಐ.ನ ರಾಜ್ಯ ಉಪಾಧ್ಯಕ್ಷ ಮುನೀರ್ ಕಾಟಿಪಳ್ಳ ಸೇರಿದಂತೆ ತಾಲೂಕಿನ ಪ್ರಗತಿಪರ ಚಿಂತಕರು, ವಿವಿಧ ಸಂಘಟನೆಗಳ ನಾಯಕರು ಭಾಗವಹಿಸಿದ್ದರು. ಪ್ರಕರಣದ ಗಂಭೀರತೆಯನ್ನು ಅರಿತು ಸಂಸದ ಪಿ.ಕರುಣಾಕರನ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ವರಲಕ್ಷ್ಮೀ ಸೇರಿದಂತೆ ಹಲವಾರು ಎಡ ಸಂಘಟನೆಗಳ ನಾಯಕರು ಸೌಜನ್ಯಳ ಮನೆಗೆ ಬೇಟಿ ನೀಡಿದ್ದರು.


ಹಿಂದಿನ ಬಿಜೆಪಿ ಸರ್ಕಾರ ಪ್ರಕರಣವನ್ನು ಸಿಬಿಐಗೆ ಒಪ್ಪಿಸುತ್ತೇನೆಂದು ಹೇಳಿದರೂ ಕೂಡಾ ನಂತರ ಯಾರದೋ ಒತ್ತಡಕ್ಕೆ ಬಲಿಬಿದ್ದು ಸಿಒಡಿಗೆ ವಹಿಸಿದ್ದರೂ ತನಿಖೆಯಲ್ಲಿ ಯಾವುದೇ ಪ್ರಗತಿಯಾಗಿರುವುದಿಲ್ಲ. ಕ್ಷೇತ್ರದ ಶಾಸಕರು ಅಧಿವೇಶನಗಳಲ್ಲಿ ಈ ಬಗ್ಗೆ ಮಾತನಾಡದೆ ಮೌನಕ್ಕೆ ಶರಣಾಗಿರುವುದು ಸಂಶಯಕ್ಕೆ ಎಡೆ ಮಾಡಿದೆ. ಸರ್ಕಾರದ ಬೇಜವಾಬ್ದಾರಿಯನ್ನು ಖಂಡಿಸಿ ಮತ್ತೆ ಹೋರಾಟವನ್ನು ತೀವ್ರಗೊಳಿಸಲು ತೀರ್ಮಾನಿಸಿದ್ದು, ಸ. 16ರಂದು ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯನ್ನು ಸಮತಾ-ಭಾರತ ಜ್ಞಾನ-ವಿಜ್ಞಾನ ಸಮಿತಿ ರಾಜ್ಯ ಸಂಚಾಲಕಿ ಎನ್.ಪ್ರಭಾ ಉದ್ಘಾಟಿಸಿದರು. ದೇಶದಾದ್ಯಂತ ಹೆಣ್ಣಿನ ಶೋಷಣೆ ತೀವ್ರಗೊಳ್ಳುತ್ತಿದ್ದು, ಕರ್ನಾಟಕ 2ನೇ ಸ್ಥಾನದಲ್ಲಿದೆ ಎಂದ ಅವರು ರಾಜ್ಯದಲ್ಲಿ ಅತ್ಯಂತ ವಿದ್ಯಾವಂತರ ಜಿಲ್ಲೆ ಎಂದು ಪ್ರಖ್ಯಾತವಾದ ದ.ಕ ಜಿಲ್ಲೆ ಹೆಣ್ಣಿನ

ಪುಟ 12 ಕ್ಕೆ

ಎಡಪಕ್ಷಗಳ ದ.ಕ.ಜಿಲ್ಲಾ ಸಮಾವೇಶ

ಲೋಕಸಭಾ ಚುನಾವಣೆ ಬಂದಾಗಲೆಲ್ಲಾ ಮೂರನೇ ರಂಗದ ಪ್ರಸ್ತಾಪ ಬರುತ್ತದೆ. ಎಡಪಕ್ಷಗಳಿಗೆ ಹೊರತಾದ ಈ ರಂಗ ಕಾಂಗ್ರೆಸ್ ಮತ್ತು ಬಿಜೆಪಿಗೆ ಪರ್ಯಾಯವಲ್ಲ. ಪರ್ಯಾಯ ನೀತಿಗಳಿಗಾಧಾರವಾಗಿರುವ ಎಡಪಕ್ಷಗಳನ್ನು ಒಳಗೊಂಡ ತೃತೀಯ ರಂಗ ಮಾತ್ರವೇ ಕಾಂಗ್ರೆಸ್ ಮತ್ತು ಬಿಜೆಪಿಗೆ ಪರ್ಯಾಯ ಆಗಬಲ್ಲದು ಎಂಬುದಾಗಿ ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ನುಡಿದರು.

ಮಂಗಳೂರಿನಲ್ಲಿ ಸಪ್ಟೆಂಬರ್ 30 ರಂದು ಸಿಪಿಐ(ಎಂ) ಮತ್ತು ಸಿಪಿಐಗಳ ಜಂಟಿ ಸಮಿತಿಗಳ ಆಶ್ರಯದಲ್ಲಿ ನಡೆದ



ಜಿಲ್ಲಾ ಸಮಾವೇಶವನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ರಾಜಕೀಯ ರಂಗಗಳು ಅನುಸರಿಸುತ್ತಿರುವ ಆರ್ಥಿಕ ರಾಜಕೀಯ ನೀತಿಗಳಿಂದಾಗಿ ದೇಶವು ಸಿಲುಕಿಬಿಟ್ಟಿರುವ ಆರ್ಥಿಕ ಬಿಕ್ಕಟ್ಟನ್ನು ವಿವರಿಸಿದ ಅವರು, ಇವುಗಳಲ್ಲಿ ಒಂದಕ್ಕೆ ಇನ್ನೊಂದು ಪರ್ಯಾಯವಲ್ಲ; ಅವೆರಡರ ನೀತಿಗಳು ಒಂದೇ ಆಗಿವೆ. ಸಮಸ್ತ ಜನತೆಯ ಬದುಕನ್ನು ರಕ್ಷಿಸಬೇಕಾದ ಪರ್ಯಾಯ ಆರ್ಥಿಕ ನೀತಿಗಳು ಇವತ್ತು ಬೇಕಾಗಿವೆ. ಎಡಪಕ್ಷಗಳು 10 ಅಂಶಗಳ ಪರ್ಯಾಯ ನೀತಿಗಳನ್ನು ಪ್ರತಿಪಾದಿಸುತ್ತಿವೆ. ಇವುಗಳ ಆಧಾರದಲ್ಲಿ ಜನಹಿತ ಬಯಸುವ ಶಕ್ತಿಗಳು ಜನತೆಯನ್ನು ಅಣಿನೆರೆಸಬೇಕಾಗಿದೆ ಎಂದು ಅವರು ವಿವರಿಸಿದರು.

ಕಾಂಗ್ರೆಸ್ ನೇತೃತ್ವದ ಕೇಂದ್ರ ಸರಕಾರ ಅನುಸರಿಸುತ್ತಿರುವ ಆರ್ಥಿಕ ನೀತಿಗಳು ದೇಶವನ್ನು ದಿವಾಳಿಯತ್ತ ಸಾಗಿಸಿವೆ. 1990ರ ಬಳಿಕ ಸಾಮ್ರಾಜ್ಯಶಾಹಿ ಒತ್ತಡಕ್ಕೆ ಬಾಗಿ ಸರಕಾರವು ಅನುಸರಿಸುತ್ತಿರುವ ನವ ಉದಾರವಾದಿ ಆರ್ಥಿಕ ನೀತಿಗಳಿಂದಾಗಿ ಕೃಷಿ ಹಾಗೂ ಕೈಗಾರಿಕೆಗಳ ಬೆಳವಣಿಗೆ ತೀರಾ ಇಳಿಮುಖವಾಗಿದೆ. ಹಣದುಬ್ಬರ, ಬೆಲೆಗಳು ಏರಿಕೆ ಕಂಡಿವೆ..33 ಕೋಟಿ ಭಾರತೀಯರು ಹಸಿವಿನಿಂದ ಬಳಲುತ್ತಿದ್ದಾರೆ. 47 ಕೋಟಿ ಜನರಿಗೆ ವಾಸ ಮಾಡಲು ಮನೆಯಿಲ್ಲ. ಕೃಷಿ ನಷ್ಟದಾಯಕವಾಗಿ ರೈತರು ಕೃಷಿ ಬಿಟ್ಟು ತೆರಳುತ್ತಿದ್ದಾರೆ. ಹಸಿವು. ಬಡತನ, ಅನಾರೋಗ್ಯ, ಅನಕ್ಷರತೆ ಸ್ವಾತಂತ್ರ್ಯ ಬಂದು 66 ವರ್ಷಗಳು ಕಳೆದರೂ ಹೆಚ್ಚುತ್ತಲೇ ಹೋಗಿದೆ. ಇದಕ್ಕೆ ವಿರುದ್ಧವಾಗಿ ಸರಕಾರದ ನೀತಿಗಳು ಶ್ರೀಮಂತರನ್ನು ಇನ್ನಷ್ಟು ಕೊಬ್ಬಿಸಿದೆ. ಕಾರ್ಪರೇಟರ್ ಕಂಪೆನಿಗಳಿಗೆ ರೈತರ ಭೂಮಿಯನ್ನು ಕಸಿದು ಅಗ್ಗದ ಬೆಲೆಯಲ್ಲಿ ನೀಡಲಾಗುತ್ತಿದೆ. 47 ಕೋಟಿ ಜನರಿಗೆ ಮಲಗಲು ಮನೆಯಿಲ್ಲದಿರುವಾಗ, ಒಬ್ಬನೇ ಉದ್ಯಮಿ 5500 ಕೋಟಿ ರೂಪಾಯಿ ಬೆಲೆಯ ಮನೆ ಕಟ್ಟಿಸುತ್ತಾನೆ. ಕಾರ್ಪರೇಟಗಳಿಗೆ ಕಳೆದ 3 ವರ್ಷಗಳಲ್ಲಿ 5 ಲಕ್ಷ ಕೋಟಿ ರೂಪಾಯಿಗಳನ್ನು ವಿನಾಯತಿಗಳನ್ನು ಕೊಡಲಾಗಿದೆ. 30 ಉದ್ಯಮ ಸಂಸ್ಥೆಗಳ 1ಲಕ್ಷ 60 ಸಾವಿರ ಕೋಟಿ ರೂಪಾಯಿಗಳನ್ನು ತೀರಿಸಲಾಗದ ಸಾಲ ಎಂದು ಕೈಬಿಡಲಾಗಿದೆ.

ಕೃಷ್ಣ ಗೋದಾವರಿ ಕೊಳ್ಳದಲ್ಲಿ ಇಂಧನ ಮೇಲೆತ್ತಲು ಅನುಮತಿ ಪಡೆದ ರಿಲಯನ್ಸ್ ಸಂಸ್ಥೆ ತೈಲ ಮೇಲೆತ್ತುವಲ್ಲಿ ತಮಗೆ ನಷ್ಟವಾಗಲಿದೆ ಎಂಬ ಸುಳ್ಳು ಹೇಳಿಕೆಗಳಿಗೆ ಬಾಗಿ ಸರಕಾರ ತೈಲ ಬೆಲೆಯನ್ನು ದುಪ್ಪಟ್ಟು ಏರಿಸುತ್ತಿದೆ ಹಾಗೂ ತೈಲೋದ್ಯಮಗಳು ಬಯಸಿದಾಗೆಲ್ಲ ತೈಲ ಬೆಲೆ ಹೆಚ್ಚಿಸಲು ಅವಕಾಶ ನೀಡಲಾಗುತ್ತಿದೆ.

ಎಡಪಕ್ಷಗಳು ಎಪಿಎಲ್ ಬಿಪಿಎಲ್ ವ್ಯತ್ಯಾಸ ಮಾಡದೇ ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ಎಲ್ಲ ಕುಟುಂಬಗಳಿಗೂ 14 ಅಗತ್ಯ ವಸ್ತುಗಳನ್ನೊಳಗೊಂಡು ಪ್ರತಿ ತಿಂಗಳಿಗೆ ಅಕ್ಕಿಯನ್ನು ಕೆಜಿಗೆ ರೂ.2ರಂತೆ ತಲಾ 35 ಕೆ.ಜಿ.ಒದಗಿಸಲು ಬಲವಾಗಿ ಸರಕಾರವನ್ನು ಆಗ್ರಹಪಡಿಸುತ್ತಿದ್ದರೂ, ಸರಕಾರ ಅದನ್ನು ಕಿವಿಗೆ ಹಾಕಿಕೊಳ್ಳುತ್ತಿಲ್ಲ.

ವಿರೋಧ ಪಕ್ಷದಲ್ಲಿರುವ ಬಿಜೆಪಿಯೂ ಕಾಂಗ್ರೆಸಿನ ನೀತಿಗಳಿಗೆ ಸರಿಯಾದ ವಿರೋಧವನ್ನು ತೋರುತ್ತಿಲ್ಲ. ಬಿಜೆಪಿ ನೇತೃತ್ವದ ಎನ್‌ಡಿಎ ನೀತಿಗಳನ್ನೇ ಕಾಂಗ್ರೆಸ್ ಮುಂದುವರೆಸಿಕೊಂಡು ಹೋಗುತ್ತಿರುವುದರಿಂದ ಅದಕ್ಕೆ ಅದರ ವಿರೋಧವಿಲ್ಲ. ಹಿಂದುತ್ವ ಕೋಮುವಾದವನ್ನು ಬಿರುಸಿನಿಂದ ಪ್ರಚಾರಕ್ಕೆ ತಂದಿದ್ದು, ಅದರ ಪ್ರಬಲ ಸಮರ್ಥಕನಾದ ನರೇಂದ್ರ ಮೋದಿಯನ್ನೇ ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿಸಿದೆ. ಆಳುವ ರಂಗದ ನೀತಿಗಳನ್ನು ವಿರೋಧಿಸುವ ಬದಲು, ನರೇಂದ್ರ ಮೋದಿಯೋ ರಾಹುಲ್ ಗಾಂಧಿಯೋ ಎಂಬ ಚರ್ಚೆಯನ್ನು ಹರಡಿ ಬಿಟ್ಟಿದೆ. ಮಾಧ್ಯಮಗಳು ತಮ್ಮ ಪೋಷಕರಾದ ಕಾರ್ಪರೇಟಗಳ ಬಯಕೆಯಂತೆ, ವಾಸ್ತವದ ಸಮಸ್ಯೆಗಳನ್ನು ಮರೆಮಾಡಿ ವ್ಯಕ್ತಿ ಕೇಂದ್ರಿತ ಚರ್ಚೆಗಳನ್ನು ಚಲಾವಣೆಯಲ್ಲಿಟ್ಟಿದ್ದಾರೆ– ಎಂದು ವಿವರವಾಗಿ ದೇಶದ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾದ ಕಾಂಗ್ರೆಸ್ ಬಿಜೆಪಿ ನೀತಿಗಳನ್ನು ಜಿ.ವಿ.ಶ್ರೀರಾಮರೆಡ್ಡಿಯವರು ಕಟು ಟೀಕೆಗೊಳಪಡಿಸಿದರು.


ಕಾಂಗ್ರೆಸ್ ನೇತೃತ್ವದ ಸರಕಾರ ಹಾಗೂ ಬಿಜೆಪಿ ನೇತೃತ್ವದ ಸರ್ಕಾರಗಳು ಭ್ರಷ್ಟಾಚಾರದಲ್ಲಿ ಒಬ್ಬರಿಗೊಬ್ಬರು ಕಡಿಮೆ ಇಲ್ಲ ಎಂಬಂತೆ ಇರುವುದನ್ನು ವಿವರಿಸಿದರು. ನವವಸಾಹತುಶಾಹಿ ನೀತಿಗಳಿಗೆ ವಿರುದ್ಧವಾಗಿ, ಸಾಮಾನ್ಯ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವಂಥ, ದೇಶದ ಸಾರ್ವಭೌಮತೆಯನ್ನು ಎತ್ತಿ ಹಿಡಿಯುವಂಥ, ಮತೀಯ ಸೌಹಾರ್ದವನ್ನು ಎತ್ತಿ ಹಿಡಿಯುವಂಥ ರಾಜಕೀಯ ಆರ್ಥಿಕ ನೀತಿಗಳು ಮಾತ್ರವೇ ನಿಜವಾದ ಪರ್ಯಾಯ ಎಂದು ಶ್ರೀರಾಮರೆಡ್ಡಿ ವಿವರಿಸಿದರು.

ಸಮಾವೇಶವನ್ನು ಉದ್ದೇಶಿಸಿ ಸಿಪಿಐ ರಾಜ್ಯ ಮಂಡಳಿ ಸದಸ್ಯರಾದ ದೇವದಾಸ ರಾವ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್.ಶ್ರೀಯಾನ್, ಸಿಪಿಐ ದ.ಕ. ಜಿಲ್ಲಾ ಕಾರ್ಯದರ್ಶಿ ಪಿ.ಸಂಜೀವ, ಸಭಾಧ್ಯಕ್ಷತೆ ವಹಿಸಿದ ಸಿಪಿ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಮಾತನಾಡಿದರು. ಸಿಪಿಐ(ಎಂ)ನ ವಸಂತ ಆಚಾರಿ ಸ್ವಾಗತಿಸಿದರು. ಸಿಪಿಐನ ಶೇಖರ್ ವಂದಿಸಿದರು.

ರೈಲ್ವೆ ಕೆಳಸೇತುವೆ ನಿರ್ಮಾಣಕ್ಕೆ ಡಿವೈಎಫ್ಐ ಆಗ್ರಹ :



ಮಂಗಳೂರು ನಗರ ಕೇಂದ್ರದಿಂದ ಬಜಾಲು ಪ್ರದೇಶಕ್ಕೆ ಹೋಗುವ ಬಸ್ಸು ಪ್ರಯಾಣಿಕರಿಗೆ ಪಡೀಲು ರೈಲ್ವೆಗೇಟಿನಿಂದಲಾಗಿ ಹಲವಾರು ಬಾರಿ ಸಂಚಾರ ತಡೆ ಉಂಟಾಗಿ ನಾಗರಿಕರು ದೀರ್ಘಕಾಲದಿಂದ ಕಿರುಕುಳ ಅನುಭವಿಸುತ್ತಿದ್ದಾರೆ. ರೈಲ್ವೆ ಇಲಾಖೆಯೊಡನೆ ಹಲವಾರು ಬಾರಿ ಮಾತುಕತೆ ನಡೆಸಿದ ಪರಿಣಾಮವಾಗಿ ರೈಲ್ವೆ ಕೆಳಸೇತುವ ಒಪ್ಪಿಗೆ ದೊರಕಿದೆಯಾದರೂ ಇನ ಕಾಮಗಾರಿ ಸಂಬಂಧ ಸಮೀಕ್ಷೆ ಸಿದ್ಧತೆಗ ನಡೆದಿರುವುದಿಲ್ಲ. ಸರ್ಕಾರ ನೀಡಿ ಭರವಸೆಯನ್ನು ಈಡೇರಿಸದೆ ಇರುವ ಬ ಡಿವೈಎಫ್ಐ ಬಜಾಲು ಪಕ್ಕಲಡ್ಕ ಘಟ ಹಾಗೂ ಮಂಗಳೂರು ನಗರ ಸಮಿ ವತಿಯಿಂದ ಸಪ್ಟೆಂಬರ್ 30 ರಂದ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತ ಪ್ರತಿಭಟನಾ ಪ್ರದರ್ಶನದ ಬಳಿಕ, ಗೇಟಿನಿಂ ಮಂಗಳೂರು ಜಂಕ್ಷನ್ ನಿಲ್ದಾಣದ ವರ ಮೆರವಣಿಗೆಯಲ್ಲಿ ಸಾಗಿ, ರೈಲ್ವೆ ಇಲಾಖೆ ಮನವಿಯನ್ನು ಸ್ಟೇಶನ್ ಮಾಸ್ತರರ ಮೂಲ ಸಲ್ಲಿಸಲಾಯಿತು.



ವಾ . ಉ.

ಈ ಭಾಗದ ಜನಪ್ರತಿನಿಧಿಗ ಸೋಮಾರಿತನ ಹಾಗ ಮಂಗಳೂರಿನಬಗ್ಗೆ ರೈಲ್ವೆ ಇಲಾಖೆಂ ಮಲತಾಯಿ ಧೋರಣೆಯನ ಖಂಡಿಸಿ ಪ್ರತಿಭಟನೆಯನ್ನುದ್ದೇಶಿ ಡಿವೈಎಫ್ಐ ದ.ಕ.ಜಿಲ್ಲಾ ಸಮಿ ಅಧ್ಯಕ್ಷ ಮುನೀರ್ ಕಾಟ ಮಾತನಾಡಿದರು.

ಪ್ರತಿಭಟನೆಯಲ್ಲಿ ಡಿವೈಎಫ್ ಮಂಗಳೂರು ನಗರ ಸಮಿತಿ ಅಧ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ ಕುಮಾರ್ ಬಜಾಲ್, ಸಾಧಿಕ್ ಕಣ್ಣೂರು, ರೈ ಸೇತುವೆ ಹೋರಾಟ ಸಮಿತಿ ಮುಖಂಡರಾ ಅಹಮದ್ ಬಾವಾ, ಸುರೇಶ್ ಬಜಾಲ ಲೋಕೇಶ್ ಎಚ್, ಅಶೋಕ್ ಸಾಲ್ಯಾ ಮತ್ತಿತರರು ಉಪಸ್ಥಿತರಿದ್ದರು.

ಸರ್ಕಾರಿ ಹೋಟೇಲ್ ಸ್ಥಾಪನೆಗೆ ಡಿವೈಎಫ್ ಆಗ್ರಹ:

ಹೋಟೇಲ್ ತಿಂಡಿ ತಿನಿಸುಗಳ ದರ ಏರಿ ಕೆಯ ವಿರುದ್ಧ ಡಿವೈಎಫ್ಐ ಮಂಗಳೂರ ನಗರ ಸಮಿತಿ ಪ್ರತಿಭಟನಾ ಅಭಿಯಾನ ಭಾಗವಾಗಿ ಉರ್ವಸ್ಟೋರ್ ಡಿವೈಎಫ್ ಘಟಕದವರು ಸಪ್ಟೆಂಬರ್ 30 ರಂದ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿ ಡಿವೈಎಫ್ಐ ನಗರ ಸಮಿತಿ ಅ ಧ್ಯ ಬಿ.ಕೆ.ಇಮ್ತಿಯಾಜ್, ಬೇಕಾಬಿಟ್ಟಿ ದ ಏರಿಸಿದ ಹೋಟೇಲ್‌ಗಳ ಮೇಲೆ ಜಿಲ್ಲಾಡ ಕ್ರಮಕೈಗೊಂಡು ತಿಂಡಿ ತಿನಿಸುಗ ದರ ನಿಯಂತ್ರಣ ಮಾಡಬೇಕು ಎಂದ ಆಗ್ರಹಿಸಿದರು. ರಾಜ್ಯ ಸರ್ಕಾರ ಕೇರ ತಮಿಳುನಾಡು ರಾಜ್ಯಗಳ ಮಾದರಿಯ ನ್ಯಾಯ ಬೆಲೆಯ ಸರ್ಕಾರಿ ಹೋಟೆಲ್‌ಗಳನ ಸ್ಥಾಪಿಸಬೇಕೆಂದೂ ಒತ್ತಾಯಿಸಿದರು.

ಡಿವೆಫ್ಐ ನಗರ ಕಾರ್ಯದರ್ಶಿ ಸಂತೋಷ ಬಜಾಲ್, ಉಪಾಧ್ಯಕ್ಷ ನವೀನ್ ಕೊಂಚಾ ಮಾತನಾಡಿದರು. ಉರ್ವಸ್ಟೋರ್ ಘಟ ಅಧ್ಯಕ್ಷ ಮನೋಜ್, ಸ್ಥಳೀಯರಾ ಪ್ರಶಾಂತ್ ಎಂ.ಬಿ. ಸುನಂದ ಮತ್ತಿತರರ ಉಪಸ್ಥಿತರಿದ್ದರು.

ಬೀದಿ ಬದಿ ವ್ಯಾಪಾರಿಗಳ ಸಂಘ ಎರಡನೇ ಸಮ್ಮೇಳನ:

ಸಂಘಟಿತ ಹೋರಾಟದ ಫಲವಾ ಕೇಂದ್ರ ಸರ್ಕಾರ ಬೀದಿ ಬದಿ ವ್ಯಾಪಾರಿಗ ಜೀವನೋಪಾಯ ಹಕ್ಕುಗಳ ರಕ್ಷ

ಪುಟ 15

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೇಂದ್ರ ಗೃಹಮಂತ್ರಿಗಳು ಎಲ್ಲ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಭಯೋತ್ಪಾದನೆಯ ಕೇಸುಗಳಲ್ಲಿ ಯಾವ ಅಮಾಯಕ ಮುಸ್ಲಿಂ ಯುವಜನರೂ ತಪ್ಪಾಗಿ ಬಂಧನದಲ್ಲಿರದಂತೆ ನೋಡಿಕೊಳ್ಳಬೇಕು ಎಂದಿದ್ದಾರೆ. ಕೊನೆಗೂ ಯುಪಿಎ ಸರಕಾರ ಜಾತ್ಯಾತೀತ ಶಕ್ತಿಗಳ ಬಹುದಿನಗಳ ಆಗ್ರಹಕ್ಕೆ ಸ್ಪಂದಿಸಿದೆ. ನಿರೀಕ್ಷಿತವಾಗಿಯೇ ಕೋಮುವಾದಿ ಶಕ್ತಿಗಳು ಇದರ ವಿರುದ್ಧ ಬೊಬ್ಬೆ ಎಬ್ಬಿಸಿವೆ. ಈ ನಡುವೆ ಅವರ 'ಚೈತನ್ಯಶೀಲ' ಮಾದರಿಯ ಇನ್ನಷ್ಟು ತೂತುಗಳು ಬಯಲಾಗುತ್ತಿವೆ, 'ವಿಕಾಸ ಪುರುಷ', ನಿಜವಾಗಿ 'ವಿನಾಶ ಪುರುಷ'ನಾಗುವ ಲಕ್ಷಣಗಳು ಕೂಡ ಹೆಚ್ಚೆಚ್ಚು ಕಾಣ ಬರುತ್ತಿವೆ.



'ದಿ ಹಿಂದೂ'ನಲ್ಲಿ ಕೇಶವನ್ ವ್ಯಂಗ್ಯ-ಧ್ರುವೀಕರಣದ ಪುರುಷ

ಕೋಮುವಾದಿ ಧ್ರುವೀಕರಣ ತೀಕ್ಷ್ಣಗೊಳಿಸಲು ಈಗ ಮತ್ತೆ 'ತುಷ್ಟೀಕರಣ'ದ ಬೊಬ್ಬೆ

ಸೀತಾರಾಂ ಯೆಚೂರಿ

ಭಯೋತ್ಪಾದನೆಯ ಕೇಸುಗಳಲ್ಲಿ ಅಮಾಯಕ ಮುಸ್ಲಿಂ ಯುವಜನರನ್ನು ಬಂಧಿಸಿಡುವ ತಪ್ಪನ್ನು ಸರಿಪಡಿಸಬೇಕೆಂಬುದು ದೇಶದ ಜಾತ್ಯಾತೀತ ಶಕ್ತಿಗಳ ಬಹುಕಾಲದ ಬೇಡಿಕೆ. ಈ ಮೂಲಕ ನಮ್ಮ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿದ ಬದುಕು ಮತ್ತು ಸ್ವಾತಂತ್ರ್ಯದ ಮೂಲಭೂತ ಹಕ್ಕಿನಿಂದ ಅವರನ್ನು ವಂಚಿತಗೊಳಿಸುವುದನ್ನು ತಪ್ಪಿಸ ಬೇಕೆಂಬ ಆಗ್ರಹಕ್ಕೆ ಕೊನೆಗೂ ಕೇಂದ್ರ ಗೃಹಮಂತ್ರಿಗಳು ಸ್ಪಂದಿಸಿದ್ದಾರೆ. ಕಳೆದ ಸೋಮವಾರ ಮಂತ್ರಿಗಳು ಎಲ್ಲ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಭಯೋತ್ಪಾದನೆಯ ಕೇಸುಗಳಲ್ಲಿ ಯಾವ ಅಮಾಯಕ ಮುಸ್ಲಿಂ ಯುವಜನರೂ ತಪ್ಪಾಗಿ ಬಂಧನದಲ್ಲಿರದಂತೆ ನೋಡಿಕೊಳ್ಳಬೇಕು ಎಂದಿದ್ದಾರೆ. ಇಂತಹ "ದುರುದ್ದೇಶ"ದ ಬಂಧನದಲ್ಲಿ ತೊಡಗುವ ಪೋಲೀಸ್ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳುವುದು ಒಳ್ಳೆಯದು ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

"ಕೇಂದ್ರ ಸರಕಾರ ಕಾನೂನು ಜಾರಿ ಸಂಸ್ಥೆಗಳು ಅಮಾಯಕ ಮುಸ್ಲಿಂ ಯುವಜನರಿಗೆ ಕಿರುಕುಳ ಕೊಡುತ್ತಿವೆ ಎಂದು ಆಪಾದಿಸಿ ಹಲವಾರು ಮನವಿಪತ್ರಗಳು ಕೇಂದ್ರ ಸರಕಾರಕ್ಕೆ ಬಂದಿವೆ... ತಮ್ಮ ಮೇಲೆ ಬೇಕೆಂದೇ ಗುರಿಯಿಡಲಾಗಿದೆ, ತಮ್ಮ ಹಕ್ಕುಗಳಿಂದ ವಂಚಿಸಲಾಗುತ್ತಿದೆ ಎಂಬ ಭಾವನೆ ಕೆಲವು ಅಲ್ಪಸಂಖ್ಯಾತ ಯುವಕರಲ್ಲಿ ಮೂಡಲಾರಂಭಿಸಿದೆ. ಸರಕಾರ ಯಾವುದೇ ಅಮಾಯಕ ವ್ಯಕ್ತಿಯನ್ನು ಅನಗತ್ಯ ಕಿರುಕುಳಕ್ಕೆ ಗುರಿಪಡಿಸದಂತೆ ನೋಡಿಕೊಳ್ಳಬೇಕು" ಎಂದು ಶಿಂಧೆಯವರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಮುಂದುವರೆದು ಅವರು, ಭಯೋತ್ಪಾದನೆಯ ಬಗ್ಗೆ ಎಳ್ಳಷ್ಟೂ ಸಹನೆ ತೋರದಿರುವುದೇನೋ ಅತ್ಯಗತ್ಯವಾದರೂ, ಕಾನೂನು ಜಾರಿ ಸಂಸ್ಥೆಗಳು ಭಯೋತ್ಪಾದನೆಯ ಕೇಸುಗಳಲ್ಲಿ ವ್ಯವಹರಿಸುವಾಗ ಕೋಮು ಹಾಗೂ ಸಾಮಾಜಿಕ ಸಾಮರಸ್ಯವನ್ನು ಕಾಪಾಡಬೇಕು ಎಂದಿದ್ದಾರೆ.



ಯಾವುದು ಹೆಚ್ಚು ತುಷ್ಟೀಕರಿಸುತ್ತದೆ?–ಶಿಂಧೆಯವರ ಭಾಷೆಯೋ?, ಬಿಜೆಪಿಯ ಅಂಗಾಂಗ ಭಾಷೆಯೋ?
–ಇ.ಪಿ.ಉನ್ನಿಯವರ ವ್ಯಂಗ್ಯ

ಬಿಜೆಪಿ ಶಿಂಧೆಯವರ ಪತ್ರಕ್ಕೆ ಬಲವಾದ ಆಕ್ಷೇಪ ವ್ಯಕ್ತಪಡಿಸುತ್ತದೆ ಎಂದು ಯಾರಾದರೂ ಭವಿಷ್ಯ ನುಡಿಯಬಹುದು. ಹಾಗೆಯೇ ಆಗಿದೆ. ಅವರು ಸಂವಿಧಾನದ ವಿರುದ್ಧ ವರ್ತಿಸುತ್ತಿದ್ದಾರೆ, ದೇಶವನ್ನು ಕೋಮು ಆಧಾರದಲ್ಲಿ ಒಡೆಯುತ್ತಿದ್ದಾರೆ(!) ಎಂದು ಅದು ಆಪಾದಿಸಿದೆ. ಈ ಬಗ್ಗೆ ಮುಂದೆ ನೋಡೋಣ.

ಕಿರುಕುಳದ ನಿದರ್ಶನಗಳೆಷ್ಟೋ!

ಈ ಹಿಂದೆ 2011ರಲ್ಲಿ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆಯಲ್ಲಿ ಸಿಪಿಐ(ಎಂ) ಅಮಾಯಕ ಮುಸ್ಲಿಂ ಯುವಜನರ ಕಾನೂನುಬಾಹಿರ ಬಂಧನ ಮತ್ತು ಕಿರುಕುಳದ ಪ್ರಶ್ನೆಯನ್ನು,, ವಿಶೇಷವಾಗಿ ಅಜ್ಮೇರ್ ಶರೀಫ್, ಮಾಲೆಗಾಂವ್ ಮತ್ತು ಹೈದರಾಬಾದ್ ಮಕ್ಕಾ ಮಸೀದಿ ಭಯೋತ್ಪಾದಕ ದಾಳಿಗಳಿಗೆ ಸಂಬಂಧಪಟ್ಟಂತೆ, ಎತ್ತಿತ್ತು. ಈ ಭಯೋತ್ಪಾದಕ ದಾಳಿಗಳು ಹಿಂದುತ್ವ ಭಯೋತ್ಪಾದಕ ಸಂಘಟನೆಗಳ ದುಷ್ಕೃತ್ಯಗಳು ಎಂದು ತನಿಖೆಗಳು ಪತ್ತೆ ಹಚ್ಚಿದ ನಂತರವೂ ಮುಸ್ಲಿಂ ಯುವಜನರ ಬಂಧನಗಳು ಮುಂದುವರೆದವು.

ನಂತರ 2012ರಲ್ಲಿ ಸಿಪಿಐ(ಎಂ) ನಿಯೋಗವೊಂದು ಭಾರತದ ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಒಂದು ಮನವಿ ಪತ್ರವನ್ನು ಸಲ್ಲಿಸಿತು. ಅದು "ದೇಶದ ವಿವಿಧ ಭಾಗಗಳಲ್ಲಿ ಭಯೋತ್ಪಾದನೆಯ ಕೇಸುಗಳಿಗೆ ಸಂಬಂಧಪಟ್ಟಂತೆ ಹತ್ತಾರು ಮುಸ್ಲಿಂ ಯುವಜನರನ್ನು ತಪ್ಪಾಗಿ ಬಂಧಿಸಿ ಮೊಕದ್ದಮೆ ಹಾಕಿ ನ್ಯಾಯದ ಗಂಭೀರ ಗರ್ಭಪಾತ ನಡೆಯುತ್ತಿರುವತ್ತ" ಗಮನ ಸೆಳೆದಿತ್ತು. "ಕೆಲವು ಕೇಸುಗಳಲ್ಲಿ ಈ ಯುವಜನರನ್ನು ಹತ್ತರಿಂದ ಹದಿನಾಲ್ಕು ವರ್ಷಗಳ ವರೆಗೂ ವಿಚಾರಣಾಧೀನ ಕೈದಿಗಳಾಗಿ ಸೆರೆವಾಸದಲ್ಲಿ ಇಡಲಾಗಿದೆ, ನಂತರ ಅಮಾಯಕರು ಎಂದು ನ್ಯಾಯಾಲಯಗಳು ಅವರನ್ನು ಖುಲಾಸೆ ಮಾಡಿವೆ. ಹಲವು ವಿಶ್ವಸನೀಯ ನಾಗರಿಕ ಗುಂಪುಗಳು ಮತ್ತು ಸಂಘಟನೆಗಳು ಇಂತಹ ಕೇಸುಗಳ ಮಾಹಿತಿಗಳನ್ನು ಸಂಗ್ರಹಿಸಿದ್ದು ಸ್ವತಃ ನ್ಯಾಯಾಲಯದ ತೀರ್ಪುಗಳೇ ತನಿಖಾ ಏಜೆನ್ಸಿಗಳ ಮುಸ್ಲಿಂ–ವಿರೋಧಿ ಮನೋಭಾವದ ಬಗ್ಗೆ ಕಠಿಣ ಮಾತುಗಳನ್ನಾಡಿದೆ ಎಂಬುದು ಈ ಮಾಹಿತಿಗಳಿಂದ ತಿಳಿದು ಬಂದಿದೆ. ಹಲವು ಕೇಸುಗಳಲ್ಲಿ ಅಮಾಯಕ ಯುವಜನರ ವಿರುದ್ಧ ಕಪೋಲಕಲ್ಪಿತ ಸಾಕ್ಷ್ಯಗಳನ್ನೂ ಸಲ್ಲಿಸಲಾಗಿದೆ. ತನಿಖಾ ಏಜೆನ್ಸಿಗಳಿಗೆ ನಿಜವಾದ ಅಪರಾಧಿಗಳನ್ನು ಹಿಡಿಯಬೇಕು ಎಂಬುದಕ್ಕಿಂತ ಹೆಚ್ಚಾಗಿ ತನಿಖೆಗಳಲ್ಲಿ 'ಫಲಿತಾಂಶ'ಗಳನ್ನು ತೋರುವುದೇ ಮುಖ್ಯವಾಗಿರುವಂತೆ ಕಾಣುತ್ತದೆ " ಎಂದು ಈ ಮನವಿ ಪತ್ರದಲ್ಲಿ ಹೇಳಲಾಗಿತ್ತು.

"ಭೀಕರ ಭಯೋತ್ಪಾದಕ ದಾಳಿಗಳಿಗೆ ಕಾರಣವಾಗುವ ಯಾವುದೇ ವ್ಯಕ್ತಿ ಅಥವ ಗುಂಪಿಗೆ ಯಾವುದೇ ಅವಕಾಶ ನೀಡಲಾಗದು. ಆದರೆ, ಇನ್ನೊಂದೆಡೆಯಲ್ಲಿ ಅಮಾಯಕ ಮುಸ್ಲಿಂ ಯುವಜನರ ಬಂಧನ ಗಂಭೀರ ಪ್ರಮಾಣಕ್ಕೇರಿದೆ. ಇದರತ್ತ ತಕ್ಷಣ ಗಮನ ಅಗತ್ಯ. ಇದು ಜಾತ್ಯಾತೀತ ಪ್ರಜಾಪ್ರಭುತ್ವದ ಸೂತ್ರಗಳ ಮೇಲೊಂದು ಕಪ್ಪು ಚುಕ್ಕೆ. ಅದೇ ವೇಳೆಗೆ, ಅಮಾಯಕ ಜನಗಳ ಬಂಧನ ಎಂದರೆ ನಿಜವಾದ ಅಪರಾಧಿಗಳು ತಪ್ಪಿಸಿಕೊಳ್ಳುತ್ತಾರೆಂದೇ ಅರ್ಥ." ಎಂದು ಸಿಪಿಐ(ಎಂ) ಮನವಿ ಪತ್ರ ಅಭಿಪ್ರಾಯ ಪಟ್ಟಿತ್ತು.


ಈ ಮನವಿ ಪತ್ರ ತಪ್ಪು ಬಂಧನ ಮತ್ತು ಸೆರೆವಾಸ ಎಂದು ಸಾಬೀತಾದ 22 ಕೇಸುಗಳನ್ನು ಪಟ್ಟಿ ಮಾಡಿತ್ತು. 2006ರಲ್ಲಿ ಮಾಲೇಗಾಂವ್ ಸ್ಫೋಟಗಳಿಗಾಗಿ ಒಂಭತ್ತು ಮುಸ್ಲಿಂ ಯುವಜನರನ್ನು ತಪ್ಪಾಗಿ ಬಂಧಿಸಲಾಗಿತ್ತು ಎಂಬುದೀಗ ಗೊತ್ತಾಗಿದೆ. ಅವರು ಆರು ವರ್ಷಗಳ ಕಾಲ ಜೈಲಿನಲ್ಲಿದ್ದು ಈಗ ಖುಲಾಸೆಯಾಗಿದ್ದಾರೆ. 2007ರ ಹೈದರಾಬಾದ್ ಮಕ್ಕಾಮಸೀದಿ ಸ್ಫೋಟಗಳಲ್ಲಿ ಬಂಧಿಸಲ್ಪಟ್ಟ 21 ಮುಸ್ಲಿಂ ಯುವಜನರನ್ನು ಎಲ್ಲ ಆಪಾದನೆಗಳಿಂದ ಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ. ಆದರೆ ಅಷ್ಟರಲ್ಲಿ ಅವರು ಐದು ವರ್ಷಗಳನ್ನು ಜೈಲಿನಲ್ಲಿ ಕಳೆದಿದ್ದರು. 2012 ಕರ್ನಾಟಕ ಎಲ್‌ಇಟಿ ಪಿತೂರಿಯಲ್ಲಿ ಬಂಧಿಸಲ್ಪಟ್ಟ ಐವರಲ್ಲಿ ಇಬ್ಬರು ಮುಸ್ಲಿಂ ಯುವಕರ ಮೇಲಿನ ಆಪಾದನೆಗಳೆಲ್ಲ ಖುಲಾಸೆಯಾಗಿ ಅವರು ಬಿಡುಗಡೆಯಾಗಿದ್ದಾರೆ.

ಆರೆಸ್ಸೆಸ್–ಬಿಜೆಪಿ ಬೊಬ್ಬೆ

ಈ ಅಂಕಣದಲ್ಲಿ ಮತ್ತೆ–ಮತ್ತೆ ಹೇಳಿರುವಂತೆ, ಭಯೋತ್ಪಾದನೆಗೆ ಧರ್ಮವಿಲ್ಲ, ಅದು ಯಾವುದೇ ಪ್ರದೇಶಕ್ಕೆ, ವಿಭಾಗಕ್ಕೆ ಸೇರಿದ್ದು ಎಂದೂ ವರ್ಗೀಕರಿಸಲೂ ಸಾಧ್ಯವಿಲ್ಲ. ಅದು ರಾಷ್ಟ್ರ–ವಿರೋಧಿ, ಆದ್ದರಿಂದ ಎಷ್ಟು ಮಾತ್ರಕ್ಕೂ ಸ್ವೀಕಾರಾರ್ಹವಲ್ಲ. ಭಯೋತ್ಪಾದನೆಯ ವಿರುದ್ಧ ಹೋರಾಟದಲ್ಲಿ ರಾಜಿ ಸಾಧ್ಯವಿಲ್ಲ. ಆದರೆ ಭಯೋತ್ಪಾದನೆಯ ವಿರುದ್ಧ ಹೋರಾಡುವ ಹೆಸರಿನಲ್ಲಿ ಅಮಾಯಕ ಯುವಜನರನ್ನು, ಅವರು ಯಾವುದೇ ಧರ್ಮಕ್ಕೆ ಸೇರಿರಲಿ, ಬಲಿಪಶುಗಳಾಗಿ ಮಾಡಬಾರದು. ಇದು ಸ್ವಾತಂತ್ರ್ಯ ಮತ್ತು ನ್ಯಾಯಕ್ಕೆ ಮಾಡುವ ಅಪಚಾರವಾಗುತ್ತದೆ. ಈ ಸಂದರ್ಭದಲ್ಲಿ ಅಮಾಯಕ ಮುಸ್ಲಿಂ ಯುವಜನರಿಗೆ ಮತ್ತೆ–ಮತ್ತೆ ಕಿರುಕುಳ ಬೆಳಕಿಗೆ ಬಂದಿರುವುದು ವಿಶೇಷ ಆತಂಕದ ಸಂಗತಿ. ಇದನ್ನು ಖಂಡಿತವಾಗಿಯೂ ಒಪ್ಪಲು ಸಾಧ್ಯವಿಲ್ಲ. ಇದು ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣ–ರಾಜ್ಯ ವ್ಯವಸ್ಥೆಯ ಹೂರಣಕ್ಕೇ ವ್ಯತಿರಿಕ್ತವಾದ ಸಂಗತಿ

ಗೃಹಮಂತ್ರಿಗಳ ಪತ್ರದ ವಿರುದ್ಧ ಆರೆಸ್ಸೆಸ್–ಬಿಜೆಪಿಯ ಬೊಬ್ಬೆಯನ್ನು ಅರ್ಥಮಾಡಿಕೊಳ್ಳಬಹುದು. ಏಕೆಂದರೆ ಅವರು ಆಧುನಿಕ ಭಾರತದ ಈ ಗಣತಂತ್ರ ವ್ಯವಸ್ಥೆಯನ್ನೆ ನಿರಾಕರಿಸುವ ಪ್ರಯತ್ನದಲ್ಲಿರುವವರು. ಅವರ ಸೈದ್ಧಾಂತಿಕ ಯೋಜನೆಯೆಂದರೆ ಆಧುನಿಕ ಭಾರತೀಯ ಗಣತಂತ್ರವನ್ನು ಉನ್ನತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿ 'ಹಿಂದೂರಾಷ್ಟ್ರ'ದ ಆರೆಸ್ಸೆಸ್ ಆವೃತ್ತಿಯಾಗಿ ಪರಿವರ್ತಿಸುವುದು. ಆದ್ದರಿಂದ ಧಾರ್ಮಿಕ ಅಲ್ಪಸಂಖ್ಯಾತರಿಗೆ ನ್ಯಾಯ ಮತ್ತು ಸ್ವಾತಂತ್ರ್ಯದಲ್ಲಿ ಸಮಾನತೆಯನ್ನು ಲಭ್ಯಗೊಳಿಸುವ ಯಾವುದೇ ಪ್ರಯತ್ನ ಅವರಿಗೆ 'ತುಷ್ಟೀಕರಣ'ವಾಗಿ ಕಂಡರೆ ಅದರಲ್ಲಿ ಆಶ್ಚರ್ಯವೇನಿಲ್ಲ. ವ್ಯಂಗ್ಯವೆಂದರೆ, ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸಿ ಅದರಿಂದ ನಮ್ಮ ದೇಶದ ಧಾರ್ಮಿಕ ಬಹುಸಂಖ್ಯಾತರ ಚುನಾವಣಾ ಬೆಂಬಲವನ್ನು ಕ್ರೋಡೀಕರಿಸುವ ನಿರೀಕ್ಷೆಯಿಟ್ಟುಕೊಂಡು 'ವೋಟ್ ಬ್ಯಾಂಕ್ ರಾಜಕೀಯ'ದ ಅತ್ಯಂತ

ಪುಟ 15 ಕ್ಕೆ





ಗರ್ಭದಲ್ಲಿ ಇನ್ನೂ ಅಮೂಲ್ಯವಾದ ಚಿನ್ನದ ಅದಿರನ್ನು ತುಂಬಿಕೊಂಡಿರುವ ಕೋಲಾರ ಚಿನ್ನದ ಗಣಿಯನ್ನು ಈ ವರೆಗೂ ಕೋಮಾದಲ್ಲಿರಿಸಿ ಈಗ ಚರ್ಮ, ಮೂಳೆಸಹಿತವಾಗಿ ನುಂಗಲು ವಿದೇಶಿ ತಿಮಿಂಗಿಲಗಳನ್ನು ಆಹ್ವಾನಿಸುತ್ತಿರುವುದು ಏಕೆ? ಗಣಿಯನ್ನು ಉಳಿಸಲು ನಡೆದ ಹೋರಾಟಗಳು, ಪ್ರಯತ್ನಗಳು ಹಾಗೂ ಚಿನ್ನದ ಗಣಿಯನ್ನು ಮುಚ್ಚಲು ನಿರಂತರವಾಗಿ ನಡೆದ ಪಿತೂರಿಗಳನ್ನೂ ಇಲ್ಲಿ ಪರಿಶೀಲಿಸೋಣ.

ಕೋಲಾರ ಚಿನ್ನದ ಗಣಿಯನ್ನು ಕೊಳ್ಳೆಹೊಡೆಯಲು ಜಂಟಿ ಪಿತೂರಿ :

– ಸು. ಮೊ. ಅಗತ್ಯಲಿಂಗಂ.

ಕೃಪೆ : ತೀಕದಿರ್, ತಮಿಳು ದೈನಿಕ. ಕನ್ನಡಕ್ಕೆ ಅನುವಾದ : ಅಚ್ಯುತ, ಕೆ.ಜಿ.ಎಫ್

2013 ಜುಲೈ 18 ರಂದು ಸಂಜೆ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಜಸ್ಟೀಸ್ ಶ್ರೀ ಅಲ್ತೊಮಾಸ್ ಕಬೀರ್ ನಿವೃತ್ತರಾದರು. ದಿನಾಂಕ 9 ರಂದು ಒಂದು ಮೊಕದ್ದಮೆಯ ಬಗ್ಗೆ ತನ್ನ ಛೇಂಬರ್‌ನಲ್ಲೇ ತೀರ್ಪನ್ನು ಓದಿದರು. ಆ ಮೊಕದ್ದಮೆಯ ವಿಚಾರಣೆ ಮುಂದಿನ ಆಗಸ್ಟ್ ತಿಂಗಳ 14 ನೇ ತಾರೀಕು ನಡೆಯುವುದಿತ್ತು. ಅವಸರ ಅವಸರವಾಗಿ ತೀರ್ಪು ನೀಡಲು ಕಾರಣವೇನು? 13 ವರ್ಷಗಳಿಂದ ಬೀದಿ ಪಾಲಗಿದ್ದ ಕೋಲಾರ ಚಿನ್ನದಗಣಿ ಕಾರ್ಮಿಕರ ಕುಟುಂಬಗಳಿಗೆ ಈ ಅವಸರದ ತೀರ್ಪು ಬೆಳಕು ನೀಡಬಲ್ಲುದೇ? ಈ ತೀರ್ಪನ್ನು ಸ್ವಾಗತಿಸಿ ಹೊಗಳುತ್ತಿರುವವರು ಯಾರು? ಮತ್ತು ಯಾಕೆ?

ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದಕ್ಕೆ ಮೊದಲು ಹಳೆಯ ವಿಷಯವೊಂದನ್ನು ಮೆಲುಕು ಹಾಕೋಣ. ಮು. ನ್ಯಾಯಧೀಶರಾಗಿದ್ದ ಶ್ರೀ ಬಾಲಕೃಷ್ಣರವರು ನಿವೃತ್ತರಾಗುವುದಕ್ಕೆ ಮೊದಲು ಅವಸರ ಅವಸರವಾಗಿ ನೀಡಿದ ತೀರ್ಪು ಕರ್ನಾಟಕದ ಗಣಿ ಕೊಳ್ಳೆಹೊಡೆಯುವವರೆಗೆ ಸಾರ್ಥಕವಾಗಿ ಬಂತು. ನಿವೃತ್ತರಾದ ಮೇಲೆ ವರಮಾನಕ್ಕಿಂತ ಅಧಿಕ ಆಸ್ತಿ ಶೇಖರಣೆಯ ಮೊಕದ್ದಮೆಯಲ್ಲಿ ಅವರು ಸಿಕ್ಕಿಹಾಕಿಕೊಂಡರು. ಇತ್ತೀಚೆಗೆ ತಮಿಳುನಾಡಿನ ಮ್ಯಾಜಿಸ್ಟೇಟರೊಬ್ಬರು ಮಹಿಳಾ ಸಬ್‌ಇನ್‌ಸ್ಪೆಕ್ಟರ್ ಒಬ್ಬರನ್ನು ಪ್ರೀತಿಸಿ ಸಂಸಾರ ನಡೆಸಿ ವಂಚನೆ ಮಾಡಿದ ಪ್ರಕರಣದಲ್ಲಿ ದಸ್ತಗಿರಿಯಾದರು. ಹರಿಯಾಣದ ನ್ಯಾಯಾಧೀಶರೊಬ್ಬರು ಹೆಂಡತಿಯನ್ನು ಕೊಂದು ಕೊಲೆಯನ್ನು ಮುಚ್ಚಿಹಾಕಲು ಪ್ರಯತ್ನಿಸಿದುದರಿಂದ ದಸ್ತಗಿರಿಯಾದರು. ನ್ಯಾಯಾಧೀಶರಲ್ಲಿ ಕೆಲವರು ಸಂದೇಹಾತೀತರಾಗಿ ಉಳಿದಿಲ್ಲ. ಹಾಗೆಯೇ ತೀರ್ಪುಗಳು ಕೂಡಾ ಕೆಲವು ಸಂದೇಹಾಸ್ಪದವಾದವುಗಳಲ್ಲ ಎನ್ನುವಂತಿಲ್ಲ.

ಚಿನ್ನದಬೆಲೆ ಏರುತ್ತಲೇ ಹೋಗುತ್ತಿದೆ. ಚಿನ್ನದ ಗಣಿಯನ್ನು ಖಾಸಗಿಯವರಿಗೆ ನೀಡಬಾರದು, ಸರ್ಕಾರವೇ ನಡೆಸಬೇಕು. ಸ್ಪಷ್ಟವಾದ ಕಾರಣ ಮತ್ತು ನಿರ್ದೇಶನಗಳನ್ನು ನೀಡಿ ಕರ್ನಾಟಕ ಉಚ್ಚನ್ಯಾಯಾಲಯ ನೀಡಿದ ತೀರ್ಪನ್ನು ರದ್ದುಗೊಳಿಸಿ ಜಾಗತಿಕ ಟೆಂಡರ್ ಕರೆದು ಖಾಸಗಿಯವರಿಗೆ ನಿಜವಾಗಿಯೂ ಬಂಗಾರದ ಮೊಟ್ಟೆಯಿಡುವ ಕೋಳಿಯನ್ನು ಧಾರೆ ಎರೆದು ಕೊಡಲು ಸುಪ್ರೀಂ ಕೊರ್ಟ್ ತೀರ್ಪು ನೀಡಿದ್ದು ಯಾಕೆ? ಮತ್ತು ಹೇಗೆ?

ಇದರ ನಿಜವಾದ ಪರಿಸ್ಥಿತಿಯನ್ನು ತಿಳಿದವರು, ತೀರ್ಪಿನ ಮರ್ಮವನ್ನು ತಿಳಿಯದೇ ಚಡಪಡಿಸುತ್ತಿದ್ದಾರೆ!. ಆದರೆ ಬದುಕೇ ಹರಿದು ಹೋಗಿರುವ ಕೋಲಾರ ಚಿನ್ನದ ಗಣಿಯ ಹಿರಿಯ ಕಾರ್ಮಿಕರು "ಈಟಿಯ ಮೊನೆಯು ಎಟುಕುವಷ್ಟರ ವರೆಗೆ ಮಾತ್ರ ಇಳಿಯುತ್ತದೆ. ಹಣವು ಪಾತಾಳದವರೆಗೂ ಇಳಿಯುತ್ತದೆ." ಎಂಬ ಗಾದೆಯನ್ನು ಸರ್ವಸಾಧಾರಣವಾಗಿ ಹೇಳಿಕೊಂಡು ನಗುತ್ತಾರೆ. ಅವರ ಅನುಭವ ಹಾಗೆ ಹೇಳುತ್ತದೋ ಏನೋ!



ಚಿನ್ನದ ಗಣಿಗಾರಿಕೆ ಇತಿಹಾಸ

ಕೋಲಾರದಲ್ಲಿ ಚಿನ್ನ ತೆಗೆಯುವ ಕಲೆ ಬಹಳ ಪುರಾತನವಾದದ್ದು. ನಾಗರಿಕ ಮಾನವ ಚಿನ್ನ ಎಂಬ 'ಹಳದಿ ಪಿಶಾಚಿ'ಯನ್ನು ಅದರ ಮೌಲ್ಯವನ್ನು ಅರಿತ ಕಾಲದಿಂದಲೂ ಚಿನ್ನದ ಕೆಲಸದಲ್ಲಿ ತೊಡಗಿಸಿಕೊಂಡ ಕೇಂದ್ರಗಳಲ್ಲಿ ಕೋಲಾರ ಕೂಡಾ ಒಂದು ಎಂದು ಚರಿತ್ರಕಾರರು ಹೇಳುತ್ತಾರೆ. ಬ್ರಿಟಿಷರು ಬರುವುದಕ್ಕೆ ಮೊದಲೇ ಹೈದರಲಿ ಟಿಪ್ಪುಸುಲ್ತಾನರೂ ಆ ಗಣಿಗಳಲ್ಲಿ ಚಿನ್ನವನ್ನು ತೆಗೆಸುತ್ತಿದ್ದರೆಂದು, ಅದಕ್ಕೆ ಮೊದಲು ವಿಜಯನಗರದ ಸಾಮ್ರಾಜ್ಯದ ರಾಜರುಗಳು ಕೂಡಾ ಇಲ್ಲಿ ಚಿನ್ನವನ್ನು ಅಗೆಸುತ್ತಿದ್ದರೆಂದೂ ತಿಳಿದು ಬರುತ್ತದೆ. ಆದರೂ 1880 ರಲ್ಲಿ ಜಾನ್‌ಟೇಲರ್ ಅಂಡ್ ಕಂಪನಿ ಈ ಕಾರ್ಯದಲ್ಲಿ ತೊಡಗಿಸಿಕೊಂಡ ನಂತರವೇ ವ್ಯವಸ್ಥಿತವಾದ ಗಣಿಗಳು ಮತ್ತು ಅದಕ್ಕೆ ಬೇಕಾದ ಸುಸಜ್ಜಿತವಾದ ಯಂತ್ರೋಪಕರಣಗಳೊಂದಿಗೆ ಗಣಿಗಾರಿಕೆ ಕೆಲಸ ಮಾಡಲು ಆರಂಭಿಸಿತು.

ತಮಿಳುನಾಡಿನ ಗುಯಾತ್ತಂ, ತಿರುಪೂರು, ವೇಲೂರು ಪ್ರದೇಶಗಳಿಂದ ಜೀತದಾಳುಗಳಾಗಿ ಇಲ್ಲಿಗೆ ಬಂದವರು – ಜಾತಿ ದೌರ್ಜನ್ಯಗಳನ್ನು ತಡೆಯಲಾರದೇ ಹೊಟ್ಟೆಪಾಡಿಗಾಗಿ ಇಲ್ಲಿಗೆ ಬಂದು ನೆಲೆಸಿದವರೇ ಅತ್ಯಧಿಕ ಮಂದಿಯಾಗಿದ್ದಾರೆ, ಹೆಚ್ಚಿನವರು ದಲಿತರು. "ಅಸ್ಪೃಶ್ಯತೆಯು, ತಮಿಳುನಾಡಿನಲ್ಲಿ ಇವರನ್ನು ದೇವಾಲಯದೊಳಗೆ ಪ್ರವೇಶಿಸಲು ಬಿಡದಿದ್ದಾಗ, ಇಲ್ಲಿ ಕ್ರೈಸ್ತದೇವಾಲಯಗಳ ಬಾಗಿಲುಗಳು ಇವರಿಗಾಗಿ ತೆರೆದದ್ದು. ತಮಗಾಗಿಯೇ ಸ್ವಂತ ದೇವರನ್ನು, ಸ್ವಂತ ದೇವಾಲಯಗಳನ್ನು ಮಾಡಿಕೊಳ್ಳಲು ಸಾಧ್ಯವಾದದ್ದು ದಲಿತರು ಇಲ್ಲಿಗೆ ಬರಲು ಪ್ರೋತ್ಸಾಹದಾಯಕವಾಯಿತು." ಎನ್ನುತ್ತಾರೆ. ಕರ್ನಾಟಕ ರಾಜ್ಯ ಸಿಐಟಿಯುವಿನ ಅಧ್ಯಕ್ಷರು ಮತ್ತು ಚಿನ್ನದಗಣಿ ಕಾರ್ಮಿಕ ಸಂಘದ ಅಧ್ಯಕ್ಷರು ಆಗಿರುವ ವಿ.ಜೆ.ಕೆ. ನಾಯರ್‌ರವರು.

ಸ್ವಾಭಿಮಾನ ಪ್ರಜ್ಞೆ, ರ
ವಿಮೋಚನೆಯ ಕೆಚ್ಚು ತಮಿಳುನಾಡಿ
ಉಕ್ಕಿಬರುತ್ತಿದ್ದುದರ ಪ್ರತಿಧ್ವನಿ ಇಲ್ಲಿಯ
ಬಲವಾಗಿ ಕೇಳಿಸಿತು. 1930
ಅವರಿಗೊಂದು ಗುರುತಿನ ಸಂಖ್ಯೆ
ತಾಮ್ರದ ತಗಡಿನಲ್ಲಿ ಗುರುತಿನ ಪಟ್ಟಿಯ
ಸಿದ್ಧಪಡಿಸಿ ಕಬ್ಬಿಣದ ಬಳೆಯಲ್ಲಿ ಒಂದು
ಬೇಡಿಯಂತೆ ತೊಡಿಸಲಾಗುತ್ತಿತ್ತು. ಇವ
ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ ಕಠಿಣವಾ
ಶಿಕ್ಷೆಯನ್ನು ಅನುಭವಿಸಬೇಕಾಗುತ್ತಿ
ಜೀತದಾಳುಗಳಂತೆ ಕೈಗಳಿಗೆ ಹಾಕಿರು
ಪಟ್ಟಿಗಳನ್ನು ತೆಗೆಯಬೇಕೆಂದು ಹಾಗ
ತೀವ್ರವಾದ ಚಳಿಯಿಂದ ತಪ್ಪಿಸಿಕೊಳ್ಳ
ಜಾಗಬೇಕೆಂದೂ ಒತ್ತಾಯಿಸಿ ಬೇಡಿಕೆಯ
ಮುಂದಿಟ್ಟು ಹೋರಾಟ ಭುಗಿಲೆದ್ದು
ದಿನಗಳ ಕಾಲ ನಡೆಯಿತು. ಕೆ. ಆರ್. ಷಣ್ಮು
ಚೆಟ್ಟಿಯಾರ್ ಎಂಬ ದೇಶಭಕ್ತರೊಬ್ಬ
ಸಂಘಟನೆಯ ಅಧ್ಯಕ್ಷರಾದರು. ಫಿಲಿ
ಕಾರ್ಯದರ್ಶಿಯಾದರು. ತೀವ್ರವಾ
ಹೋರಾಟ ನಡೆದು, ಗೋಲಿಬಾ
ನಡೆಯಿತು ಅದರಲ್ಲಿ 44 ಜನರಿಗೆ ತೀ
ಗಾಯಗಳಾದವು. ಈ ಭಾರಿ ಹೋರಾಟ
ನಂತರ ಕೈಗಳಿಗೆ ಹಾಕಿದ್ದ ಬೇಡಿಯಂತ
ಪಟ್ಟಿಗಳನ್ನು ತೆಗೆಯಲಾಯಿತು.

ಕಾರ್ಮಿಕ ವರ್ಗ ಜಾಗೃತಿ – ಹೋರಾಟ

ಕಾರ್ಮಿಕರ ಮಧ್ಯೆ ನಿಧಾನವಾಗಿ ಕಾರ್ಮಿ
ಸಂಘದ ಪ್ರಜ್ಞೆ ಉಂಟಾಗಲಾರಂಭವಾಯಿತ
ತಮಿಳುನಾಡಿನ ಮುಖಂಡರಾದ
ಜೀವಾನಂದಂ ಚಾರಿ, ಸರ್ಕರೈ ಚೆ
ಟ್ಟಿಯಾರ್ ಮುಂತಾದ ಮುಖಂಡ
ಪ್ರಮುಖ ಪಾತ್ರ ವಹಿಸಿದರು. ಬೇರೆ ಕೆಲ
ಕಾರ್ಮಿಕ ಸಂಘಗಳಿದ್ದರೂ, ಕೆಂಬಾವುಟ
ಸಂಘಟನೆ ಕಾರ್ಮಿಕರ ಸಂಗಾತಿಯಾ
ಮುಂಚೂಣಿಯ ನಾಯಕ ಸ್ಥಾನ ಪಡೆಯಿತ
ನಿರಂತರವಾಗಿ ಹಲವು ಹೋರಾಟಗ
ನಡೆದವು.

ಕೆಂಬಾವುಟದ ಸುಪುತ್ರರಾದ ಕೆ.ಎಸ
ವಾಸನ್, ವಿ.ಎಂ. ಗೋವಿಂದನ್ ಅಪ್ರತಿ
ನಾಯಕರಾಗಿ ಹೊರಹೊಮ್ಮಿದರು. 19
ಜನವರಿ 7 ರಿಂದ ಮಾರ್ಚ್ 22 ರವರ
77 ದಿನಗಳ ವರೆಗೆ ಧೀರೋದ್ದಾತವಾ
ಹೋರಾಟ ನಡೆಯಿತು.
ಪರಿಣಾಮವಾಗಿ 12 ಆಣೆ (75ಪೈಸೆ) ಇ
ಕೂಲಿ 1 ರೂಪಾಯಿ ಒಂದಾಣೆಗೆ (1

ಜನಶಕ್ತಿ
ಕನ್ನಡ ವಾರಪತ್ರಿಕೆ

ಪೈಸೆ) ಕೂಲಿ ಹೆಚ್ಚಳವಾಯಿತು. ಬೇರೆ ಕೆಲವು ಸವಲತ್ತುಗಳೂ ಸಿಕ್ಕಿದವು.

ಮೈಸೂರು ಸಂಸ್ಥಾನಕ್ಕೆ ಜವಾಬ್ದಾರಿಯುತ ಸರಕಾರವನ್ನು ರಚಿಸಬೇಕೆಂಬ ಹೋರಾಟದಲ್ಲಿ ಕಾರ್ಮಿಕರು ಕುಂದದ ಉತ್ಸಾಹದಿಂದ ಭಾಗವಹಿಸಿದರು. ಬ್ರಿಟಿಷ್ ಆಡಳಿತವು ಇದರಿಂದ ಕೆರಳಿ ಕಾರ್ಮಿಕ ಸಂಘಟನೆಯನ್ನು ಛಿದ್ರಗೊಳಿಸಲು ಪಿತೂರಿ ನಡೆಸಿತು. ಆಗ ದಿಢೀರನೆ 1946 ನವೆಂಬರ್ 3ನೇ ತಾರೀಕು ಹೋರಾಟ ಆರಂಭವಾಯಿತು. ಅದು ಮುಂದುವರೆದು ನವೆಂಬರ್ 4ನೇ ತಾರೀಕು ನಡೆದ ಗೋಲಿಬಾರಿನಲ್ಲಿ ಕಾಳಿಯಪ್ಪನ್, ರಾಮಸ್ವಾಮಿ, ರಾಮಯ್ಯ, ಸುಬ್ರಮಣ್ಯ ಮುಂತಾದ 6 ಮಂದಿ ಹತರಾದರು. ಗೋವಿಂದನ್ ಮತ್ತು ವಾಸನ್‌ರವರನ್ನು ದಸ್ತಗಿರಿ ಮಾಡಲಾಯಿತು. ಕಾರ್ಮಿಕ ಸಂಘಟನೆಗಳ ನಡುವೆ ಗಲಭೆ ಸೃಷ್ಟಿಸಲಾಯಿತು. ಹಿಂದೂ ಮುಸ್ಲಿಂ ಕೋಮುಗಲಭೆಯಾಗಿ ಮಾರ್ಪಡಿಸುವ ಪ್ರಯತ್ನ ಬ್ರಿಟಿಷರಿಂದ ನಡೆಯಿತು.



ವಿಜೆಕೆ ನಾಯರ್

ಪತ್ರಕರ್ತರಾಗಿರುವ ಪಿ. ಸಾಯಿನಾಥ ರವರು ಲೇಖನವೊಂದರಲ್ಲಿ ಬರೆದಿರುವಂತೆ ಹಲವು ಮತ, ಜಾತಿ, ಭಾಷೆ, ಪಂಗಡಗಳಿದ್ದರೂ ದ್ವೇಷವಿಲ್ಲ. ಸಮಭಾವದಿಂದ ಕೋಲಾರ ನಡೆದುಕೊಂಡು ಬಂದಿರುವುದೇ ಪರಂಪರೆಯಾಗಿದೆ. ಹೋರಾಟಗಳು ಮುಂದುವರೆದವು. ಬ್ರಿಟಿಷರು ದೇಶವನ್ನು ಬಿಟ್ಟು ಹೋದರು. ಆದರೆ ಚಿನ್ನದ ಗಣಿಯನ್ನು ಬಿಟ್ಟು ಹೋಗಲಿಲ್ಲ. 1966 ರಲ್ಲಿ ಮೈಸೂರು ಸರ್ಕಾರ ಗಣಿಯನ್ನು ತನ್ನ ವಶಕ್ಕೆ ತೆಗೆದುಕೊಂಡ ನಂತರವೇ ಅದು ಭಾರತದ ಸೊತ್ತಾಯಿತು. 1972 ರಲ್ಲಿ ಕೇಂದ್ರ ಸರ್ಕಾರ ಗಣಿಯನ್ನು ರಾಷ್ಟ್ರೀಕರಣ ಮಾಡಿತು. ಹೋರಾಟಗಳ ಫಲವಾಗಿ ವಾಸಕ್ಕೆ ಮನೆ, ಉಚಿತ ಶಿಕ್ಷಣ, ನೈರ್ಮಲ್ಯ, ಕುಡಿಯುವ ನೀರು, ಸಾಮಾಜಿಕ ಅಭಿವೃದ್ಧಿ ಯೋಜನೆಗಳು ದೊರೆತವು. 1956 ಕ್ಕೆ ಮೊದಲು ಒಮ್ಮೆ ಕೆ.ಎಸ್. ವಾಸನ್ ಮತ್ತೊಮ್ಮೆ ಎಂ.ಸಿ. ನರಸಿಂಹನ್ ಕಮ್ಯುನಿಸ್ಟ್ ಪಕ್ಷದ ಶಾಸಕರಾಗಿ ಚುನಾಯಿತರಾದರು. ಮುಂದೆ ರಾಜಗೋಪಾಲ ಕಮ್ಯುನಿಸ್ಟ್ ಪಕ್ಷದ ಶಾಸಕರಾಗಿ ಚುನಾಯಿತರಾದರು. ಮುಂದೆ ಕಾಂಗ್ರೆಸ್ ಪಕ್ಷವನ್ನು ಸೇರಿದರು. ತೇನ್.ಸು. (ಟಿ.ಎಸ್) ಮಣಿಯವರು ಕಮ್ಯುನಿಸ್ಟ್ ಪಕ್ಷದ ಶಾಸಕರಾದರು. ಆರ್.ಪಿ.ಐ, ಎಐಎಸ್‌ಎಂಕೆ ಕಾಂಗ್ರೆಸ್ ಪಕ್ಷಗಳ ಅಭ್ಯರ್ಥಿಗಳು ಬಹಳ ಸಲ ಚುನಾವಣೆಯಲ್ಲಿ ಗೆದ್ದು ಬಂದರು. ಕಾರ್ಮಿಕ ಸಂಘಗಳಲ್ಲೂ ಪಕ್ಷಗಳ ಬೆಂಬಲಿತ ಸಂಘಗಳು ಬಲಗೊಂಡವು.

ಬೀದಿಗೆ ಬಿದ್ದ ಕಾರ್ಮಿಕರು

ಚಿನ್ನದಗಣಿಯ ಪ್ರತಿ ನೂರು ಅಡಿಗಳನ್ನು ಒಂದು ಲೆವೆಲ್ ಎಂದು ಕರೆಯುತ್ತಾರೆ. ಒಂದೊಂದು ಲೆವೆಲ್‌ನಂತೆ ಕೆಳಗೆ ಹೋಗುತ್ತಾ ಹೋಗುತ್ತಾ ಕಾರ್ಮಿಕರ ಸಂಕಷ್ಟಗಳು ಹೆಚ್ಚುತ್ತಾ ಹೋದವು. 'ಸಿಲಿಕಾಸಿಸ್' ಎಂಬ ಈ ಉದ್ಯೋಗಕ್ಕೆ ಸಂಬಂಧಪಟ್ಟ ಖಾಯಿಲೆ ತೀವ್ರವಾಗಿ ಬಾಧಿಸಿತು. ಶ್ವಾಸಕೋಶವನ್ನು ಧೂಳು ಆವರಿಸುವುದರಿಂದ ಉಸಿರಾಡಲು ತೊಂದರೆ, ರಕ್ತವಾಂತಿ, ನೆಗಡಿ, ಜ್ವರ, ಮುಂತಾದವುಗಳಿಂದ ಸಾವು ಸಂಭವಿದವು.

'ಸಿಲಿಕಾಸಿಸ್ ಮತ್ತು ವಿಪತ್ತುಗಳಿಂದಲೂ ಈ ಗಣಿಯಲ್ಲಿ ಕೆಲಸ ಮಾಡಿರುವ 8000 ಮಂದಿ ಕಾರ್ಮಿಕರು ಪ್ರಾಣಕಳೆದುಕೊಂಡಿದ್ದಾರೆ. ಈ ವರೆಗೆ 800 ಟನ್ ಬಂಗಾರವನ್ನು ಹೊರ ತೆಗೆಯಲಾಗಿದೆ. ಅದಕ್ಕಾಗಿ ಪ್ರಾಣತೆತ್ತ ಈ ಜೀವಗಳಿಗೆ ಹೇಗೆ ಬೆಲೆಕಟ್ಟುವುದು? ಯಾವ ಲೆಕ್ಕದಲ್ಲಿ ಅದನ್ನು ಸೇರಿಸುವುದು?

ಲೆವೆಲ್ 174 ರ ನಂತರ ಕಾರ್ಮಿಕರು ಜೀವಗಳನ್ನು ಪಣಕ್ಕಿಟ್ಟು ಕೆಳಗೆ ಹೋಗಲು ಹಿಂಜರಿದರು. ಆಡಳಿತದ ದಬ್ಬಾಳಿಕೆಯಿಂದಲೂ ಕಾರ್ಮಿಕರನ್ನು ಹೊರಹಾಕಿರುವುದರಿಂದಲೂ ಹಂತಹಂತವಾಗಿ ಕಾರ್ಮಿಕರ ಸಂಖ್ಯೆ 8000 ಸಾವಿರಕ್ಕೆ ಇಳಿಯಿತು. ನೇಮಕಾತಿ ತಡೆಯು ಜಾರಿಗೆ ಬಂತು. ಇದರಿಂದಾಗಿ ಅತ್ಯಾವಶ್ಯಕ ಕೆಲಸಗಳಿಗೆ ಕೆಲಸಗಾರರನ್ನು



ಟಿ. ಎಸ್. ಮಣಿ

ನೇಮಿಸಿಕೊಳ್ಳಲಾಗದೆ ತುಂಬಾ ಕಷ್ಟವಾಯಿತು. ಗಣಿಯನ್ನು ಮುಚ್ಚಿದ ಸಂದರ್ಭದಲ್ಲಿ ಬರೇ 3500 ಮಂದಿ ಕಾರ್ಮಿಕರು ಮಾತ್ರ ಕೆಲಸ ಮಾಡುತ್ತಿದ್ದರು. 2001 ರಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಗಣಿ ಮುಚ್ಚಲ್ಪಟ್ಟಿತು. ಕೆಲಸ ನಿಂತು ಹೋಯಿತು. ಕಾರ್ಮಿಕರು ಯಾವುದೇ ಹಣದ ಪರಿಹಾರವಿಲ್ಲದೆ ಬೀದಿಗೆ ಬೀಳುವಂತಾಯಿತು. ದಿನಕೂಲಿಗಳಾಗಿ ಹೊಟ್ಟೆಪಾಡಿಗಾಗಿ ದಿನಂಪ್ರತಿ ಬೆಂಗಳೂರಿಗೆ ಪ್ರಯಾಣಿಸುವಂತಾಯಿತು. ಚಿನ್ನದ ಗಣಿಯನ್ನು ಮುಚ್ಚಲು ನಷ್ಟದ ಕಾರಣವನ್ನು ನೀಡಲಾಗಿದ್ದರೂ ನಿಜವಾದ ಕಾರಣವೇ?

ಗಣಿ ಮುಚ್ಚಲು ಕಾರಣವೇನು?

ಚಿನ್ನದ ಗಣಿಯಲ್ಲಿ ನಷ್ಟ ಯಾಕೆ? ಎಂಬುದನ್ನು ತಿಳಿದುಕೊಳ್ಳಲು 1992–93 ರಲ್ಲಿ ಎನ್.ಎಫ್.ಆರ್. ಚಾರಿ ಕಮಿಷನ್ ರಚಿಸಲಾಯಿತು. ಚಿನ್ನದ ಬೆಲೆ ಏರುತ್ತಿರುವಾಗ ನಷ್ಟ ಯಾಕೆ? ಈ ಪ್ರಶ್ನೆ ಚಾರಿಯವರನ್ನು ಕೆಣಕಿತು. ಬೇರೆ ಪದಾರ್ಥಗಳ ಉತ್ಪಾದನೆಯಲ್ಲಿ ಮಾರಾಟದ ಶ್ರಮ ಅಧಿಕ. ಇಲ್ಲಿ ಉತ್ಪಾದನೆಯ ಪದಾರ್ಥವೇ ಚಿನ್ನ. ಖರೀದಿಸುವುದು ಸರ್ಕಾರ. ಹೀಗಾದರೆ ನಷ್ಟ ಯಾಕೆ? ಚಿನ್ನದ ಬೆಲೆ ಸ್ಥಳೀಯ ಮಾರುಕಟ್ಟೆಯಲ್ಲಿ ಪ್ರತಿದಿನ ಏರುತ್ತಿರುವಾಗ ಚಿನ್ನದ ಮೇಲೆ ನಿಯಂತ್ರಣವಿದ್ದ ಅಂದಿನ ಪರಿಸ್ಥಿತಿಯಲ್ಲಿ ಲಂಡನ್ ಮಾರುಕಟ್ಟೆಯ ಪರಿಸ್ಥಿತಿಗೆ ಅನುಗುಣವಾಗಿ ಚಿನ್ನದ ಬೆಲೆಯನ್ನು ಕಡಿಮೆ ಮಾಡಲು ಸರ್ಕಾರ ನಿರ್ಧರಿಸಿತು. ಆದುದರಿಂದ 1972 ರಿಂದ 1985 ರ ವರೆಗೆ 13 ವರ್ಷಗಳ ಕಾಲ ಈ ದರದ ತಾರತಮ್ಯದಿಂದಾಗಿ 8400 ಕೋಟಿ ರೂಪಾಯಿಗಳನ್ನು ಸರ್ಕಾರ ಮರೆಮಾಚಿ ಬಾಚಿ-ಕೊಂಡಿತು. ಸರ್ಕಾರವು ಒಂದು ಪೈಸೆ ಕೂಡಾ ಗಣಿಗೆ ಬಂಡವಾಳ ಹಾಕಲಿಲ್ಲ ಎಂಬುದನ್ನು ಜೊತೆಯಲ್ಲೇ ನೋಡಬೇಕು. ಮೈಸೂರು ಮೈನ್ಸ್, ನಂದಿದುರ್ಗಾ, ಛಾಂಪಿಯನ್ ಗಣಿ – ಮೂರರಲ್ಲೂ ಇದೇ ಪರಿಸ್ಥಿತಿ. ಚಾರಿ ಕಮಿಷನ್ ನಂತರ ನಟರಾಜನ್ ಕಮಿಷನ್ ರಚನೆಯಾಯಿತು. ಅದು ಕೂಡಾ ಸಮೀಕ್ಷೆಯ ನಂತರ ಸರ್ಕಾರದ ಪರದೆ-ಯ ಹಿಂದಿನ ಲೂಟಿಯನ್ನು ಬಹಿರಂಗ ಪಡಿಸಲು ಹಿಂಜರಿಯಲಿಲ್ಲ.

ಇದರ ಮಧ್ಯೆ ಚಿನ್ನದ ಉತ್ಪತ್ತಿ ಕಡಿಮೆಯಾಯಿತು. ಮೇಲ್ಮಟ್ಟದಲ್ಲಿ ಒಂದು ಟನ್ ಅದಿರಿಗೆ 20 ಗ್ರಾಂ ಚಿನ್ನ ಸಿಗುತ್ತಿದ್ದ ಕಾಲ ಹೋಗಿ, ಹಂತ ಹಂತವಾಗಿ 7 ಗ್ರಾಂ, 5 ಗ್ರಾಂಗೆ ಇಳಿಯಿತು. ಆದರೂ ಸಮಸ್ಯೆ ಇರಲಿಲ್ಲ. ಆದರೆ 174 ಲೆವೆಲ್‌ನಲ್ಲಿ ಅದು ಬರೀ 0.7 ಗ್ರಾಂಗೆ ಇಳಿಯಿತು. ಆಗ ಉತ್ಪಾದನಾ ವೆಚ್ಚ ತುಂಬಾ ಹೆಚ್ಚಾಯಿತು. ಸ್ವಯಂ ನಿವೃತ್ತಿ ಯೋಜನೆ ನಿಧಿಯ ಭಾರವೂ, ಅದಕ್ಕೆ ಕೇಂದ್ರಸರ್ಕಾರ ನೀಡಿದ ಹಣಕ್ಕೆ 17% ಬಡ್ಡಿಯ ಭಾರವೂ ಗಣಿಯನ್ನೂ ಉಸಿರು ಕಟ್ಟಿಸಿತು. ಗಣಿಯನ್ನು ಮುಚ್ಚಿ, ಕಾರ್ಮಿಕರನ್ನು ಹಿಂಡಿ ಹಿಪ್ಪೆ ಮಾಡಿ ಹೊರಗೆಸೆಯಲಾಯಿತು.

'ಡೆತ್ ಆಫ್ ಮೈನ್ಸ್' ('ಚಿನ್ನದ ಗಣಿಯ ಮರಣ') ಎಂದು ಇದರ ಕಥೆಯನ್ನು "ಫ್ರಂಟ್‌ಲೈನ್" ಪತ್ರಿಕೆಯಲ್ಲಿ ಪಾರ್ವತಿ ಮೆನನ್ ರವರು ಬರೆದು ಮೇಲಿನ ತಲೆ ಬರಹ ನೀಡಿದರು. ಆದರೆ ಚಿನ್ನದ ಗಣಿಯನ್ನು ಕೊಲ್ಲದೆ, ಕೋಮಾ ಹಂತದಲ್ಲಿ ಈ ವರೆಗೂ ಇಟ್ಟಿದ್ದು ಈಗ ಚರ್ಮ ದೇಹದ ಸಮೇತ ನುಂಗಲು ವಿದೇಶಿ ತಿಮಿಂಗಿಲಗಳನ್ನು ಆಹ್ವಾನಿಸುತ್ತಿರುವುದು ಏಕೆ? ಗಣಿಯನ್ನು ಉಳಿಸಲು ನಡೆದ ಹೋರಾಟಗಳು, ಪ್ರಯತ್ನಗಳು ಹಾಗೂ ಇದನ್ನು ಮುಚ್ಚಲು ನಿರಂತರವಾಗಿ ನಡೆದ ಪಿತೂರಿಗಳನ್ನೂ ಸ್ವಲ್ಪ ಪರಿಶೀಲಿಸೋಣ.

ಪಿತೂರಿಗಳು :

1992 ರಲ್ಲಿ ಬಿ.ಇ.ಎಫ್.ಆರ್.ಐ. ಎಂಬ ಕೈಗಾರಿಕಾ ಆರ್ಥಿಕ ಪುನರುಜ್ಜೀವನ ನಿಗಮದ ಮುಂದೆ ಚಿನ್ನದಗಣಿಯ ವಿಷಯ ಪರಿಶೀಲನೆಗೆ ಬಂತು. ಎಂಟು ಬಾರಿ ಸೇರಿ ಚರ್ಚಿಸಿ 2000 ಇಸವಿಯಲ್ಲಿ ಚಿನ್ನದ ಗಣಿಯನ್ನು ಮುಚ್ಚಿಬಿಡಲು ಆದೇಶ ನೀಡಿತು. ಎ.ಎ.ಐ.ಎಫ್.ಆರ್. ಎಂಬ ಕೈಗಾರಿಕಾ ಪುನರುಜ್ಜೀವನ ನಿಗಮವು ಕೂಡಾ ಅದೇ ವರ್ಷದ ಕೊನೆಯಲ್ಲಿ ಅದೇ ತೀರ್ಮಾನಕ್ಕೆ ಬಂತು. ಒಂದು ಟನ್ ಅದಿರಿಗೆ ಸಿಗುವ ಬಂಗಾರ ಒಂದು ಗ್ರಾಂಗಿಂತಲೂ ಕಡಿಮೆ ಆಗಿರುವುದರಿಂದ ಉತ್ಪಾದನೆಯನ್ನು ಹೆಚ್ಚಿಸಿದಷ್ಟು ನಷ್ಟವೇ ಹೆಚ್ಚಾಗುತ್ತದೆ ಎಂದು ಹೇಳಿತು. ಇದೇ ಸಂದರ್ಭದಲ್ಲಿ ಕಾರ್ಮಿಕರ ಒಂದು ಭಾಗ ಮತ್ತು ಸೂಪರ್‌ವೈಸರ್‌ಗಳು ಸೇರಿದ ಒಂದು ಗುಂಪು ಸಹಕಾರಿ ಸಂಘದ ಮೂಲಕ ಗಣಿಯನ್ನು ನಡೆಸಲು ಅವಕಾಶ ನೀಡಬೇಕೆಂದು ಕೇಳಿದ ಅನುಮತಿಗೆ ನಿಗಮವು ಕೆಲವು ನಿಬಂದನೆಗಳೊಂದಿಗೆ ಒಪ್ಪಿಗೆ ನೀಡಿತು. ಮೊದಲು ಸಹಕಾರಿ ಅನ್ನುವುದರ ಬದಲಿಗೆ ಶೇರ್ ಹೋಲ್ಡರ್ಸ್ ಎಂದು ಬದಲಾಯಿಸಬೇಕು, ಜಾಗತಿಕ ಟೆಂಡರ್ ಮೂಲಕ ಅಂದರೆ ಗ್ಲೋಬಲ್ ಟೆಂಡರ್‌ನ ಮೂಲಕ ಬೆಲೆಯನ್ನು ನಿರ್ಧರಿಸಬೇಕು–ಮುಂತಾದ ಹಲವು ನಿಬಂಧನೆಗಳನ್ನು ವಿಧಿಸಲಾಯಿತು. ಈ ಗುಂಪೇ ಕೇಂದ್ರ ಮಂತ್ರಿ ಕೆ.ಹೆಚ್. ಮುನಿಯಪ್ಪರವರ ಕೈಗೊಂಬೆ ಸಂಸ್ಥೆ ಎಂಬುದು ಇಡೀ ಊರಿಗೆ ಗೊತ್ತಿರುವ ಅಂಗೈ ಹುಣ್ಣು. ಅವರ ಹಿಂದೆ ಆಸ್ಟ್ರೇಲಿಯ ಕಂಪನಿ ಇರುವುದು ಸ್ಪಟಿಕದಂತೆ ಸ್ಪಷ್ಟ. ಇವರು ಮುಂದಿಟ್ಟ ಬೇಡಿಕೆಗಳಾವುದೂ ಹೊಸದಲ್ಲ. ಸಿ.ಐ.ಟಿ.ಯು.ನಿಂದ ಹೈಜಾಕ್ ಮಾಡಿದವುಗಳೇ ಆಗಿವೆ. ಆದರೆ ಗ್ಲೋಬಲ್



ಸವರಿದಾಸ್

ಟೆಂಡರ್‌ಗೆ ಬಿಡುವುದರಿಂದ ಕಾರ್ಮಿಕರ ಬೇಡಿಕೆಗಳು ಜಾರಿಯಾಗದೆ ನೀರಲ್ಲಿ ಹೋಮಮಾಡಿದಂತೆ ಆಗುತ್ತದೆ. ಇದು ಆಸ್ಟ್ರೇಲಿಯ ಕಂಪನಿಗೆ ಸಾಧಕವಾಗುವಂತೆ ಈ ಸಂಸ್ಥೆಯ ಜನ ಮಾಡುತ್ತಾರೆ ಎಂದು ಹಿರಿಯ ಸಂಗಾತಿಗಳ ಅನುಭವದ ಮಾತು.

ಆಸ್ಟ್ರೇಲಿಯ ಕಂಪನಿ, ಲಾಭವಿಲ್ಲದ ಕೈಗಾರಿಕೆಯನ್ನು ವಶಪಡಿಸಿಕೊಂಡು ಹುಚ್ಚುನಾಯಿಯಂತೆ ಅಲೆಯಲು ಸಾಧ್ಯವೇ?

ಪುಟ 12 ಕ್ಕೆ


ಬೆಂಗಳೂರು: ಸರ್ಕಾರಿ ಕಲಾ ಕಾಲೇಜಿನ ಸ್ನಾತಕೋತ್ತರ ವಿಭಾಗ ಹಾಗೂ ಸಂಶೋಧನಾ ಕೇಂದ್ರ

ಹಣ ಮಂಜೂರಾಗಿದ್ದರೂ ಕಟ್ಟಡ ವಿಳಂಬ ಏಕೆ ?

ಸರ್ಕಾರಿ ಕಲಾ ಕಾಲೇಜಿನ ಸ್ನಾತಕೋತ್ತರ ವಿಭಾಗ ಹಾಗೂ ಸಂಶೋಧನಾ ಕೇಂದ್ರಕ್ಕೆ ಪ್ರತ್ಯೇಕ ಕಟ್ಟಡವನ್ನು ಶೀಘ್ರವಾಗಿ ನಿರ್ಮಿಸಲು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಕಾಲೇಜಿನಿಂದ ಕೆ.ಆರ್. ವೃತ್ತದವರೆಗೆ ಪ್ರತಿಭಟನಾ ರ್‍ಯಾಲಿ ನಡೆಸಲಾಯಿತು. ಪ್ರತಿಭಟನೆಯಲ್ಲಿ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರತಿಭಟನೆಯನ್ನು ಉದ್ದೇಶಿಸಿ ಎಸ್‌ಎಫ್‌ಐನ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಎಸ್.ಚಿಕ್ಕರಾಜು, ಜಿಲ್ಲಾಧ್ಯಕ್ಷ ಮುನಿರಾಜು.ಎಂ, ರಾಜ್ಯ ಉಪಾಧ್ಯಕ್ಷ ಗುರುರಾಜ್ ದೇಸಾಯಿ ಮಾತನಾಡಿದರು. ಜಿಲ್ಲಾ ಉಪಾಧ್ಯಕ್ಷ ಯುವರಾಜ್, ಕೆ.ಎನ್. ನವೀನ್‌ಕುಮಾರ್, ಹನುಮಂತ್ ದುರ್ಗದ್, ಕಾಲೇಜು ಘಟಕದ ಅಧ್ಯಕ್ಷೆ ಸೌಭಾಗ್ಯ, ಘಟಕ ಕಾರ್ಯದರ್ಶಿ ಉಮಾಶಂಕರ್, ಶ್ವೇತಾ ಮುಂತಾದ ವಿದ್ಯಾರ್ಥಿ ಮುಖಂಡರು ನೇತೃತ್ವ ವಹಿಸಿದ್ದರು.

ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿದ ಆಯುಕ್ತರು ಇಲಾಖೆಯಿಂದ 70 ಲಕ್ಷ ಹಣ ಬಿಡುಗಡೆಯಾಗಿದ್ದು, ಕೆಲಸದ ಹಿನ್ನಡೆಯಾಗಲು ಕಾರಣ ತಿಳಿದು ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಿಗೂ ಮನವಿ ಪತ್ರ ಸಲ್ಲಿಸಲಾಯಿತು.

ಪ್ರತಿಭಟನೆಯ ಫಲವಾಗಿ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕಿ ಭಾಗ್ಯಲಕ್ಷ್ಮಿಯವರು



ಖುದ್ದಾಗಿ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿದರು.

ಸರ್ಕಾರಿ ಕಲಾ ಕಾಲೇಜಿಗೆ ಸುಮಾರು 136 ವರ್ಷಗಳ ಇತಿಹಾಸವಿದೆ. ಪ್ರಸ್ತುತ ಈ ಕಾಲೇಜಿನಲ್ಲಿ 1500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ವಿಭಾಗಗಳಾದ ಬಿಎ, ಬಿಕಾಂ, ಬಿಬಿಎಂಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಈ ವಿದ್ಯಾರ್ಥಿಗಳಿಗೆ ಅಗತ್ಯ ಕೊಠಡಿಗಳ ಕೊರತೆ ಇದ್ದು, ಪಾಳೀ ಪದ್ಧತಿಯಲ್ಲಿ ತರಗತಿಗಳು ನಡೆಯುತ್ತಿವೆ. ಜೊತೆಗೆ 2008ರಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಮಂಜೂರು ಮಾಡಿದ್ದು ಪ್ರಸ್ತುತ ಕನ್ನಡ, ಇತಿಹಾಸ, ಇಂಗ್ಲೀಷ್, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳಶಾಸ್ತ್ರ, ಸೇರಿದಂತೆ ಒಟ್ಟು 6 ವಿಭಾಗಗಳಿವೆ. ಪದವಿ ತರಗತಿಗಳು ಪ್ರಾರಂಭವಾದಾಗ ಕೊಠಡಿಗಳ ಅಭಾವ ತೀವ್ರವಾಗುತ್ತದೆ. ಪ್ರಸ್ತುತವಾಗಿ 2013–14ನೇ ಸಾಲಿನ ಪದವಿ ಮತ್ತು ಸ್ನಾತಕೋತ್ತರ ಪದವಿ ವಿಭಾಗದ ತರಗತಿಗಳು ಪ್ರಾರಂಭವಾಗಿವೆ. ಪ್ರಥಮ ಸ್ನಾತಕೋತ್ತರ ಕನ್ನಡ, ಇತಿಹಾಸ, ಮತ್ತು ಇಂಗ್ಲೀಷ್ ಈ ಮೂರು ವಿಭಾಗಗಳಿಗೆ ಕೊಠಡಿಗಳಿಲ್ಲದೆ ಇದೇ ಕಾಲೇಜಿನ ಬಾಪೂಜಿ ಸಭಾಂಗಣದಲ್ಲಿ ತರಗತಿ ನಡೆಯುತ್ತಿರುವ ದುಸ್ಥಿತಿ ಒದಗಿ ಬಂದಿದೆ. ಅದಲ್ಲದೆ ವಾಚನಾಲಯದಲ್ಲೂ ತರಗತಿಗಳು ನಡೆಯುತ್ತಿರುವುದು ಕಾಲೇಜಿನಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳೆರಡೂ ವಿಭಾಗದ ವಿದ್ಯಾರ್ಥಿಗಳಿಗೆ ಪೂರಕವಾದ ಶೈಕ್ಷಣಿಕ ವಾತಾವರಣವಿಲ್ಲದಂತಾಗಿದೆ. ಈ ಬಗ್ಗೆ ಸರ್ಕಾರ ಗಮನಹರಿಸದೇ ಇರುವುದರಿಂದ ವಿದ್ಯಾರ್ಥಿಗಳ ಸಮಸ್ಯೆಗಳು ಉಲ್ಬಣವಾಗಿವೆ.

ಈ ವಿಷಯವಾಗಿ ಸಂಘಟನೆಯಿಂದ ಹಲವಾರು ಬಾರಿ ಪ್ರತಿಭಟನೆ ನಡೆಸಿ ಫಲವಾಗಿ ಪ್ರತ್ಯೇಕ ಸ್ನಾತಕೋತ್ತರ ಪ ವಿಭಾಗಕ್ಕೆ ಕಟ್ಟಡ ನಿರ್ಮಾಣ ಮಾಡ ಇಲಾಖೆಯಿಂದ 1 ಕೋಟಿ 10 ಲಕ್ಷ ರ ಮಂಜೂರಾಗಿದೆ. ಆದ್ದರಿಂದ ಸ್ನಾ ಕೋತ್ತರ ವಿದ್ಯಾರ್ಥಿಗಳಿಗೆ ಬೇಕಾದಂ ಉತ್ತಮ ಶೈಕ್ಷಣಿಕ ವಾತಾವರಣ ಒದಗಿಸ ಅತೀ ಶೀಘ್ರವಾಗಿ ಸ್ನಾತಕೋತ್ತರ ವಿಭ ಹಾಗೂ ಸಂಶೋಧನಾ ಕೇಂದ್ರಕ್ಕೆ ಪ್ರತ್ಯೆ ಕಟ್ಟಡವನ್ನು ಸ್ಥಾಪಿಸಬೇಕೆಂದು ಎಸ್‌ಎಫ ಮುಖಂಡರು ಆಗ್ರಹಿಸಿದರು.

ಅಗತ್ಯಕ್ಕೆ ತಕ್ಕಂತೆ ಉಪನ್ಯಾಸಕರುಗಳ ನೇಮಿಸಬೇಕು. ಗ್ರಂಥಾಲಯದಲ್ಲಿ ಅ ಪಠ್ಯಪುಸ್ತಕಗಳನ್ನು ಒದಗಿಸಬೇಕು. ಶು ಕುಡಿಯುವ ನೀರು, ಶೌಚಾಲಯ ಸೇರಿದ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇ ಕಾಲೇಜಿನ ಕೊಠಡಿಗಳು ಸೋರುತ್ತಿರ ತುರ್ತಾಗಿ ಕೊಠಡಿಗಳನ್ನು ಸರಿಪಡಿಸಬೇಕು ವಿ.ವಿ.ಹೆಚ್ಚಿಸಿರುವ ಎಲ್ಲಾ ಶುಲ್ಕಗಳ ಕಡಿತಗೊಳಿಸಬೇಕು. ವಿದ್ಯಾರ್ಥಿಗಳ ಫಲಿತಾಂ ಮತ್ತು ಅಂಕಪಟ್ಟಿಗಳನ್ನು ಸೂಕ್ತ ಸಮ ನೀಡಬೇಕು. ಕಾಲೇಜು ವಿದ್ಯಾರ್ಥಿಗಳ ಕ್ಯಾಂಟೀನ್‌ನಲ್ಲಿ 5.00 ರೂ. ದರದ ಊಟವನ್ನು ನೀಡಬೇಕು. ಬಾಕಿಯಿರು ವಿದ್ಯಾರ್ಥಿ ವೇತನವನ್ನು ಶೀಘ್ರವಾ ಬಿಡುಗಡೆಗೊಳಿಸಬೇಕು ಹಾಗೂ ವಿದ್ಯಾ ವೇತನದಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗ ಬೋಧನಾ ಶುಲ್ಕ ಹಾಗೂ ಪರೀಕ್ಷಾ ಶು ಕಡಿತ ಮಾಡುವುದನ್ನು ನಿಲ್ಲಿಸಬೇಕು ಎಂದ ಸಹ ಒತ್ತಾಯಿಸಲಾಯಿತು.

'ಸರ್ ದಿನಾ–ದಿನಾ ಆಹಾರ ಪದಾರ್ಥಗಳ ಬೆಲೆ ಹೆಚ್ಚಾಗಾಕ್ಕತ್ತೈತಿ, ನಮ್ಮ ಪಗಾರ ಅಲ್ಲೆ ನಿಂತೈತಿ, ಇದ ಎಂ.ಎಲ್.ಎಗಳಿಗೆ ತಿಳಿತ್ತೈತ ಇಲ್ರೀ'

"ಸಾಹೇಬ್ರ ನಮ್ಮ ಗಾರ ಹೆಚ್ಚಾಗೇತೇನ್ರಿ, ಇತ್ತೀಚಿಗೆ ನಮ್ಮ ಮ್ಯಾಗ ಊ ಗಿನ ಪುಡಾರಿಗಳು ಕಿರುಕುಳ ಕೊ ತ್ತಾರ. ಒಂದ ಕಡೆ ಪಗಾರನು ಹೆಚ್ಚಾಗವಲ್ಲ ಇನ್ನೊಂದು ಕಡೆ ನಮ್ಮ್ಯಾಗ ಕೆಟ್ಟ ದೃಷ್ಟಿಲೇ ನೋಡುದು ಹೋಗವಲ್ದು. ಹಿಂಗ ಆದ್ರ ಕೆಲ್ಸಾ ಹೆಂಗ ಮಾಡೂದು !" ಎಂದು ಸಪ್ಟಂಬರ ಹೋರಾಟದ ಎರಡು ದಿನ ಮೊದಲು ಒಬ್ಬ ಬಿಸಿ ಅಡುಗೆ ಹೆಣ್ಣು ಮಗಳು ದೂರವಾಣಿಯಲ್ಲಿ ಮಾತನಾಡುತ್ತಿದ್ದಳು. ಆಕೆ ಹೇಳಿದಳು.

"ನೋಡಮ್ಮಾ ಸರ್ಕಾರಗಳು ನಮ್ಮ ಪರವಾಗಿ ಕೆಲ್ಸಾ ಮಾಡುದಿಲ್ಲ. ವೋಟ್ ಹಾಕುಮುಂದ ಹಂಗ ಮಾಡ್ತಿವಿ, ಹಿಂಗ್ ಮಾಡ್ತಿವಿ ಅಂತಾ ಹೇಳಿ ಆ ಮ್ಯಾಗ ಇವರು ಶ್ರೀಮಂತರ ಪರವಾಗಿ ನಿಂತು ಅವರ ಕಷ್ಟ ಸುಖದಾಗ ಭಾಗಿ ಆಗ್ತಾರ–ಬಡವರ ಕಷ್ಟ ಸುಖದಾಗ ಭಾಗಿ ಆಗುವುದಿಲ್ಲ. ಹೋರಾಟದಿಂದಲೇ ಸರ್ಕಾರದ ಕಿವಿ ಹಿಂಡಬೇಕು" ಎಂದು ಕಾರ್ಮಿಕರಿಗೆ ತಿಳಿಸಿ ಹೇಳಲಿಕ್ಕೆ ಪ್ರಯತ್ನಿಸಲಾಯಿತು.

ಸಪ್ಟಂಬರ 21 ರಂದು ಬೆಳಗಾವಿಯ ಸರ್ದಾರ ಹೈಸ್ಕೂಲ ಮೈದಾನದಲ್ಲಿ ಸಾವಿರಾರು ಕಾರ್ಮಿಕರು ಸೇರಿ ಕಳೆದ ಐದು ವರ್ಷಗಳಿಂದ ಕೇಳುತ್ತಿರುವ ಕನಿಷ್ಠ ವೇತನ ಜಾರಿ ಮಾಡದ ಸರ್ಕಾರದ ನೀತಿಯನ್ನು ಖಂಡಿಸಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಕೊಟ್ಟು ಆಕ್ರೋಶ ವ್ಯಕ್ತಪಡಿಸಿದರು.

ಮೇ 17–18 ರಂದು ನಡೆದ ಅಖಿಲ ಭಾರತ ಕಾರ್ಮಿಕ ಸಮ್ಮೇಳನದಲ್ಲಿ ಸ್ವತಃ ನಮ್ಮ ಪ್ರಧಾನ ಮಂತ್ರಿಗಳೇ ಕನಿಷ್ಠ ವೇತನ ಕುರಿತು ಕೇಂದ್ರ ಮಂತ್ರಿ ಮಂಡಲದಲ್ಲಿ ಚರ್ಚಿಸುವುದಾಗಿ ಹೇಳಿದ್ದರು. ಆದರೆ (ಇದುವರೆಗೆ) ಇನ್ನೂವರೆಗೆ ಕಾರ್ಮಿಕರ ಕಡೆ ಮುಖ ಹಾಕದ ಕಾರ್ಮಿಕ ವಿರೋಧಿ ಪ್ರಧಾನಮಂತ್ರಿಯ ಹಾಗೂ ಆಗಿನ ಕಾರ್ಮಿಕ ಮಂತ್ರಿಯ ನೀತಿಯನ್ನು ಪ್ರತಿಭಟನಾಕಾರರು ಖಂಡಿಸಿದರು. ಅದೇ ರೀತಿ ಮೇ 22 ರಂದು ರಾಜ್ಯದ ಮುಖ್ಯಮಂತ್ರಿಗಳ ಬಳಿ ಕಾರ್ಮಿಕರ ಮುಖಂಡರ ನಿಯೋಗ ಹೋಗಿ ದುಡಿಯುವ ಜನತೆಯ ಬೇಡಿಕೆಗಳ ಬಗ್ಗೆ ಹೇಳಿ–ಮನವಿ ಮಾಡಿಕೊಂಡು ಬಂದರೂ ಮುಖ್ಯಮಂತ್ರಿಗಳು ತಮ್ಮ ಬಜೆಟ್‌ನಲ್ಲಿ ಕಾರ್ಮಿಕರ ಕುರಿತು ಒಂದು ಮಾತು ಆಡದೇ ಇರುವುದು ವಿಷಾದನೀಯ ಎಂದು ಕಾರ್ಮಿಕ ಮುಖಂಡರು ಟೀಕಿಸಿದರು.

ದೇಶದ–ರಾಜ್ಯದ ದೊಡ್ಡ–ದೊಡ್ಡ ಬಂಡವಾಳಶಾಹಿಗಳಿಗೆ ಲಕ್ಷ ಲಕ್ಷ ಕೋಟಿ ರಿಯಾಯಿತಿ ನೀಡುವ ಕೇಂದ್ರದ–ರಾಜ್ಯದ



ಕಾಂಗ್ರೆಸ್ ಸರ್ಕಾರ ಕಾರ್ಮಿಕರಿಗೆ ನೆಮ್ಮದಿಯ ಜೀವನ ನಡೆಸಲು ಕನಿಷ್ಠ ವೇತನ ರೂ. 10,000/– ನೀಡಲು ಮುಂದೆ ಬರುತ್ತಿಲ್ಲ. ನಮ್ಮ ಹಕ್ಕನ್ನು ಪಡೆಯಲು ನಿರಂತರ ಹೋರಾಟವೇ ನಮಗೆ ದಾರಿ ಎಂದು ಸಿಐಟಿಯುನ ಮುಖಂಡರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

"ಸರ್ ದಿನಾ–ದಿನಾ ಆಹಾರ ಪದಾರ್ಥಗಳ ಬೆಲೆ ಹೆಚ್ಚಾಗಾಕ್ಕತ್ತೈತಿ, ನಮ್ಮ ಪಗಾರ ಅಲ್ಲೆ ನಿಂತೈತಿ. ಇದ ಎಂ.ಎಲ್.ಎಗಳಿಗೆ ತಿಳಿತ್ತೈತ ಇಲ್ರಿ" ಎಂ ಮಹಿಳಾ ಕಾರ್ಮಿಕರು ತಮ್ಮ ಆಕ್ರೋಶವನ ವ್ಯಕ್ತಪಡಿಸುತ್ತಿದ್ದರು. ರಾಯಬಾಗ ತಾಲೂಕ ಹಂದಿಗುಂದ ಗ್ರಾಮದ ಒಬ್ಬ ಬಿಸಿ ಊಟ ಮಹಿಳೆ ಅಳುತ್ತಲೇ ಬಂದು ತನ್ನ ಗೋಳನ ತೋಡಿಕೊಂಡಳು. "ಸರ್ ನಾನು ಬ ಅಡುಗೆ ಮಾಡುವಾಗ ನನ್ನ ಕೈ ನನಗೆ ಕೆಲ್ಸಾ ಮಾಡಾಕ ಆಗವಲ್ದು. ಆ ಮಾಸರುಗಳು, ಎಸ್.ಡಿ.ಎಂ.ಸಿಯವ ನೀ ಕೆಲ್ಸಕ ಬರಲಿಲ್ಲಾ ಅಂ ದ್ರ ಕೆಲಸದಿಂದ ತೆಗಿತೀವಿ ಅಂ ಹೆದರಿಸುತ್ತಿದ್ದಾರೆ. ಮುಂದ ನ ಬಾಳೆ ಹೆಂಗ್ರಿ" ಅಂತ ಅಳು ಹೇಳಿದ್ದು ನೋಡಿದರೆ ಸರ್ಕಾ ಬಡವರ ಪಾಲಿಗೆ ಇದೆಯೋ ಇಲ್ಲವೋ ಎಂದು ಅನಿಸಿತ ಹೀಗೆ ಹಲವಾರು ಬಿಸಿ ಊಟ ಅಂಗನವಾಡಿ, ಆಶಾ, ಬೀ ಕಾರ್ಮಿಕ ಹೆಣ್ಣು ಮಕ್ಕಳು ಅದ ರೀತಿ ಪಂಚಾಯತ ನೌಕರರು, ಕಟ್ಟ ಕಾರ್ಮಿಕರ ಹಲವಾರು ಸಮಸ್ಯೆಗಳು ಇ ಸರ್ಕಾರ ಮಾತ್ರ ಸ್ಪಂದಿಸುತ್ತಿಲ್ಲ ಎಂದ ಕಾರ್ಮಿಕ ಮುಖಂಡರಾದ ವ್ಹಿ.ಪಿ. ಕುಲಕರ್ಣಿ ಗೈಬು ಜೈನೆಖಾನ, ಸಿ.ಎ.ಖರಾಡೆ, ಎಲ್. ನಾಯಕ, ಎಸ್.ಬಿ. ದೇಸಾಯಿ ಮತ್ತು ಬಿ ಕುಲಕರ್ಣಿರವರು ಕೇಂದ್ರ ಹಾಗೂ ರಾ ಸರ್ಕಾರದ ನೀತಿಗಳನ್ನು ಖಂಡಿಸಿದರು.

– ವರದಿ ಗೈಬು ಎನ್. ಜೈನೆಖಾ

ಕಾಂಗ್ರೆಸ್ ಮತ್ತು ಬಿಜೆಪಿ ವೇದಿಕೆಗಳನ್ನು ತಿರಸ್ಕರಿಸಲು ಮತ್ತು ಪರ್ಯಾಯ ಧೋರಣೆಗಳ ಎಡಪಕ್ಷಗಳ ರಾಜಕೀಯ ವೇದಿಕೆಯನ್ನು ಬಲಪಡಿಸಲು ಅಕ್ಟೋಬರ್ 8, 2013ರಂದು ರಾಜ್ಯಮಟ್ಟದ ರ್‍ಯಾಲಿ ಹಾಗೂ ಬಹಿರಂಗ ಸಭೆ

ಜನವಿರೋಧಿ ಕಾಂಗ್ರೆಸ್ ಮತ್ತು ಬಿಜೆಪಿ ವೇದಿಕೆಗಳನ್ನು ತಿರಸ್ಕರಿಸಿರಿ ಹಾಗೂ ಜನಪರವಾದ ಪರ್ಯಾಯ ಧೋರಣೆಗಳ ಎಡ ಪಕ್ಷಗಳ ರಾಜಕೀಯ ವೇದಿಕೆಯನ್ನು ಬಲಪಡಿಸಿರಿ ಎಂಬ ಘೋಷಣೆಯಡಿ ದೇಶದ ಎಡ ಪಕ್ಷಗಳ ಕರೆಯ ಮೇರೆಗೆ,

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಭಾರತ ಕಮ್ಯೂನಿಸ್ಟ್ ಪಕ್ಷ ಮತ್ತು ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಪಕ್ಷಗಳ ರಾಜ್ಯ ಘಟಕಗಳು ಜಂಟಿಯಾಗಿ ದಿನಾಂಕ 08.10.2013ರಂದು ಬೆಂಗಳೂರಿನಲ್ಲಿ ಕಾರ್ಮಿಕರ, ರೈತರ ಹಾಗೂ ಕೃಷಿ ಕೂಲಿಕಾರರ ಮತ್ತು ಇತರ ಸಮೂಹಗಳ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಬೆಂಗಳೂರಿನ ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕ್‌ವರೆಗೆ ಸಂಘಟಿಸಿವೆ.

ಈ ಪ್ರತಿಭಟನಾ ಮೆರವಣಿಗೆಯೂ, ದೇಶದ ಬಡತನ, ನಿರುದ್ಯೋಗ, ಜಾತಿ ಹಾಗು ಲಿಂಗ ತಾರತಮ್ಯಗಳನ್ನು ನಿವಾರಿಸುವ, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳನ್ನು ತಡೆಯಲು ಸಹಕಾರಿಯಾಗುವ ಮತ್ತು ಕೈಗಾರಿಕೆಗಳಿಗೆ ಮಾರುಕಟ್ಟೆ ಒದಗಿಸುವ ಅತ್ಯಂತ ಮುಖ್ಯವಾದ ಹಾಗೂ ಕೇಂದ್ರ ಪ್ರಶ್ನೆಯಾದ ಉಳುವವನಿಗೆ ಹಾಗೂ ಬಡ ರೈತರು ಕೂಲಿಕಾರರಿಗೆ ಭೂಮಿ ಒದಗಿಸುವ ಬಡ ರೈತರು ಕೂಲಿಕಾರರ ಪರವಾದ ಭೂ ಸುಧಾರಣೆಯ ಜಾರಿಯೂ ಸೇರಿದಂತೆ ಒಟ್ಟು 10 ಎಡ ಪರ್ಯಾಯ ನೀತಿಗಳನ್ನು ಜಾರಿಗೆ ತರುವಂತೆ ಕೇಂದ್ರ–ರಾಜ್ಯ ಸರ್ಕಾರಗಳನ್ನು ಒತ್ತಾಯಿಸಲು ಅದೇ ರೀತಿ, ಜನ ವಿರೋಧಿ ಮತ್ತು ಜನರ ಸಂಕಷ್ಟಗಳನ್ನು ತೀವ್ರವಾಗಿ ಹೆಚ್ಚಿಸುತ್ತಿರುವ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳ ದುಷ್ಟ ಲಾಭದ ಪರವಾಗಿರುವ ಜಾಗತೀಕರಣ ಉದಾರೀಕರಣ ಹಾಗೂ ಖಾಸಗೀಕರಣ ನೀತಿಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಕೂಡಲೇ ಕೈ ಬಿಡುವಂತೆ ಒತ್ತಾಯಿಸಲು ಸಂಘಟಿಸಲಾಗಿದೆ.

ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಈ ಮೆರವಣಿಗೆಯು ಬೃಹತ್ ಪ್ರತಿಭಟನಾ ಬಹಿರಂಗ ಸಭೆಯಾಗಿ ಮಾರ್ಪಡಲಿದೆ, ಈ ಬಹಿರಂಗ ಸಭೆಯಲ್ಲಿ ಸಿ.ಪಿ.ಐ.(ಎಂ) ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರಾದ ಬೃಂದಾ ಕಾರಟ್ ಹಾಗೂ ಸಿ.ಪಿ.ಐ ಪಕ್ಷದ ಅಖಿಲ ಭಾರತ ಮುಖಂಡರಾದ ಡಿ. ರಾಜಾ ಮತ್ತು ಫಾರ್ವರ್ಡ್‌ಬ್ಲಾಕ್ ಪಕ್ಷದ ಅಖಿಲ ಭಾರತ ಉಪಾಧ್ಯಕ್ಷರಾದ ಪಿ.ವಿ. ಕದೀವನ್ ಪಾಲ್ಗೊಂಡು ಮಾತನಾಡಲಿದ್ದಾರೆ.

ಇಂತಹ ಜನಪರವಾದಂತಹ ಮಹತ್ವದ ಕಾರ್ಯಕ್ರಮದಲ್ಲಿ ರಾಜ್ಯದ ಕಾರ್ಮಿಕರು, ರೈತರು ಹಾಗೂ ಕೂಲಿಕಾರರು, ನಾಗರಿಕರು, ಬುದ್ಧಿಜೀವಿಗಳು, ಪ್ರಗತಿಪರ ಸಂಘ ಸಂಸ್ಥೆಗಳು, ವ್ಯಕ್ತಿಗಳು, ಶಕ್ತಿಗಳು ಅತ್ಯಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಲು ವಿನಂತಿಸಲಾಗಿದೆ.

ಜಿ.ವಿ. ಶ್ರೀರಾಮರೆಡ್ಡಿ	ಪಿ.ವಿ. ಲೋಕೇಶ್	ಜಿ.ಆರ್. ಶಿವಶಂಕರ್
ರಾಜ್ಯ ಕಾರ್ಯದರ್ಶಿ, ಸಿಪಿಐ(ಎಂ)	ರಾಜ್ಯ ಕಾರ್ಯದರ್ಶಿ, ಸಿಪಿಐ	ರಾಜ್ಯಾಧ್ಯಕ್ಷರು, ಎ.ಐ.ಎಫ್.ಬಿ

ಪಕ್ಷದ ನಿಧಿ : ಮಾಧ್ಯಮಗಳ ಅಪಪ್ರಚಾರ – ಸಿಪಿಐ(ಎಂ) ಸ್ಪಷ್ಟನೆ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ದೊಡ್ಡ ಪಾಲಿನ ಆದಾಯದ ಮೂಲ ಯಾವುದೆಂದು ಗೊತ್ತಾಗದು ಎಂಬ ಮಾಧ್ಯಮಗಳ ಗೊಂದಲಕಾರಿ ವರದಿಗಳ ಹಿನ್ನೆಲೆಯಲ್ಲಿ ಪಕ್ಷ ಹಣಕಾಸಿನ ಮೂಲ ಮತ್ತು ಅದರ ಸ್ವರೂಪದ ಬಗ್ಗೆ ಸ್ಪಷ್ಟನೆ ನೀಡಿದೆ. ಈ ಮಾಧ್ಯಮಗಳ ವರದಿಗಳ ಆಧಾರ "ಪ್ರಜಾಸತ್ತಾತ್ಮಕ ಸುಧಾರಣೆಗಳಿಗಾಗಿನ ಸಂಘಟನೆ" ಎಂಬ ಸರ್ಕಾರೇತರ ಸಂಸ್ಥೆಯ ವರದಿ/ಹೇಳಿಕೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಕ್ಕೆ ತನ್ನ ಆದಾಯ, ಅದರ ಮೂಲಗಳು ಮತ್ತು ವಿವರಗಳ ವಿಷಯದಲ್ಲಿ ಮುಚ್ಚಿಡಲು ಏನೂ ಇಲ್ಲ. ಆದಾಯ ತೆರಿಗೆ ಕಾಯಿದೆ ಮತ್ತು ಜನತಾ ಪ್ರಾತಿನಿಧ್ಯ ಕಾಯಿದೆಗಳ ಪ್ರಕಾರ 20000 ರೂಪಾಯಿಗಳಿಗೂ ಮಿಕ್ಕಿ ದೇಣಿಗೆ ನೀಡಿದವರ ಯಾದಿಯನ್ನು ಎಲ್ಲ ರಾಜಕೀಯ ಪಕ್ಷಗಳು ಕಾನೂನಿನ ಪ್ರಕಾರ ಸಲ್ಲಿಸಬೇಕು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಆದಾಯ ತೆರಿಗೆ ಇಲಾಖೆ ಮತ್ತು ಚುನಾವಣಾ ಆಯೋಗಕ್ಕೆ ಆದಾಯ ಮತ್ತು ಖರ್ಚುಗಳ ಮತ್ತು 20000 ರೂಪಾಯಿಗಳಿಗೂ ಮಿಕ್ಕಿ ದೇಣಿಗೆ ನೀಡಿದವರ ಪಟ್ಟಿಯ ಜೊತೆಗೆ ಅವರ ವಿಳಾಸ , ಪಾನ್ ಸಂಖ್ಯೆ ಇತ್ಯಾದಿಗಳ ಲೆಕ್ಕ ಗಳನ್ನು ಕಾಲ ಕಾಲಕ್ಕೆ ನೀಡುತ್ತಾ ಬಂದಿದೆ. ಕಾನೂನಿನ ಪ್ರಕಾರ 20000 ರೂಗಳಿಗೂ ಕಡಿಮೆ ದೇಣಿಗೆ ನೀಡಿದವರ ಪಟ್ಟಿ ನೀಡುವ ಅವಶ್ಯಕತೆಯಿಲ್ಲ. ಇದನ್ನು ತಿರುಚಿ "ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ತನ್ನ ಆದಾಯದ ಬಹುಭಾಗದ ಮೂಲವನ್ನು ಬಹಿರಂಗ ಪಡಿಸಿಲ್ಲ ಎಂಬಂತೆ ಬಿಂಬಿಸಲಾಗಿದೆ."



2011–12 ರ ಮತ್ತು ಹಿಂದಿನ ಸಾಲುಗಳಿಗೆ ಸಿಪಿಐ(ಎಂ) ಚಾರ್ಟರ್ಡ್ ಎಕೌಂಟೆಂಟ್‌ಗಳಿಂದ ತನ್ನ ಪರಿಶೋಧಿತ ಲೆಕ್ಕಗಳನ್ನು ಚುನಾವಣಾ ಆಯೋಗ ಮತ್ತು ಆದಾಯ ತೆರಿಗೆ ಇಲಾಖೆಗಳಿಗೆ ಕಾನೂನಿನ ಪ್ರಕಾರ ಸಲ್ಲಿಸಿದೆ. ತನ್ನ ವೆಬ್ ಸೈಟಿನಲ್ಲಿ 2011-12 ರ ಲೆಕ್ಕಗಳನ್ನು ಪ್ರಕಟಿಸಿಯೂ ಇದೆ. ಹೀಗೆ ಪ್ರಕಟಿತ ಲೆಕ್ಕಗಳ ಪ್ರಕಾರ 'ಸಿಪಿಐ(ಎಂ)ನ 2011–12 ರ ಆದಾಯ, ಅಂದರೆ ಅದರ ಕೇಂದ್ರ, ರಾಜ್ಯ, ಜಿಲ್ಲಾ, ವಲಯ/ಪ್ರಾದೇಶಿಕ ಸಮಿತಿಗಳ ಮತ್ತು ಶಾಖೆಗಳ ಒಟ್ಟು ಆದಾಯ 103,84,65,122 ರೂಪಾಯಿಗಳು. ಸಿಪಿಐ(ಎಂ) ನ ಸಂವಿಧಾನದ ಪ್ರಕಾರ ಪಕ್ಷದ ಪ್ರತಿ ಸದಸ್ಯನೂ ಕೇಂದ್ರ ಸಮಿತಿ ನಿಗದಿ ಪಡಿಸಿದಂತೆ ಲೆವಿ ನೀಡಬೇಕು ಮತ್ತು 2 ರೂಪಾಯಿಗಳ ಸದಸ್ಯತ್ವ ಶುಲ್ಕ ನೀಡಬೇಕು. ಲೆವಿ ಪ್ರಕಾರ ಸ್ವೀಕೃತವಾದದ್ದು 41,63,37,169 ರೂಪಾಯಿಗಳು(ಶೇ 40.09) ಮತ್ತು ಸದಸ್ಯತ್ವ ಶುಲ್ಕ 20,91,262 (ಶೇ.0.20). ಪ್ರಸ್ತುತ ಸಿಪಿಐ(ಎಂ) ನ ಸದಸ್ಯತ್ವದ ಸಂಖ್ಯೆ 20 ಲಕ್ಷಕ್ಕೂ ಹೆಚ್ಚು.

ಪಕ್ಷ 52,49,03,619 ರೂಪಾಯಿಗಳಷ್ಟು (ಒಟ್ಟು ಆದಾಯದ ಶೇ 50.55) ಹಣವನ್ನು ಪಕ್ಷದ ಸದಸ್ಯರು, ಬೆಂಬಲಿಗರು ಮತ್ತು ಸಾರ್ವಜನಿಕರಿಂದ ಸ್ವೀಕರಿಸಿದೆ. ಈ ದೇಣಿಗೆಗಳನ್ನು ವಾರ್ಡ್‌ಗಳು, ಹಳ್ಳಿ, ತಾಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟಗಳಲ್ಲಿ ಪಕ್ಷದ ಘಟಕಗಳಾದ ಶಾಖೆಗಳು, ಸ್ಥಳೀಯ ಸಮಿತಿಗಳು, ಪ್ರಾದೇಶಿಕ/ ವಲಯ ಸಮಿತಿಗಳು, ಜಿಲ್ಲಾ ಸಮಿತಿಗಳು, ರಾಜ್ಯ ಸಮಿತಿಗಳು ಮತ್ತು ಕೇಂದ್ರ ಸಮಿತಿಗಳು ಸಂಗ್ರಹಿಸಿವೆ. ಪಕ್ಷದ ಎಲ್ಲಾ ಘಟಕಗಳು ತಮ್ಮ ಆಯ ಮತ್ತು ವ್ಯಯಗಳ ದಾಖಲೆಗಳನ್ನು ಇಟ್ಟಿವೆ. ಕೇಂದ್ರ ಸಮಿತಿಗಿಂತ ಕೆಳಗಿನ ಎಲ್ಲಾ ಸಮಿತಿಗಳು ತಮ್ಮ ಮೇಲಿನ ಸಮಿತಿಗೆ ತಮ್ಮ ಆಯಾ ವ್ಯಯ ಲೆಕ್ಕಗಳನ್ನು ಒಪ್ಪಿಸುತ್ತವೆ. ಈ ಲೆಕ್ಕಗಳಿಂದ ಕೇಂದ್ರ ಸಮಿತಿ ಚುನಾವಣಾ ಆಯೋಗ ಮತ್ತು ಆದಾಯ ತೆರಿಗೆ ಇಲಾಖೆಗಳಿಗೆ ಲೆಕ್ಕ ಒಪ್ಪಿಸುತ್ತದೆ.

ಸಿಪಿಐ(ಎಂ) ನ ಬಹುತೇಕ ದೇಣಿಗೆದಾರರು 20,000 ರೂಪಾಯಿಗಳಿಗಿಂತ ಅಥವಾ 1,000 ರೂಪಾಯಿಗಳಿಗಿಂತ ಕಡಿಮೆ ದೇಣಿಗೆ ನೀಡಿರುತ್ತಾರೆ. ಪಕ್ಷಕ್ಕೆ ತನ್ನ ಆದಾಯ ಮೂಲಗಳು ಮತ್ತು ತನ್ನ ದಾನಿಗಳ ಪಟ್ಟಿಯನ್ನು ಮುಚ್ಚಿಡುವ ಅವಶ್ಯಕತೆಯಿಲ್ಲ ಎಂಬುದನ್ನೂ ಸಿಪಿಐ(ಎಂ) ಸ್ಪಷ್ಟಪಡಿಸಿದೆ. ಮೇಲಿನಂತೆ ಪೂರ್ಣ ಆದಾಯ ಪರಿಚಿತ ಮೂಲಗಳಿಂದಲೇ ಬಂದಂತಹವು. ಆದಾಯ ಮತ್ತು ಖರ್ಚುಗಳನ್ನು ಕಾನೂನಿನ ಪ್ರಕಾರ ಪಕ್ಷದ ಸಂವಿಧಾನ ಮತ್ತು ಸಂಬಂಧಪಟ್ಟ ಶಾಖೆ ಗಳು ದಾಖಲಿಸಿವೆ. ಪಕ್ಷ ಲಕ್ಷ ಲಕ್ಷ ಜನ ಬೆಂಬಲಿಗರ ಮತ್ತು ಸದಸ್ಯರ ಹೆಸರು ಮತ್ತು ವಿಳಾಸಗಳನ್ನು ಪ್ರಕಟಿಸುವಲ್ಲಿ ನೈಜ ಸಮಸ್ಯೆ ಎದುರಿಸುತ್ತದೆ. (ಇಷ್ಟೊಂದು ಹೆಸರು, ವಿಳಾಸಗಳನ್ನು ಪ್ರಕಟಿಸುವ ಕೆಲಸ ಸುಲಭವಲ್ಲವಲ್ಲವೇ?)

ಪಕ್ಷದ 2011–12 ರ ಇತರ ಆದಾಯಗಳೆಂದರೆ ಠೇವಣಿಗಳ ಮೇಲಿನ ಬಡ್ಡಿ 81796333 ರೂಪಾಯಿಗಳು ಮತ್ತು ಇತರ ಆದಾಯಗಳು (ರದ್ದಿ ಪೇಪರುಗಳು ಮತ್ತು ಹಳೆ ಪೀಠೋಪಕರಣಗಳು, ವಾಹನಗಳು ಇತ್ಯಾದಿಗಳ ಮಾರಾಟದಿಂದ ಬಂದ ದ್ದು) 13336739 ರೂಪಾಯಿಗಳು.

ಕೋಲಾರ ಚಿನ್ನದ ಗಣಿ.....

ಪುಟ ೪ ರಿಂದ

ಅಥವಾ ಗುಳ್ಳೆನರಿಯಂತೆ ಅಲೆಯುವುದೇ? ಹೌದು! ನರಿದೃಷ್ಟಿ ಯಾವಾಗಲೂ ಕೋಳಿಯ ಮೇಲೇನೇ.!

ಕೋಲಾರ ಚಿನ್ನದಗಣಿ ಪ್ರವೇಶಕ್ಕೆ ಬಂದು ಅಡ್ಡಾಡುವವರಿಗೆ ಅಲ್ಲಲಿ ಕಪ್ಪು ಬಣ್ಣದ ಮಣ್ಣಿನ ಬೆಟ್ಟಗಳು ಕಾಣಸಿಗುತ್ತವೆ. ಇವನ್ನು 'ಸೈನೈಡ್‌ನ ರಾಶಿ' ಅನ್ನುವುದೇ ಸರಿಯಾಗಿರುತ್ತದೆ. 'ಟೈಲಿಂಗ್ ಡಂಪ್' ಎಂದು ಇದನ್ನು ಕರೆಯುತ್ತಾರೆ. ಇದರಲ್ಲಿ ಚಿನ್ನದ ನಿಧಿ ಇದೆ ಎಂಬುದು ಆಸ್ಟ್ರೇಲಿಯನ್ ಕಂಪೆನಿಗೆ ತಿಳಿಯಿತು. ಅಲ್ಲಿಂದ ಕೊಳ್ಳೆ ಹೊಡೆಯುವ ಮಿದುಳು ಚುರುಕಾಗಿ ಕೆಲಸ ಮಾಡಲಾರಂಭಿಸಿತು.

ನಮ್ಮ ಊರಲ್ಲಿ ಹಳೆಯ ಫಿಲ್ಮ ರೋಲ್‌ಗಳನ್ನು ಶೇಖರಿಸಿ ಅದ-ರಿಂದ ಬೆಳ್ಳಿಯನ್ನು ತೆಗೆಯುವವರಿದ್ದಾರೆ. ಹಳೆಯ ರೇಶ್ಮೆ ಸೀರೆಯ ಜರಿಗಳನ್ನು ತೆಗೆಯುವವರಿದ್ದಾರೆ. ಅದರ ಹಾಗೇನೇ ಇದು ಕೂಡಾ. ಇದರಿಂದ ಹೊಡೆಯುವ ಭಾರಿ ಕೊಳ್ಳೆ ಹೇಗೆ ಅನ್ನುವುದು ಗೊತ್ತೆ?

ಇಲ್ಲಿ 38 ಮಿಲಿಯನ್ ಟನ್ ಸೈನೈಡ್ ಗುಡ್ಡಗಳು ಇವೆ. ಒಂದು ಟನ್ ಸೈನೈಡ್ ಗುಡ್ಡೆದಿಂದ 0.7 ಗ್ರಾಂ ಚಿನ್ನ ತೆಗೆಯಬಹುದು. ಇದಕ್ಕಾಗಿ ಗಣಿ ಅಗೆಯಬೇಕಾಗಿಲ್ಲ. ಅದನ್ನು ಅರೆದು ಸೋಸಿದರೆ ಸಾಕು ಲಾಭವೋ ಲಾಭ! ಒಂದು ಸಣ್ಣ ಲೆಕ್ಕಾಚಾರ. 38 ಮಿಲಿಯನ್ ಅಂದರೆ 3.8. ಕೋಟಿ ಟನ್. ಒಂದು ಟನ್‌ನಲ್ಲಿ 0.7 ಗ್ರಾಂ ಚಿನ್ನ ಚಿನ್ನ ಸಿಗುತ್ತದೆ. ಒಂದು ಕಿಲೋ ಅಂದರೆ 125 ಪವನ್, ಅಂ-ದರೆ ಒಂದು ಟನ್‌ನಲ್ಲಿ 1,25,000 ಪವನ್. ಅಂದರೆ ಒಂದು ಕಾಲು ಲಕ್ಷ ಪವನ್ ಚಿನ್ನ ತೆಗೆಯಬಹುದು. ಅಂದರೆ 3.8x1000x1000x0.7x1,25,000=3,32,50,00,00,000 ಟನ್ ಚಿನ್ನ ಸಿಕ್ಕುತ್ತದೆ. ಎಂದು ಕನಿಷ್ಠ ಲೆಕ್ಕಾಚಾರವನ್ನು ಆಡಳಿತ ವರ್ಗವೇ ಒಪ್ಪಿಕೊಳ್ಳುತ್ತದೆ. ಬಹಳ ಕನಿಷ್ಠ ಲೆಕ್ಕ ಹಾಕಿದರೂ 7,700 ಕೋಟಿ ರೂ ಸಿಗುತ್ತದೆ ಎಂಬುದು ಎಲ್ಲರೂ ಒಪ್ಪಿಕೊಂಡ ಲೆಕ್ಕ. ಇದು ಬಿಟ್ಟು 12,000 ಕೋಟಿಗೂ ಹೆಚ್ಚು ಜಮೀನು, ಇತರ ಕಟ್ಟಡಗಳೂ, ಸೌಲಭ್ಯಗಳು ಸಿಗುತ್ತವೆ. ಗಣಿಯ ಪುನರುಜ್ಜೀವನಗೊಳಿಸಿದರೆ ಇನ್ನೂ ಹೆಚ್ಚಿನ ಲಾಭದಾಯಕವಾಗಿ ಚಿನ್ನ ತೆಗೆಯಬಹುದು. ನಿಜವಾಗಿಯೂ ಚಿನ್ನದ ಮೊಟ್ಟೆ ಇಡುವ ಬಾತುಕೋಳಿ ಅಂದರೆ ಇದೇ. ಇದನ್ನು ವಶಪಡಿಸಿಕೊಳ್ಳಲು ಆಸ್ಟ್ರೇಲಿಯಾದ ಕಂಪನಿ ತೀವ್ರ ಪ್ರಯತ್ನ ನಡೆಸುತ್ತಿದೆ.

ಹೋರಾಟವೇ ದಾರಿ

ಇದನ್ನೇ ತಡೆಗಟ್ಟಬೇಕು. ಸರ್ಕಾರವೇ ಚಿನ್ನದಗಣಿಯನ್ನು ನಡೆಸಬೇಕು. ತೊಂದರೆಗೊಳಗಾಗಿರುವ ಕಾರ್ಮಿಕರಿಗೆ ದುಪ್ಪಟ್ಟು ನಿವೃತ್ತಿ ಪರಿಹಾರ. ಕಾರ್ಮಿಕರ ಅವಲಂಭಿತರಿಗೆ ಉದ್ಯೋಗವನ್ನು ಕೊಡಬೇಕು. ಈ ಬೇಡಿಕೆಗಳಿಗಾಗಿ ಬೀದಿಯಲ್ಲೂ, ನ್ಯಾಯಾಲಯದಲ್ಲೂ, ರಾಜಕೀಯ ಕ್ಷೇತ್ರದಲ್ಲೂ ಪ್ರಯತ್ನಗಳು ನಡೆದು, ಹಲವಾರು ಹಂತಗಳ ಹೋರಾಟಗಳು ನಡೆದುದರ ಬಗ್ಗೆ ಗಂಟೆಗಟ್ಟಲೆ ವಿವರಿಸುತ್ತಾರೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿ ಸದಸ್ಯರಾಗಿರುವ ಜಿ. ಅರ್ಜುನನ್.

ಕರ್ನಾಟಕದ ಉಚ್ಚ ನ್ಯಾಯಾಲಯ ಚಿನ್ನದ ಗಣಿಯನ್ನು ಸರ್ಕಾರವೇ ನಡೆಸಬೇಕೆಂದು ತೀರ್ಪು ನೀಡಿತು. ಚಿನ್ನ ಕೊಳೆತು ಹೋಗುವುದಿಲ್ಲ. ಬೆಲೆ ಏರುತ್ತಲೇ ಇರುತ್ತದೆ. ಖಾಸಗಿಯವರಿಗೆ ಕೊಡಬೇಕೆಂಬುದು ಮಂತ್ರಿಮಂಡಲದ ತೀರ್ಮಾನ ಅಲ್ಲ ಎಂಬುದನ್ನೆಲ್ಲಾ ಆಧಾರಪೂರ್ವಕವಾಗಿ ಎತ್ತಿ ತೋರಿಸಿತು. ಇದು ಕಾರ್ಮಿಕ ವರ್ಗಕ್ಕೆ ದೊ-ರೆತ ದೊಡ್ಡ ಗೆಲುವಾಗಿದೆ. ಇದನ್ನು ಹದ್ದಿನ ಕಣ್ಣುಗಳು ನೋಡಿ ಸುಮ್ಮನಿರುತ್ತವೆಯೇ? ಅದು ಕೈಗೊಂಬೆ ಗುಂಪಿನ ಮೂಲಕ ಬೊಂಬೆಯಾಟಕ್ಕೆ ತೊಡಗಿತು. ಮೇಲ್ಮನವಿ ಸಲ್ಲಿಸಿತು. ಈ ಮೊಕದ್ದಮೆಯಲ್ಲಿ ನಾವು ಈ ಲೇಖನದ ಆರಂಭದಲ್ಲಿ ಹೇಳಿದಂತೆ ಸುಪ್ರೀಂ ಕೋರ್ಟ್ ಅವಸರವಸರವಾಗಿ ತೀರ್ಪು ನೀಡಿತು. ಅದು ಜಾಗತಿಕ ಒಪ್ಪಂದದಂತೆ ಖಾಸಗಿಯವರಿಗೆ ನೀಡಲು ಆಜ್ಞೆ ಹೊರಡಿಸಿದೆ.



ಇದನ್ನು ದೊಡ್ಡ ಸಾಧನೆಯೆಂದು ಮಂತ್ರಿ ಮುನಿಯಪ್ಪ ಹೊಗಳುತ್ತಾರೆ. ಆದರೆ ರಾಷ್ಟ್ರದ ಚಿನ್ನದ ಭಂಡಾರವನ್ನೇ ಆಸ್ಟ್ರೇಲಿಯ ಕಂಪೆನಿ ಲೂಟಿಮಾಡಲು ಅವಕಾಶ ಕಲ್ಪಿಸಿರುವುದಾಗಿ ಕಾರ್ಮಿಕ ಸಂಘದ ಮುಖಂಡರು (ಸಿಐಟಿಯು) ಎತ್ತಿತೋರಿಸುವುದರ ಜೊತೆಯಲ್ಲಿ ಸರ್ಕಾರವೇ ನಡೆಸುವುದು ಸರಿಯಾದ ಪರಿಹಾರವೆನ್ನುತ್ತಾರೆ. ಅಲ್ಲದೆ ಹೆಚ್ಚಿನ ಕಾರ್ಮಿಕರಿಗೆ ವಯಸ್ಸಾಗಿರುವುದರಿಂದ ಸಿಕ್ಕಿದ್ದು ಸಾಕು ಎಂದು ಅಭಿಪ್ರಾಯ ಪಡುತ್ತಾ-ರೆಂದು ಮುನಿಯಪ್ಪ ಹೇಳುತ್ತಾರೆ. ನಿವೃತ್ತಿ ಪರಿಹಾರವೆಂಬುದು ಸಿಐಟಿಯು ಆರಂಭದಿಂದ ಹೇಳಿಕೊಂಡು ಬಂದಿರುವುದೇ, ಚಿನ್ನದ ಗಣಿಯು ಕೆಲಸ ಮಾಡುವುದನ್ನು ನಿಲ್ಲಿಸಿದೆಯೇ ಹೊರತು ಕ್ರಮಬದ್ಧವಾಗಿ ಮುಚ್ಚಲಾ ಇದನ್ನು ಉಚ್ಚನ್ಯಾಯಾಲಯವೂ ತೋರಿಸಿದೆ. ಆದುದರಿಂದ ಘೋಷಿಸಿ ಆರ್ಥಿಕ ಸೌಲಭ್ಯದೊಂದಿಗೆ 2001 ರಿ ಈವರೆಗೆ ಸಂಬಳವನ್ನೂ ನೀಡಬೆ ಇದಲ್ಲದೇ ಅವಲಂಬಿತರೂಬ್ಬ ಉದ್ಯೋಗ ನೀಡಬೇಕು. ರಾಷ್ಟ್ರದ ಚಿ ಭಂಡಾರವನ್ನು ಕಾಪಾಡಲು ಸಿಪಿಐ(ಎ ಮತ್ತು ಸಿಐಟಿಯು ಕೊನೆಯವರೆ ದೃಡವಾಗಿ ಹೋರಾಡುವುದೆಂದು ವಿ.ಜೆ ನಾಯರ್‌ರವರು ಹೇಳುತ್ತಾರೆ.

ಚಿನ್ನದ ಆಮದನ್ನು ಕಡಿಮೆ ಮಾಡ ಕರೆಕೊಡುವ ಕೇಂದ್ರ ಮಂತ್ರಿ ಚಿದಂಬ ಚಿನ್ನದ ಭಂಡಾರವನ್ನು ಧಾರೆ ರೆಯುವುದ ತಡೆಯ ಬೇಡವೇ?

ವಿದೇಶಿ ವಿನಿಮಯ ನಿಧಿಯು ಸವ ಹೋಗಿ ರೂಪಾಯಿ ಅಪಮೌ ಸನ್ನಿವೇಶದಲ್ಲಿ ನಮ್ಮ ಚಿನ್ನದ ಗಣಿಯ ರಕ್ಷಿಸುವುದು ಸರ್ಕಾರದ ಕರ್ತವ್ಯ ತಾ ಚಿನ್ನಕ್ಕೆ ತುಕ್ಕು ಹಿಡಿಯುವುದಿಲ್ಲ. ಚಿ ಮೌಲ್ಯ ಕಡಿಮೆಯಾಗುವುದಿಲ್ಲ. ಅದ ಕಳೆದುಕೊಳ್ಳಬಹುದೇ? ಬಿಳಿಯ ಹಿಂದೆ ಕೊಳ್ಳೆ ಹೊಡೆದುಕೊ ಹೋಗಿರುವ ಕೋಹಿನೂರು ವಜ್ರ ವಶಪಡಿಸಿಕೊಳ್ಳುತ್ತೇವೆ ಎಂದು ಆಗ ಶೌರ್ಯದ ಮಾತುಗಳನ್ನು ಆಡ ಸರ್ಕಾರವೂ, ಮಂತ್ರಿಗಳೂ, ಕೋಲ ಚಿನ್ನದ ಗಣಿಯನ್ನು ಆಸ್ಟ್ರೇಲಿಯದವನಿಗೆ ಬೇರೆ ಹೊರ ದೇಶದವನಿಗೋ ಕೊ ಹೊಡೆಯಲು ಅನುಮತಿ ನೀಡಬಹುದೇ


ಜಾಣ ಕಿವುಡುತನ ಹೊಂದಿರ ಯು.ಪಿ.ಎ. ಸರ್ಕಾರದ ಕಿವಿ ತವ ಕಿತ್ತು ಹೋಗಿರುವಂತೆ ಕಾರ್ಮಿಕ ವ ಘರ್ಜಿಸದಿದ್ದರೆ ಚಿನ್ನದ ಭಂಡಾರವನ್ನು ಧ ಎರೆಯುವುದನ್ನು ತಡೆಯಲು ಅಸಾಧ್ಯ.

ಎಲ್ಲಿದೆಯೋ..ನ್ಯಾಯ.......

ಪುಟ 5 ರಿಂದ

ಶೋಷಣೆಯ ಪ್ರಯೋಗ ಶಾಲೆಯಾಗಿ ಮಾರ್ಪಟ್ಟು ಕುಖ್ಯಾತಿಗೊಳ್ಳುತ್ತಿದೆ ಎಂದರು. ದೆಹಲಿ ಪ್ರಕರಣ ನಡೆದು ಕೇವಲ 9 ತಿಂಗಳಲ್ಲೇ, ಆರೋಪಿಗಳಿಗೆ ಮರಣ ದಂಡನೆಯಾಗಿದೆ. ಸೌಜನ್ಯ ಪ್ರಕರಣ ನಡೆದು 1ವರ್ಷ ತುಂಬುತ್ತಿದ್ದರೂ ಸರಿಯಾಗಿ ತನಿಖೆಯೇ ನಡೆದಿಲ್ಲ ಎಂದ ಅವರು ದೇಶದಲ್ಲಿ ಎರಡೆ-ರಡು ಕಾನೂನುಗಳಿವೆಯೇ ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು. ನಿರಂತರವಾಗಿ ನೀರು ಹರಿಯುತ್ತಿರಬೇಕಾದ ನೇತ್ರಾವತಿಯಲ್ಲಿ ಹೆಣ್ಣಿನ ರಕ್ತ ಹರಿಯುತ್ತಿರುವುದು ದುರಂತವೆಂದ ಅವರು ನೇತ್ರಾವತಿ ಸ್ನಾನಘಟ್ಟದ ಸುತ್ತ ಮುತ್ತ ನಡೆದ ಮಹಿಳೆಯರ ಅಸಹಜ ಸಾವುಗಳ ಬಗ್ಗೆ ಅಂಕಿಅಂಶಗಳನ್ನು ಪ್ರದರ್ಶಿಸಿ, ಸೌಜನ್ಯ ಸಾವಿನ ಬಗ್ಗೆ ಸಿಬಿಐ ತನಿಖೆ ನಡೆಯಬೇಕೆಂದು ಒತ್ತಾಯಿಸಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಡಿ.ವೈ. ಎಫ್.ಐ ರಾಜ್ಯಾಧ್ಯಕ್ಷ ಎನ್.ಎಲ್.ಭರತ್‌ರಾಜ್, ಸೌಜನ್ಯ ಪ್ರಕರಣದಲ್ಲಿ ಎಡಬಿಡಂಗಿತನದಿಂದ ವರ್ತಿಸಿದ ಸಂಘಪರಿವಾರದ ಕ್ರಮವನ್ನು ಕಟುವಾಗಿ ಟೀಕಿಸಿದರು. ಸೌಜನ್ಯ ಪ್ರಕರಣವನ್ನು ಡಿ.ವೈ.



ಎಫ್.ಐ ಗಂಭೀರವಾಗಿ ಪರಿಗಣಿಸಿದ್ದು, ಪ್ರಕರಣ ಸಿಬಿಐ ತನಿಖೆಗೆ ಒತ್ತಾಯಿಸಿ ಅಕ್ಟೋಬರ್ 9ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸುತ್ತೇವೆ, ಅದಕ್ಕೂ ಮಣಿಯದಿದ್ದರೆ ಗೃಹ ಸಚಿವರ ಮನೆಗೆ ಮುತ್ತಿಗೆ ಹಾಕುತ್ತೇವೆಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಡಿ.ವೈ.ಎಫ್.ಐ ಅಧ್ಯಕ್ಷ ಮಧುಸೂದನ್, ಕಾರ್ಯದರ್ಶಿ ಪ್ರಶಾಂತ್ ಬೆಳ್ತಂಗಡಿ, ಡಿ.ವೈ.ಎಫ್.ಐ ಮುಖಂಡರಾದ ಝಕರೀಯ, ಯುವರಾಜ್, ಸುಮಲತಾ, ಜೆ.ಎಂ.ಎಸ್ ನ ಕಿರಣಪ್ರಭಾ, ಕುಮಾರಿ, ಸುಕನ್ಯ, ಸೌಜನ್ಯಳ ತಂದೆ ಚಂದಪ್ಪ ಗೌಡ, ತಾಯಿ ಕುಸುಮಾವತಿ, ಸಿಪಿಐ(ಎಂ) ಮುಖಂಡರಾದ ಬಿ.ಎಂ.ಭಟ್, ಶಿವಕುಮಾರ್, ಶೇಖರ್, ಜಯರಾಂ ಮಯ್ಯ, ಶ್ಯಾಂರಾಜ್, ವಸಂತ ನಡ, ನೆಬಿಸ, ವಿವಿಧ ಸಂಘಟನೆಗಳ ದೇವಕಿ, ಜಯಶ್ರೀ, ಸೌಮ್ಯ, ರೋಹಿಣಿ,ಈಶ್ವರಿ,ಸಂಜೀವ ನಾಯ್ಕ ಸೇರಿದಂತೆ ಸಾವಿರಾರು ಜನ ಭಾಗವಹಿಸಿದ್ದರು.

ಅಕ್ಟೋಬರ್ 9 ಮಂಗಳೂರಲ್ಲಿ ಪ್ರತಿಭಟನೆ :

ಅ. 9ರಂದು ಸೌಜನ್ಯ ಅತ್ಯಾಚಾರ, ಕೊಲೆ ಪ್ರಕರಣಕ್ಕೆ 1 ವರ್ಷ ತುಂಬುತ್ತದೆ. ಆ ದಿನ ಬೆಳ್ತಂಗಡಿಯಿಂದ ಮಂಗಳೂರಿಗೆ ಬೃಹತ್ ವಾಹನ ಜಾತಾ ನಡೆಯಲಿದ್ದು, ದ.ಕ ಜಿಲ್ಲಾಧಿಕಾರಿ ಕಚೇರಿ ಎದುರು ಬೃಹ ಬಹಿರಂಗ ಸಭೆ ನಡೆಯಲಿದೆ. ಅ ಮುಂದಿನ ಕ್ರಮ ಡಿ.ವೈ.ಎಫ್.ಐ ನೇತೃತ್ವ ಸಮಾನ ಮನಸ್ಕ ಸಂಘಟನೆಗಳೊಂದಿಗೆ ಹೋರಾಟ ಮತ್ತು ಧರ್ಮಸ್ಥಳ, ಬೆಳ್ತಂ ತಾಲೂಕು ಬಂದ್‌ಗೆ ಡಿವೈ.ಎಫ್.ಐ ಬೆಳ್ತಂ ತಾಲೂಕು ಸಮಿತಿ ಕರೆ ನೀಡಲು ತ ನಡೆಸುತ್ತಿದೆ.

ವಿದ್ಯಾರ್ಥಿ ಸಂಘಟನೆಗಳು ಹೋರಾಟವನ್ನು ಬೆಂಬಲಿಸಿದ್ದು, ಹೋರಾಟಕ್ಕೆ ಹೆಚ್ಚಿನ ಬಲ ಬಂದಂತಾಗಿ ಅಂದು ಬೆಳ್ತಂಗಡಿಯಿಂದ ಮಂಗಳೂರು ತ ವಾಹನ ರ್‍ಯಾಲಿ ನಡೆಯಲಿದ್ದು, ರ್‍ಯಾಲಿಯ ಬೆಳ್ತಂಗಡಿ ಬಸ್ಸು ನಿಲ್ದಾಣ ಸಮೀಪ ಸೌಜ ತಂದೆ ಚಂದಪ್ಪ ಗೌಡ, ತಾಯಿ ಕುಸುಮಾ ರವರು ಉದ್ಘಾಟಿಸಲಿದ್ದಾರೆ.

ಮಂಗಳೂರಿಗೆ ಟಿ.ಎನ್ ಸೀಮಾ, :

ಅ 9ರಂದು ಮಂಗಳೂರಿನ ದ ಜಿಲ್ಲಾಧಿಕಾರಿ ಕಚೇರಿ ಎದುರು ನಡೆಯ ಪ್ರತಿಭಟನೆಯಲ್ಲಿ ಅಖಿಲ ಭಾರತ ಜನವಾ ಮಹಿಳಾ ಸಂಘಟನೆಯ ರಾಷ್ಟ್ರೀ ಉಪಾಧ್ಯಕ್ಷೆ, ರಾಜ್ಯ ಸಭಾ ಸದಸ್ಯೆ ಡಾ. ಟಿ. ಸೀಮಾ, ಡಿ.ವೈ.ಎಫ್.ಐ ಮುಖ ಸೇರಿದಂತೆ ಹಲವಾರು ಸಂಘಟ ಮುಖಂಡರುಗಳು ಭಾಗವಹಿಸಲಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

2ಜಿ ಹಗರಣ: ಸತ್ಯವನ್ನು ಹೊರತರುವ ಬದಲು ಮುಚ್ಚಿ ಹಾಕುವ ಜೆಪಿಸಿ ವರದಿ!

ಜಿ ತರಂಗಾಂತರ ಹಂಚಿಕೆ ಹಗರಣದ ಖೆ ನಡೆಸಲು ನೇಮಿಸಿದ್ದ ಜಂಟಿ ದೀಯ ಸಮಿತಿ(ಜೆಪಿಸಿ) ಕೊನೆಗೂ ನ್ನ ವರದಿ ಅಂಗೀಕರಿಸಿದೆ. ಅದರ ವರದಿ ರೀಕ್ಷಿಸಿದಂತೆಯೇ ಇದೆ. ಅದು ಈ ಗರಣದ ತನಿಖೆ ನಡೆಸುವುದಕ್ಕಿಂತ ಹೆಚ್ಚಾಗಿ ದನ್ನು ಮುಚ್ಚಿ ಹಾಕುವ ಬಗ್ಗೆಯೇ ತಲೆ ತಿಸಿಕೊಂಡಿತ್ತು ಎಂಬ ಸಂದೇಹವನ್ನು ಅದು ಲಪಡಿಸಿದೆ.

ಮಾಜಿ ದೂರಸಂಪರ್ಕ ಮಂತ್ರಿಗಳಷ್ಟೇ ದಕ್ಕೆ ಕಾರಣ, ಪ್ರಧಾನ ಮಂತ್ರಿಗಳದ್ದಾಗಲೀ, ಣಕಾಸು ಮಂತ್ರಿಗಳದ್ದಾಗಲೀ ಇದರಲ್ಲಿ ನೂ ಪಾತ್ರವಿಲ್ಲ ಎಂಬ ತೀರ್ಮಾನಕ್ಕೆ ಈ ರದಿ ಬಂದಿದೆ. ಅಲ್ಲದೆ ದೇಶದ ಮಹಾಲೆಕ್ಕ ರಿಶೋಧಕರು(ಸಿಎಜಿ) ಈ ಹಗರಣದಲ್ಲಿ ೇಶದ ಖಜಾನೆಗೆ ಆದ ನಷ್ಟವನ್ನು ಅಂದಾಜು ಮಾಡಲು ಬಳಸಿದ ವಿಧಾನ ಸರಿಯಲ್ಲ ಎನ್ನುತ್ತ ಎಜಿ ಲೆಕ್ಕಾಚಾರವನ್ನು ತಿರಸ್ಕರಿಸಲಾಗಿದೆ ... ವರದಿಯಾಗಿದೆ.

ಸಮಿತಿಯ ಮುಂದಿರುವ ಪ್ರಶ್ನೆಗಳ ಗ್ಗೆ ಇನ್ನಷ್ಟು ಚರ್ಚೆ ನಡೆಸಬೇಕಾಗಿದೆ ಎಂಬ ಪ್ರತಿಪಕ್ಷಗಳ ಆಗ್ರಹವನ್ನು ತಿರಸ್ಕರಿಸಿದ ಜೆಪಿಸಿ ಅಧ್ಯಕ್ಷರು ವರದಿಯ ಮೇಲೆ ಮತ ಹಾಕಬೇಕು ಎಂದರು. 30 ಮಂದಿ ಸದಸ್ಯರಿದ್ದ ಜೆಪಿಸಿಯಲ್ಲಿ ವರದಿಯ ಪರವಾಗಿ ಮತನೀಡಿದವರು 16 ಮಂದಿ ಮಾತ್ರ, ಎಂದರೆ ಅಂತೂ-ಇಂತೂ ಬಹುಮತ ಪಡೆಯುವುದೇ ಹಗರಣದ ಹಿಂದಿನ ಸತ್ಯವನ್ನು ಹುಡುಕುವುದಕ್ಕಿಂತ ಈ ಸಮಿತಿಗೆ ಮುಖ್ಯವಾಗಿತ್ತು ಎಂಬುದಕ್ಕೆ ಇದು ಇನ್ನೊಂದು ಸಾಕ್ಷಿ ಎಂದು ವಿಶ್ಲೇಷಕರು ಅಭಿಪ್ರಾಯ ಪಡುತ್ತಿದ್ದಾರೆ.


ಡಿಎಂಕೆ, ಎಐಎಡಿಎಂಕೆ, ಸಿಪಿಐ(ಎಂ), ಸಿಪಿಐ, ಬಿಜೆಡಿ, ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿಗೆ ಸೇರಿದ ಒಟ್ಟು 11 ಮಂದಿ ಈ ವರದಿಯನ್ನು ವಿರೋಧಿಸಿದರು. ಬಿಜೆಪಿಯ ಒಬ್ಬ ಸದಸ್ಯರು ಅನಾರೋಗ್ಯ ಎಂದು ಹಾಜರಿರಲಿಲ್ಲ ಮತ್ತು ಜೆಡಿ(ಯು)ನ ಇಬ್ಬರು ಸದಸ್ಯರು ಸಭೆಗೆ ಹಾಜರಾಗದೆ ಕಾಂಗ್ರೆಸಿಗೆ ಪರೋಕ್ಷ ನೆರವು ನೀಡಿದರು. ಯುಪಿಎ ಭಾಗವಾಗಿರದ ಒಬ್ಬ ನಾಮನಿರ್ದೇಶಿತ ಸದಸ್ಯ ಹಾಗೂ ಬಿಎಸ್‌ಪಿ ಮತ್ತು ಎಸ್‌ಪಿ ಸದಸ್ಯರು ನೇರವಾಗಿಯೇ ಯುಪಿಎ-2 ಸರಕಾರದ ನೆರವಿಗೆ ಬಂದರು.

ಸಿಪಿಐ(ಎಂ)ನ ಸೀತಾರಾಂ ಯೆಚುರಿ, ಸಿಪಿಐನ ಗುರುದಾಸ್ ದಾಸ್‌ಗುಪ್ತ ಮತ್ತು ಎಐಡಿಎಂಕೆಯ ತಂಬಿ ದೊರೈ ವರದಿಗೆ ಭಿನ್ನಮತದ ಟಿಪ್ಪಣಿಗಳನ್ನು ಸಲ್ಲಿಸಿದ್ದಾರೆ. ಅಕ್ಟೋಬರ್ 10ರ ಒಳಗೆ ಇನ್ನಷ್ಟು ಭಿನ್ನ ಮತದ ಟಿಪ್ಪಣಿಗಳು ಬರುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ಈ ಜೆಪಿಸಿ ವರದಿ 2ಜಿ ತರಂಗಾಂತರ ಹಂಚಿಕೆಯ ವಿಷಯವನ್ನು ಸಮಗ್ರವಾಗಿ ಹಾಗೂ ಸರಿಯಾದ ಕಣ್ಣೋಟದಿಂದ ಪರೀಕ್ಷಿಸುವಲ್ಲಿ ವಿಫಲವಾಗಿದೆ ಎಂದು ಸೀತಾರಾಂ ಯೆಚುರಿ ತಮ್ಮ ಭಿನ್ನಮತ ಟಿಪ್ಪಣಿಯಲ್ಲಿ ಹೇಳಿದ್ದಾರೆ. ಉದಾಹರಣೆಗೆ, ಸಮಿತಿಯ ಮುಂದೆ ಇರುವ ದಸ್ತಾವೇಜುಗಳು ಮತ್ತು ಸಾಕ್ಷ್ಯಗಳ ಪ್ರಕಾರ 2ಜಿ ಹಗರಣ ನಡೆದದ್ದು ಕೆಲವು ಖಾಸಗಿ ಕಂಪನಿಗಳಿಗೆ ಪ್ರಯೋಜನ ಒದಗಿಸಲು. ಆದರೆ ಜೆಪಿಸಿ ವರದಿ ಈ ಮೂಲಾಂಶವನ್ನೇ ಪರೀಕ್ಷಿಸುವಲ್ಲಿ ವಿಫಲವಾಗಿದೆ. ಅಲ್ಲದೆ ಇವೆಲ್ಲವನ್ನು ಪರೀಕ್ಷಿಸುವಲ್ಲಿ ಸಂಬದ್ಧವೆನಿಸುವ 2008ರ ನಂತರದ ಬೆಳವಣಿಗೆಗಳನ್ನು ಕೂಡ ಪರಿಶೀಲಿಸುವಲ್ಲಿ ಅದು ವಿಫಲವಾಗಿದೆ. ಆದ್ದರಿಂದ **ಈ ವರದಿ ಈಗಾಗಲೇ ಆಗಿರುವ ಕೇಡನ್ನು ಸೀಮಿತಗೊಳಿಸುವ ಕಸರತ್ತು ಮಾತ್ರವಾಗಿ ಕಾಣುತ್ತದೆ, ಸಾರ್ವಜನಿಕ ಅಭಿಪ್ರಾಯವನ್ನು ಹೇಗಾದರೂ ಸಂತುಷ್ಟಪಡಿಸಲು ಒಂದು ಸೂಕ್ತ ಬಲಿಪಶುವನ್ನು ಗುರುತಿಸಿ ಸರಕಾರದ ಅತ್ಯುನ್ನತ ಸ್ಥಾನಗಳಲ್ಲಿ ಇರುವವರನ್ನು ಎಲ್ಲ ಬಾಧ್ಯತೆಗಳಿಂದ ಮುಕ್ತಗೊಳಿಸುವ ಪ್ರಯತ್ನದಂತೆ ಕಾಣುತ್ತದೆ ಎಂದು ಯೆಚುರಿ ಹೇಳಿದ್ದಾರೆ.**

ವೇದರಾಜ ಎನ್.ಕೆ.

ಜೆಪಿಸಿಯ ಈ ವರದಿ ತನ್ನ ಮುಂದಿರುವ ಸಾಕ್ಷ್ಯಗಳಲ್ಲಿ ತನಗೆ ಅನುಕೂಲವಾದವುಗಳನ್ನು ಮಾತ್ರ ಆರಿಸಿಕೊಂಡು ಈ ವಿಷಯದಲ್ಲಿ ನಿರ್ಣಾಯಕ ವಾಗಬಹುದಾದ ದಸ್ತಾವೇಜುಗಳನ್ನು, ಮೌಖಿಕ ಸಾಕ್ಷ್ಯಗಳನ್ನು ನಿರ್ಲಕ್ಷಿಸಿದೆ, ಈ ಮೂಲಕ 2ಜಿ ಹಗರಣದ ಮೂಲಅಂಶಗಳನ್ನು ಹೊರತರುವಲ್ಲಿ ವಿಫಲವಾಗಿದೆ. 2ಜಿ ಹಗರಣವನ್ನು ತಡೆಯುವಲ್ಲಿ ಕೇಂದ್ರ ಸಂಪುಟದ ಸಾಮೂಹಿಕ ವಿಫಲತೆಯನ್ನು, ಅದರಲ್ಲೂ ವಿಶೇಷವಾಗಿ ಪ್ರಧಾನ ಮಂತ್ರಿಗಳು ಮತ್ತು ಹಣಕಾಸುಮಂತ್ರಿಗಳ ಪಾತ್ರವನ್ನು ಪರಿಶೀಲಿಸುವಲ್ಲಿಯೂ ಇದು ವಿಫಲವಾಗಿದೆ.



ಜೆಪಿಸಿಯ ಕಾರ್ಯನಿರ್ವಹಣೆಯಲ್ಲಿಯೇ ಗಂಭೀರ ಅಕ್ರಮಗಳಿದ್ದವು ಎಂದು ಯೆಚುರಿಯವರು ತಮ್ಮ ಭಿನ್ನಮತದ ಟಿಪ್ಪಣಿಯಲ್ಲಿ ಹೇಳಿದ್ದಾರೆ. ಹಲವು ಸದಸ್ಯರು ಮತ್ತೆ-ಮತ್ತೆ ಕೇಳಿಕೊಂಡರೂ ಸಮಿತಿಗೆ ಪ್ರಧಾನ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳಿಂದ ಉತ್ತರ ಪಡೆಯುವ, ಮಾಜಿ ದೂರಸಂಪರ್ಕ ಮಂತ್ರಿಗಳಿಗೆ ಸಮಿತಿಯ ಮುಂದೆ ಹಾಜರಾಗಲು ಅವಕಾಶ ಕೊಡದೆ ಅವರನ್ನು ಪಾಟೀಸವಾಲುಗಳಿಗೆ ಒಳಪಡಿಸುವ ಅವಕಾಶವನ್ನೂ ನಿರಾಕರಿಸಿದೆ.

ಮಾಜಿ ದೂರಸಂಪರ್ಕ ಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ತಪ್ಪುದಾರಿಗೆಳೆದರು ಎಂಬ ತೀರ್ಮಾನಕ್ಕೆ ಜೆಪಿಸಿ ವರದಿ ಬಂದಿದೆ. ಆದರೆ ಈ ತೀರ್ಮಾನಕ್ಕೆ ಬರಬೇಕಾದರೆ ಪ್ರಧಾನ ಮಂತ್ರಿಗಳು ಉತ್ತರಿಸಬೇಕಾದ ಐದು ಪ್ರಶ್ನೆಗಳನ್ನು ಯೆಚುರಿಯವರ ಟಿಪ್ಪಣಿ ಪಟ್ಟಿ ಮಾಡಿದೆ.

ಅದೇ ರೀತಿ ಹಣಕಾಸು ಮಂತ್ರಿಗಳಿಂದಲೂ ಕೆಲವು ನಿರ್ದಿಷ್ಟ ಪ್ರಶ್ನೆಗಳಿಗೆ ಉತ್ತರ ಪಡೆಯದೆ ಜೆಪಿಸಿ ಈ ಕುರಿತು ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ ಎಂದೂ ಯೆಚುರಿ ಹೇಳಿದ್ದಾರೆ.

ಈ ಹಗರಣಕ್ಕೆ ಯಾರ್ಯಾರು ಎಷ್ಟೆಷ್ಟು ಹೊಣೆಗಾರರು ಎಂಬುದನ್ನು ನಿರ್ಧರಿಸುವಲ್ಲಿ, ಅದನ್ನು ನಿರ್ಧರಿಸಲು ಸೂಕ್ತ ಸಂವಿಧಾನಿಕ, ಕಾನೂನಾತ್ಮಕ ಮತ್ತು ನೈತಿಕ ಅಳತೆಗೋಲುಗಳನ್ನು ಅನ್ವಯಿಸುವಲ್ಲಿ ಈ ವರದಿ ವಿಫಲವಾಗಿದೆ, ಒಂದು ತಪ್ಪು ಎಸಗಿ ಅಪರಾಧ ಮಾಡಬಹುದು, ಅಥವ ತಪ್ಪು ನಡೆಯದಂತೆ ತಡೆಯದೆಯೂ ಅಪರಾಧ ಎಸಗಬಹುದು ಎಂಬ ಸಂಗತಿಯನ್ನು, ಸಚಿವ ಸಂಪುಟದ ಸಾಮೂಹಿಕ ಹೊಣೆಗಾರಿಕೆಯ ಸಂವಿಧಾನಿಕ ಸೂತ್ರವನ್ನು ಗಮನಿಸುವಲ್ಲಿಯೂ ವರದಿ ವಿಫಲವಾಗಿದೆ ಎಂದು ಯೆಚುರಿ ತಮ್ಮ ಟಿಪ್ಪಣಿಯಲ್ಲಿ ಸಂಸತ್ತಿನ ಗಮನಕ್ಕೆ ತಂದಿದ್ದಾರೆ.

ಈ ಹಗರಣದಲ್ಲಿ ಸರಕಾರದ ಬೊಕ್ಕಸಕ್ಕೆ ಆಗಿರುವ ನಷ್ಟದ ಅಂದಾಜಿಗೆ ಸಿಎಜಿ ಅನುಸರಿಸಿದ ವಿಧಾನದಲ್ಲಿ ದೋಷವಿದೆ ಎನ್ನುವ ಈ ವರದಿ ಬೇರೆ ಯಾವ ವಿಧಾನ ಸೂಕ್ತ ಎಂದೇನೂ ಹೇಳುವುದಿಲ್ಲ, ಬದಲಾಗಿ, ಒಮ್ಮೆಲೇ, ಈ ಹಂಚಿಕೆಯಲ್ಲಿ ಏನೂ ನಷ್ಟವೇ ಆಗಿಲ್ಲ ಎಂಬ ತೀರ್ಮಾನದತ್ತ ಧಾವಿಸುತ್ತದೆ. ಹಾಗಿದ್ದರೆ 2001ರ ರೂಪಾಯಿ ಮೌಲ್ಯದಲ್ಲಿದ್ದ ತರಂಗಾಂತರ ಬೆಲೆಗಳು 2008ರ ರೂಪಾಯಿ ಮೌಲ್ಯದಲ್ಲೂ, ಅದು ಕೂಡ ಈ ಅವಧಿಯಲ್ಲಿ ದೂರಸಂಪರ್ಕ ಚಂದಾದಾರರ ಸಂಖ್ಯೆ 75 ಪಟ್ಟು ಹೆಚ್ಚಿರುವಾಗಲೂ ಅಷ್ಟೇ ಇರುತ್ತದೆ ಎಂಬ ತರ್ಕವನ್ನು ಯಾರಾದರೂ ಒಪ್ಪಲು ಸಾಧ್ಯವೇ ಎಂದು ಯೆಚುರಿಯವರ ಟಿಪ್ಪಣಿ ಪ್ರಶ್ನಿಸಿದೆ.

ಸುಗ್ರೀವಾಜ್ಞೆ ಬಂತು! ಸುಗ್ರೀವಾಜ್ಞೆ ಹೋಯಿತು!!

ಳೆದ ವಾರ ಯುಪಿಎ-2 ಸಂಪುಟ ಂಸತ್ತಿನಲ್ಲಿ ಚರ್ಚೆಯನ್ನು ತಪ್ಪಿಸಿಕೊಳ್ಳಲು ಗ್ರೀವಾಜ್ಞೆ ಹೊರಡಿಸುವ ತನ್ನ ಚಾಳಿಗೆ ನುಗುಣವಾಗಿ ಕಳೆದ ವಾರ ಇನ್ನೊಂದು ಗ್ರೀವಾಜ್ಞೆ ಹೊರಡಿಸಿತು. ತಪ್ಪಿತಸ್ಥರೆಂದು ್ಯಯಾಲಯಗಳು ತೀರ್ಪಿತ್ತಿರುವ ಶಾಸಕರು ತು ಸಂಸತ್ ಸದಸ್ಯರು 90ದಿನಗಳೊಳಗೆ ...ನ ನ್ಯಾಯಾಲಯಕ್ಕೆ ಅಪೀಲು ೋಗಿ ತಡೆಯಾಜ್ಞೆ ಪಡೆದರೆ ಅವರು ಮ್ಮ ಸ್ಥಾನದಲ್ಲಿ ಮುಂದುವರೆಯಬಹುದು ಂದು ಈಗ ಜನತಾ ಪ್ರಾತಿನಿಧ್ಯ ಶಾಸನದಲ್ಲಿ ರುವ ಅಂಶವನ್ನು ಇತ್ತೀಚೆಗೆ ಸುಪ್ರಿಂ ೋರ್ಟ್ ತೆಗೆದು ಹಾಕಿ, ಅಂತಹವರು ತಮ್ಮ ್ಥಾನದಲ್ಲಿ ಮುಂದುವರೆಯಲು ತಕ್ಷಣವೇ ನರ್ಹರಾಗುತ್ತಾರೆ ಎಂದು ತೀರ್ಪು ಟ್ಟಿತ್ತು. ಅದನ್ನು ಬದಿಗೊತ್ತುವುದು ಈ ಗ್ರೀವಾಜ್ಞೆಯ ಉದ್ದೇಶವಾಗಿತ್ತು. ಇದಕ್ಕೆ ಸಂಬಂಧಪಟ್ಟಂತೆ ಯುಪಿಎ-2 ಸರಕಾರ ಸಂಸತ್ತಿನಲ್ಲಿ ಜನತಾ ಪ್ರಾತಿನಿಧ್ಯ ಶಾಸನಕ್ಕೆ ತಿದ್ದುಪಡಿ ತರುವ ಒಂದು ಮಸೂದೆಯನ್ನೂ ಮಂಡಿಸಿತ್ತು. ಆದರೆ ಅದರ ಮೇಲೆ ಚರ್ಚೆ ನಡೆಸಲಿಲ್ಲ. ಸಂಸತ್ತಿನ ಅಧಿವೇಶನ ಮುಗಿದ ಮೇಲೆ ಆ ಬಗ್ಗೆ ಸುಗ್ರೀವಾಜ್ಞೆ ಹೊರಡಿಸಿತು.

ಸುಪ್ರಿಂ ಕೋರ್ಟಿನ ಈ ತೀರ್ಪಿನ ಬಗ್ಗೆ ಹಲವು ಸಂದೇಹಗಳಿವೆ, ನಿಜ. ತಮಗೆ ಬೇಡವಾದವರನ್ನು ಅನರ್ಹಗೊಳಿಸಲು ಇದನ್ನೊಂದು ಅಸ್ತ್ರವಾಗಿ ದುರುಪಯೋಗ ಪಡಿಸುವುದನ್ನು ತಪ್ಪಿಸುವುದು ಹೇಗೆ ಎಂಬ ಬಗ್ಗೆ ಸಂಸತ್ತಿನಲ್ಲಿ ಆಮೂಲಾಗ್ರವಾಗಿ ಚರ್ಚಿಸುವ ಅಗತ್ಯವಿತ್ತು. ಅದರ ಬದಲು ಸಂಪುಟದ 'ಒಮ್ಮತ'ದ ನಿರ್ಧಾರದ ಮೇರೆಗೆ ಈ ಸುಗ್ರೀವಾಜ್ಞೆ ಹೊರ ಬಂತು.

ಈಗ, ಒಂದು ವಾರದೊಳಗೇ ಅದೇ 'ಒಮ್ಮತ'ದಿಂದ ಅದನ್ನು ಹಿಂತೆಗೆದುಕೊಳ್ಳಲಾಗಿದೆ, ಅಷ್ಟೇ ಅಲ್ಲ, ಮಸೂದೆಯನ್ನೂ ಹಿಂತೆಗೆದುಕೊಳ್ಳಲಾಗುವುದಂತೆ!

ಈ ನಡುವೆ ಆಳುವ ಕೂಟದ ನೇತೃತ್ವದಲ್ಲಿರುವ ಪಕ್ಷದ ಉಪಾಧ್ಯಕ್ಷರೇ ಇದೊಂದು ಸಂಪೂರ್ಣವಾಗಿ ಅರ್ಥಶೂನ್ಯವಾದ ಸುಗ್ರೀವಾಜ್ಞೆ, ಅದನ್ನು ಹರಿದು ಬಿಸಾಕಬೇಕು ಎಂದು ತಮ್ಮ ವೈಯಕ್ತಿಕ ಅಭಿಪ್ರಾಯ'ವನ್ನು ಸಾರಿದರು! ಅದರ ಫಲವೇ ಪ್ರಧಾನ ಮಂತ್ರಿಗಳು ಅಮೆರಿಕಾದಿಂದ ವಾಪಸಾದ ಕೂಡಲೇ ಈ ಎರಡನೇ 'ಒಮ್ಮತ'ದ ಸಂಪುಟ ನಿರ್ಣಯ.

ಈ ಸುಗ್ರೀವಾಜ್ಞೆ ವಾಪಾಸಾಗುತ್ತಿರುವಂತೆಯೇ ಆಳುವ ಪಕ್ಷದ ರಾಜ್ಯಸಭಾ ಸದಸ್ಯರೊಬ್ಬರು ಸುಪ್ರಿಂ ಕೋರ್ಟಿನ ಈ ತೀರ್ಪಿನ ಪ್ರಕಾರ ತನ್ನ ಸದಸ್ಯತ್ವ ಕಳಕೊಳ್ಳುವ ಮೊದಲ ಸಂಸತ್ ಸದಸ್ಯರಾಗುತ್ತಿದ್ದಾರೆ. 23 ವರ್ಷಗಳ ಹಿಂದಿನ ಒಂದು ಭ್ರಷ್ಟಾಚಾರದ ಪ್ರಕರಣದಲ್ಲಿ ಸಿಬಿಐ ಕೋರ್ಟ್ ಅವರನ್ನು ತಪ್ಪಿತಸ್ಥರೆಂದು ತೀರ್ಪಿತ್ತು 4 ವರ್ಷಗಳ ಶಿಕ್ಷೆ ವಿಧಿಸಿದೆ.

ಉತ್ತರ ಪ್ರದೇಶದ ಈ ಎಂಪಿ 2011ರಲ್ಲಿ ಸಮಾಜವಾದಿ ಪಕ್ಷ ತ್ಯಜಿಸಿ ಕಾಂಗ್ರೆಸ್ ಪಕ್ಷ ಸೇರಿದ್ದರು. ಅವರು ನಂತರ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರ ಮಹತ್ವದ ಹುದ್ದೆಗೆ ಬಡ್ತಿಯನ್ನೂ ಪಡೆದು ಈಗ ಈ ಸುಗ್ರೀವಾಜ್ಞೆಯನ್ನು ಹರಿದು ಬಿಸಾಕಬೇಕು ಎಂದು ಗುಡುಗಿದ ಕಾಂಗ್ರೆಸ್ ಉಪಾಧ್ಯಕ್ಷರ ಉತ್ತರಪ್ರದೇಶ ರ್‍ಯಾಲಿಗಳಲ್ಲಿ ಪ್ರತಿಷ್ಠೆಯ ಸ್ಥಾನ ಪಡೆಯಲಾರಂಭಿಸಿದರು ಎನ್ನಲಾಗಿದೆ, ಅವರು ಈಗ ಹತ್ತು ವರ್ಷಗಳ ವರೆಗೆ ಚುನಾವಣೆಗೆ ಸ್ಪರ್ಧಿಸುವಂತಿಲ್ಲ.



ಸುಗ್ರೀವಾಜ್ಞೆ ನಾನ್‌ಸೆನ್ಸ್!
"ಸರಿಯಾದ ಸಮಯಕ್ಕೆ
ರಾಹುಲ್ ದೊಡ್ಡವರಾದರು!"


ಆಧುನಿಕ ರಿಪ್ ವಾನ್ ವಿಂಕಲ್
ನಮ್ಮ ರಾಹುಲ್
'ದಿ ಹಿಂದೂ'ನಲ್ಲಿ ಸುರೇಂದ್ರನ್ ವ್ಯಂಗ್ಯ

ಜಗದಗಲ

ಶರತ್‌ಚಂದ್ರ

ಸ್ಯಾಮ್ ಅಂಕಲ್‌ಗೆ ಯಾಕೆ ಗರ ಬಡಿದಿದೆ ?!

ಅಮೆರಿಕನ್ ಸರ್ಕಾರವನ್ನು 'ಅಂಕಲ್ ಸ್ಯಾಮ್' ಎಂದು ಸಹ ಕರೆಯಲಾಗುತ್ತದೆ. 'ಸ್ಯಾಮ್ ಅಂಕಲ್' ಜಗತ್ತಿನ ಅತ್ಯಂತ ಪ್ರಬಲವಾದ ಶಕ್ತಿ. ಅದಕ್ಕೆ ಸವಾಲು ಹಾಕುವವರಿಲ್ಲ ಎಂದು ಪ್ರತೀತಿ. ಆದರೆ ಈಗ 'ಸ್ಯಾಮ್ ಅಂಕಲ್'ಗೆ ಗರ ಬಡಿದಿದೆ. ಒಬಾಮರ ಆಳುವ ಡೆಮೊಕ್ರಾಟಿಕ್ ಮತ್ತು ವಿರೋಧಿ ರಿಪಬ್ಲಿಕನ್ ಪಕ್ಷಗಳ ನಡುವಿನ ರಾಜಕೀಯ ಘರ್ಷಣೆಗೆ, ಮುಂದಿನ ಹಣಕಾಸು ವರ್ಷದ ಬಜೆಟ್ ಮಂಜೂರು ಬಲಿಯಾಗಿದೆ. ಅಮೆರಿಕದ ಹಣಕಾಸು ವರ್ಷ ಅಕ್ಟೋಬರ್ ನಿಂದ ಸೆಪ್ಟೆಂಬರ್



ವರೆಗೆ ಇರುತ್ತದೆ. ಬಜೆಟ್ ಮಂಜೂರು ಆಗಿಲ್ಲವಾದ್ದರಿಂದ ಅಕ್ಟೋಬರ್ 1ರಿಂದ ಅಮೆರಿಕದ ಫೆಡರಲ್ ಸರ್ಕಾರ ತೀರಾ 'ಅಗತ್ಯ ಮತ್ತು ತುರ್ತು' ಇರುವಂಥದ್ದು ಬಿಟ್ಟು ಬೇರೆ ಯಾವುದೇ ಖರ್ಚು ಮಾಡುವಂತಿಲ್ಲ. ಇದನ್ನು ಸರ್ಕಾರದ 'ಶಟ್ ಡೌನ್' ಎಂದು ಕರೆಯುತ್ತಾರೆ.


ಒಬಾಮಾಕೇರ್ ಯೋಜನೆಗೆ ಬಜೆಟಿನಲ್ಲಿ ಒದಗಿಸಲಾದ ಹಣ ಎರಡೂ ಪಕ್ಷಗಳ ನಡುವೆ ವಿವಾದದ ವಿಷಯ. ಒಬಾಮಾಕೇರ್ ವೆಚ್ಚ ಕಡಿತ ಮಾಡಬೇಕು ಅಥವಾ ಹಿಂಪಡೆಯಬೇಕು, ಇಲ್ಲವಾದರೆ ಬಜೆಟ್ ಪಾಸು ಮಾಡುವುದಿಲ್ಲ ಎಂಬುದು ರಿಪಬ್ಲಿಕನ್ ಪಕ್ಷದ ಬ್ಲಾಕ್‌ಮೇಲ್. ಒಬಾಮಾಕೇರ್ 2010ರಲ್ಲಿ ಚುನಾವಣಾ ವಿಷಯ ಸಹ ಆಗಿದ್ದು ಅದಕ್ಕೆ ಜನಾದೇಶ ಸಿಕ್ಕಿದೆ. ಒಬಾಮಾಕೇರ್ ಈಗಾಗಲೇ ಮಂಜೂರು ಆಗಿರುವ ಯೋಜನೆ. ಅದನ್ನು ಕಡಿತ ಮಾಡುವ ಬ್ಲಾಕ್‌ಮೇಲ್‌ಗೆ ಬಗ್ಗುವ ಪ್ರಶ್ನೆಯೇ ಇಲ್ಲ. ಎಂಬುದು ಒಬಾಮ ಮತ್ತು ಡೆಮೊಕ್ರಾಟಿಕ್ ಪಕ್ಷದ ನಿಲುವು. ರಿಪಬ್ಲಿಕನ್ ಪಕ್ಷದ ಬ್ಲಾಕ್‌ಮೇಲ್‌ಗೆ ನಿಜವಾಗಿ ಬಲಿಯಾದವರು ಅಮೆರಿಕನ್ ಸರ್ಕಾರದ ಸುಮಾರು 7 ಲಕ್ಷ ನೇರ ಉದ್ಯೋಗಿಗಳು. ವಿದ್ಯುತ್ ಶಕ್ತಿ, ರೆವಿನ್ಯೂನಿಂದ ಹಿಡಿದು ರಕ್ಷಣಾ ಇಲಾಖೆಯ ವರೆಗೆ ('ಅಗತ್ಯ ಮತ್ತು ತುರ್ತು' ಅಲ್ಲದ) ಬಹುಸಂಖ್ಯಾತ ಉದ್ಯೋಗಿಗಳಿಗೆ ಅಕ್ಟೋಬರ್ 1ರಿಂದಲೇ ಸಂಬಳ-ರಹಿತ ರಜೆ. ಇಂತಹ 'ಶಟ್ ಡೌನ್' ಹೊಸದೇನಲ್ಲ. 17 ವರ್ಷಗಳ ಹಿಂದೆ 1995-96ರಲ್ಲಿ ಕ್ಲಿಂಟನ್ ಅಧ್ಯಕ್ಷತೆಯಲ್ಲಿ ಆಗಿತ್ತು. ಹಿಂದೆ ಒಟ್ಟು 17 ಬಾರಿ ಆಗಿದೆಯಂತೆ.

ಇದು ಸರ್ಕಾರದ ಹಣ ಪಾವತಿಯ ಮೇಲೆ ಸಹ ಪರಿಣಾಮ ಬೀರುವುದರಿಂದ ಇಡೀ ಆರ್ಥಿಕದ ಮೇಲೂ ಪರಿಣಾಮ ಬೀರುತ್ತದೆ. ಒಂದು ತಿಂಗಳ 'ಶಟ್ ಡೌನ್' ದೇಶದ ಜಿಡಿಪಿಯ ಶೇ.1.3% ನುಂಗಿ ಹಾಕುತ್ತದಂತೆ. ಸರ್ಕಾರದ ಸಾಲ ಸಹ ಹೆಚ್ಚುತ್ತದೆ. 'ಶಟ್ ಡೌನ್' ಹಲವು ವಾರಗಳ ಕಾಲ ಮುಂದುವರೆದರೆ ಸಾಲದ ಮಿತಿ ಮೀರಬಹುದು. ಸರ್ಕಾರದ ಸಾಲದ ಮೇಲೂ ಮಿತಿಯಿದ್ದು ಅದನ್ನೂ ಪಾರ್ಲಿಮೆಂಟು ಮಾತ್ರ ಏರಿಸಬಲ್ಲುದು. ಅಮೆರಿಕದ ಪಾರ್ಲಿಮೆಂಟಿನ ಕೆಳ ಸದನದಲ್ಲಿ (ಪ್ರತಿನಿಧಿ ಸಭೆಯಲ್ಲಿ) ರಿಪಬ್ಲಿಕನ್ ಪಕ್ಷದ ಬಹುಮತ ಇದೆ. ಮೇಲ್ ಸದನವಾದ ಸೆನೆಟಿನಲ್ಲಿ ಡೆಮೊಕ್ರಾಟಿಕ್ ಪಕ್ಷದ ಬಹುಮತ ಇದೆ. ರಿಪಬ್ಲಿಕನ್ ಪಕ್ಷ ಒಬಾಮಕೇರ್ ಮತ್ತು ಸಾಲದ ಮಿತಿ ಏರಿಕೆ ಇವರೆಡನ್ನೂ ವಿರೋಧಿಸುತ್ತಿದೆ. ಈ ಬಿಕ್ಕಟ್ಟು ಮುಂದುವರೆದು ಅಮೆರಿಕನ್ ಸರ್ಕಾರ ಸಾಲದ ಮಿತಿಯನ್ನೂ ಮೀರಿದರೆ ಮಾತ್ರ ಈ ಸರ್ಕಾರಿ ಬಿಕ್ಕಟ್ಟು ವ್ಯಾಪಕ ಆರ್ಥಿಕ ಬಿಕ್ಕಟ್ಟು ಆಗುವುದು. ಯಾಕೆಂದರೆ ಅಮೆರಿಕನ್ ಸರ್ಕಾರದ ಸಾಲದ ಬಾಂಡುಗಳು



ಜಗತ್ತಿನಲ್ಲೇ ಅತ್ಯಂತ ವಿಶ್ವಾಸಾರ್ಹ ಹಣಕಾಸು ಸಾಧನ. ಅದರ ಮೇಲೆ ನಂಬಿಕೆ ಅಲ್ಲಾಡಿದರೆ ಇಡೀ ಜಾಗತಿಕ ಆರ್ಥಿಕ ಕುಸಿತ ಕಾಣುವುದು (ಲೆಹಮನ್ ಬ್ರದರ್ಸ್ ಕುಸಿದಾಗ ಆದಂತೆ) ಖಂಡಿತ ಎನ್ನಲಾಗಿದೆ.

ಆಳುವ ಡೆಮೊಕ್ರಾಟಿಕ್ ಮತ್ತು ವಿರೋಧಿ ರಿಪಬ್ಲಿಕನ್ ಪಕ್ಷಗಳ ನಡುವೆ ಆರ್ಥಿಕ ನೀತಿಗಳಲ್ಲಿ ಭಾರೀ ವ್ಯತ್ಯಾಸಗಳೇನಿಲ್ಲ. ರಿಪಬ್ಲಿಕನ್ ಪಕ್ಷ ಶ್ರೀಮಂತರ ಮತ್ತು ದೈತ್ಯ ಕಂಪನಿಗಳ ಹಿತಾಸಕ್ತಿಗಳಿಗೆ ಇನ್ನೂ ಹೆಚ್ಚು ಸ್ಪಂದಿಸುವ ಪಕ್ಷ. ಅದರಲ್ಲೂ ಅದರ ಉಗ್ರ ಬಲಪಂಥೀಯ ವಿಭಾಗವಾದ 'ಟೀ ಪಾರ್ಟಿ' ಒಬಾಮನನ್ನು 'ಕಮ್ಯುನಿಸ್ಟ್' ಎಂದು ಕರೆಯುವಷ್ಟು ಕುರುಡು ಉಗ್ರ ಬಲಪಂಥೀಯ ! ಆದರೆ ಒಬಾಮಾಕೇರ್ ಒಬಾಮರ ಕನಸಿನ ಕೂಸು. ಅವರ ಪ್ರಮುಖ ಚುನಾವಣಾ ಆಶ್ವಾಸನೆ. ತಾವು ಇತರರಿಗಿಂತ ಭಿನ್ನ ಮತ್ತು ಪ್ರಗತಿಪರ ಎಂದು ತೋರಿಸಿಕೊಳ್ಳಲು ಇರುವ ಒಂದೇ ಉಪಾಯ. ಇಂತಹ ಬಡ ಮತ್ತು ಮಧ್ಯಮ ವರ್ಗಕ್ಕೆ ಅನುಕೂಲಕರ ಸಾಮಾಜಿಕ ಕಲ್ಯಾಣ ಯೋಜನೆಗಳು ಜಾರಿ ಆದರೆ ಮುಂಬರುವ ಮಧ್ಯಂತರ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಡೆಮೊಕ್ರಾಟಿಕ್ ಪಕ್ಷಕ್ಕೆ ಅನುಕೂಲಕರವಾಲಿದೆ ಎಂಬ ಆತಂಕವೂ ರಿಪಬ್ಲಿಕನ್ ಪಕ್ಷಕ್ಕಿದೆ. ಈ ಹಿನ್ನೆಲೆಯಲ್ಲಿ ಹಲವು ವಾರಗಳ ಕಾಲ 'ಶಟ್ ಡೌನ್' ಮುಂದುವರೆಯಬಹುದು ಎಂಬ ಆತಂಕ ಹರಡಿದೆ. ಆದ-ರೆ ಒಬಾಮ ಮತ್ತು ರಿಪಬ್ಲಿಕನ್ ಪಕ್ಷ ಜಾಗತಿಕ ಆರ್ಥಿಕ ಕುಸಿತದ ರಿಸ್ಕ್ ತೆಗೆದುಕೊಳ್ಳಲು ತಯಾರಿದ್ದಾರಾ ? ಯಾರು ಹಿಂಜರಿಯಬಹುದು ? ಎಂಬುದು ಕಾದು ನೋಡಬೇಕಾದ



ವಿಷಯ. ಈ ಬಿಕ್ಕಟ್ಟು ಯಾವುದೇ ರೀತಿ
ಬಗೆಹರಿದರೂ ಭಾರತ ಸೇರಿದಂತೆ
ಜಗತ್ತಿಗೆ ಮಹತ್ವದ ವಿದ್ಯಮಾನ ಆಗ

ಈ ಬಿಕ್ಕಟ್ಟಿಗೆ ಕಾರಣವಾದ ಒಬಾಮಾ
ಅಂದರೆ ಏನು ? ಒಬಾಮಾಕೇರ್ ಎಂಬ
ಆರೋಗ್ಯ ವಿಮೆ ಅಥವಾ ಯೂ
ಅಗ್ಗದ ಆರೋಗ್ಯ ಸೇವೆ ಇಲ್ಲದ ಬಡ
ಮಧ್ಯಮ ವರ್ಗದವರಿಗೆ ಅಗ್ಗದ ಉ
ಗುಣ ಮಟ್ಟದ ಆರೋಗ್ಯ ಸೇವೆ ಒದಗಿ
ಯೋಜನೆಯ ಅನಧಿಕೃತ ಹೆಸರು. ಇ
4.4 ಕೋಟಿ ಜನ ಇದ್ದಾರೆ ಎಂದು
ದಾಜು ಮಾಡಲಾಗಿದೆ. ಈಗಾಗಲೇ ಇ
ಮೆಡಿಕೇಡ್ ಯೋಜನೆಯನ್ನು 1.5 ಕೋ
ಜನರಿಗೆ ವಿಸ್ತರಿಸುತ್ತದೆ. ಅಮೆರಿ
ಬಡತನದ ರೇಖೆಯ ನಾಲ್ಕು
ಆದಾಯಕ್ಕಿಂತ (ಸುಮಾರು ವಾರ್ಷಿಕ
ಸಾವಿರ ಡಾಲರ್) ಕಡಿಮೆ ಆದಾಯ ಇ
ಮತ್ತು ಬೇರೆ ಯಾವುದೇ ಆರೋಗ್ಯ
ಅಥವಾ ಸೇವೆ ಇಲ್ಲದವರಿಗೆ ಆರೋಗ್ಯ
ಒದಗಿಸಲಾಗುತ್ತದೆ. ಈ ಹೊಸ ಆರೋ
ವಿಮೆ ಫೆಡರಲ್ ಸರ್ಕಾರದ ನಿಬಂಧನೆ
ಒಳಪಡುವ ಮತ್ತು ಅದರ
ಇರುವಂಥದಾಗಿರುತ್ತದೆ. ಈ ಆರೋ
ವಿಮೆಯ ವೆಚ್ಚ ಆದಾಯಕನ್ನುಗುಣ
ತೆರಿಗೆ ಕೊಡಬೇಕಾದ ವಾರ್ಷಿಕ ಆದಾ
ಸೊನ್ನೆಯಿಂದ ಶೇ.9.5 ವರೆಗೆ ಇರುತ್ತದೆ
ವಿಮೆ ತೆಗೆದುಕೊಂಡವರಿಗೆ ಆದಾಯ
ವಿನಾಯಿತಿ ಸಹ ಇರುತ್ತದೆ.

ಇದಲ್ಲದೆ ಒಬಾಮಾಕೇರ್ ಆರೋ
ವಿಮೆ ಕಂಪನಿಗಳ ಮೇಲೆ ಹ
ನಿಬಂಧನೆಗಳನ್ನು ಹೇರುವ ಮೂಲಕ ಒ
ಆರೋಗ್ಯ ಸೇವಾ ವೆಚ್ಚವನ್ನು ಕಡಿಮೆ
ಮಾಡುತ್ತದೆ. ಅಮೆರಿಕದ ದೈತ್ಯ ಆರೋ
ವಿಮೆ ಕಂಪನಿಗಳು ಹಲವು ನೆಪಗ
ಒಡ್ಡಿ ಆರೋಗ್ಯ ಸೇವಾ ವೆಚ್ಚ ಕೊ
ನಿರಾಕರಿಸುವ, ಮತ್ತು ಇತರ ಹತ್ತು ಹ
ಕೀಳು ತಂತ್ರಗಳ ಮೂಲಕ ಅಮೆರಿಕ
ಆರೋಗ್ಯ ಸೇವೆಯ ಗುಣಮಟ್ಟ ತಗ್ಗಿಸ
ಭಾರಿ ಲಾಭ ಮಾಡುತ್ತಾ ಇದ್ದವು. ತಮ
ಕಡಿಮೆ ಮಾಡುವ ಈ ನಿಬಂಧನೆಗ
ಸ್ವಾಭಾವಿಕವಾಗಿಯೇ ದೈತ್ಯ ಆರೋಗ್ಯ
ಕಂಪನಿಗಳ ಲಾಬಿ ವಿರೋಧಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೋಮುವಾದಿ ಧ್ರುವೀಕರಣ ....

ಪುಟ 07 ರಿಂದ

ಹೊಲಸು ಆಚರಣೆ ನಡೆಸುವ ತಪ್ಪಿತಸ್ಥರು ಈ ಆರೆಸ್ಸೆಸ್/ಬಿಜೆಪಿಯವರೇ.

ಈ ದೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಸಾಮಾಜಿಕ-ಆರ್ಥಿಕ ಸ್ಥಾನಮಾನ ಕುರಿತ ನ್ಯಾಯಮೂರ್ತಿ ಸಾಚಾರ್ ಸಮಿತಿ ಕಂಡುಕೊಂಡಿರುವ ಸಂಗತಿಗಳನ್ನು ತಿಳಿದು ಇಡೀ ದೇಶಕ್ಕೆ ಆಘಾತವೇ ಆಗಿತ್ತು. ಇದನ್ನು ಅನುಸರಿಸಿ ನ್ಯಾಯಮೂರ್ತಿ ರಂಗನಾಥ್ ಮಿಶ್ರ ಆಯೋಗದ ವರದಿ ಬಂತು. ಅದು ಧಾರ್ಮಿಕ ಅಲ್ಪಸಂಖ್ಯಾತರಿಗೆ, ನಿರ್ದಿಷ್ಟವಾಗಿ ಮುಸ್ಲಿಮರಿಗೆ ಮೀಸಲಾತಿ ನೀಡಬೇಕಾಗುತ್ತದೆ ಎಂದಿದೆ. ಹೀಗಿದ್ದರೂ, ಒಂದೆಡೆ ಮೊಸಳೆ ಕಣ್ಣೀರು ಸುರಿಸುತ್ತ ಬಿಜೆಪಿ ನಮ್ಮ ಈ ಸೋದರ ವಿಭಾಗಗಳ ಸಂಕಟಗಳನ್ನು ಪರಿಹರಿಸುವ ಯಾವುದೇ ಕ್ರಮವನ್ನು 'ತುಷ್ಟೀಕರಣ' ಎಂದೇ ಬಗೆಯುತ್ತದೆ. ವಾಸ್ತವವಾಗಿ, ಇದೇ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಅವರು ಭರದಿಂದ ನಡೆಸುವ ಪ್ರಚಾರಕಾರ್ಯದ ಬುನಾದಿ.

'ಚೈತನ್ಯಶೀಲತೆ'ಯ ಈ ಮಾದರಿ!

'ಚೈತನ್ಯಶೀಲ ಗುಜರಾತ್'ನ 'ವಿಕಾಸ ಪುರುಷ' ಮುಖ್ಯಮಂತ್ರಿಗಳು ತಮ್ಮ ಭವಿಷ್ಯದ ಪ್ರಧಾನ ಮಂತ್ರಿ ಸ್ಥಾನದ ಅಭ್ಯರ್ಥಿ ಎಂದು ಆರೆಸ್ಸೆಸ್/ಬಿಜೆಪಿಯ ಅಬ್ಬರದ ಪ್ರಚಾರ ನಡೆದಿದೆ. ಆದರೆ ಈ 'ಚೈತನ್ಯಶೀಲ' ರಾಜ್ಯ ಕುರಿತ ಹಲವಾರು ಸಂಗತಿಗಳು ಅವರ ಈ ಪ್ರಚಾರದಲ್ಲಿನ ತೂತುಗಳನ್ನು ಎತ್ತಿ ತೋರುತ್ತವೆ. ಮಾನವ ಅಭಿವೃದ್ಧಿಯ ಎಲ್ಲ ಸೂಚ್ಯಂಕಗಳಲ್ಲಿ ಈ ರಾಜ್ಯ ರಾಷ್ಟ್ರೀಯ ಸರಾಸರಿಗಿಂತ ಬಹಳ ಕೆಳಗೇ ಇದೆ. ಭಾರತೀಯ ರಿಝರ್ವ್ ಬ್ಯಾಂಕಿನ ಗವರ್ನರ್‌ರವರ ನೇತೃತ್ವದ "ರಾಜ್ಯಗಳ ಒಂದು ಸಂಯುಕ್ತ ಅಭಿವೃದ್ಧಿ ಸೂಚ್ಯಂಕ ರೂಪೀಕರಣ ಸಮಿತಿ'ಯ ಇತ್ತೀಚಿನ ವರದಿ ಈ 'ಗುಜರಾತ್ ಮಾದರಿ' ಎಂಬುದರ ನಿಜಸ್ವರೂಪವನ್ನು ಇನ್ನಷ್ಟು ಬಯಲಿಗೆ ತಂದಿದೆ. ಈ ಅಭಿವೃದ್ಧಿ ಸೂಚ್ಯಂಕದ ಪ್ರಕಾರ ಗುಜರಾತ್ 12 ನೇ ಸ್ಥಾನದಲ್ಲಿದೆ. ತಮ್ಮ ಈ ಅಭಿವೃದ್ಧಿ(ಬಹುಶಃ ಕಡಿಮೆ ಅಭಿವೃದ್ಧಿ) ಸೂಚ್ಯಂಕದಲ್ಲಿ 0.6ಕ್ಕಿಂತ ಹೆಚ್ಚಿನ ಅಂಕ ಪಡೆಯುವ ರಾಜ್ಯಗಳನ್ನು ಈ ಸಮಿತಿ ಅತ್ಯಂತ 'ಕಡಿಮೆ ಅಭಿವೃದ್ಧಿ ಕಾಣುತ್ತಿರುವ ರಾಜ್ಯಗಳು' ಎಂದೂ, 0.4ರಿಂದ 0.6 ಸೂಚ್ಯಂಕದ ರಾಜ್ಯಗಳನ್ನು 'ಕಡಿಮೆ ಅಭಿವೃದ್ಧಿ'ಯ ರಾಜ್ಯಗಳೆಂದೂ 0.4ಕ್ಕಿಂತ ಕಡಿಮೆ ಸೂಚ್ಯಂಕ ಪಡೆದ ರಾಜ್ಯಗಳನ್ನು 'ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ' ರಾಜ್ಯಗಳೆಂದೂ ಪಟ್ಟಿ ಮಾಡಿದೆ. 0.49 ಸೂಚ್ಯಂಕ ಪಡೆದಿರುವ ಗುಜರಾತ್ ಕಡಿಮೆ ಅಭಿವೃದ್ಧಿಯ ರಾಜ್ಯಗಳ ಪಟ್ಟಿಯಲ್ಲಿ ಸೇರುತ್ತದೆ. ಇದೀಗ ಬಿಜೆಪಿ ರಾಜ್ಯ ಸರಕಾರದ ಅಡಿಯಲ್ಲಿ ಗುಜರಾತಿನ ಚೈತನ್ಯಶೀಲತೆಯ ಪರಿ!

ಹೀಗಿರುವಾಗ ಆರೆಸ್ಸೆಸ್/ ಬಿಜೆಪಿ ತನ್ನ ಮೂಲಭೂತ ಅಜೆಂಡಾಕ್ಕೆ ಮರಳಿದೆ, 2014ರ ಸಾರ್ವತ್ರಿಕ ಚುನಾವಣೆಗಳಿಗೆ ಕೋಮುವಾದಿ ಧ್ರುವೀಕರಣವೇ ಅದಕ್ಕೆ ಬೆನ್ನೆಲುಬು. ಆದ್ದರಿಂದ ಕೇಂದ್ರ ಗೃಹಮಂತ್ರಿಗಳ ಪತ್ರ ಸಂವಿಧಾನದ ಭಾವಕ್ಕೆ(!) ವಿರುದ್ಧ ಹೋಗುತ್ತದೆ, ಪ್ರಧಾನ ಮಂತ್ರಿಗಳು ಮುಖ್ಯಮಂತ್ರಿಗಳಿಗೆ ಗೃಹಮಂತ್ರಿಗಳು ಬರೆದಿರುವ ಪತ್ರವನ್ನು ಹಿಂತೆಗೆದುಕೊಳ್ಳುವಂತೆ ನಿರ್ದೇಶನ ನೀಡಬೇಕು ಎಂದಿರುವ ಬಿಜೆಪಿ ಅಧ್ಯಕ್ಷರ ಹೇಳಿಕೆಗೆ ಆಶ್ಚರ್ಯ ಪಡಬೇಕಾಗಿಲ್ಲ.

ಮುಂದುವರೆದು ಬಿಜೆಪಿ ಅಧ್ಯಕ್ಷರು ಹೀಗನ್ನುತ್ತಾರೆ: " ಕಾಂಗ್ರೆಸ್ ಈ ದೇಶದ ಅತಿ ದೊಡ್ಡ ಕೋಮುವಾದಿ ಪಕ್ಷ. ಈ ಹಿಂದೆ ಪ್ರಧಾನ ಮಂತ್ರಿಗಳು ಮುಸ್ಲಿಮರಿಗೆ ಭಾರತೀಯ ಸಂಪನ್ಮೂಲಗಳ ಮೇಲೆ ಮೊದಲ ಹಕ್ಕಿದೆ ಎಂದಿದ್ದರು. ಈಗ ನಮ್ಮ ಗೃಹಮಂತ್ರಿಗಳು ಯಾವುದೇ ಅಮಾಯಕ ಮುಸ್ಲಿಂ ಯುವಜನರನ್ನು ಭಯೋತ್ಪಾದನೆಯ ಹೆಸರಿನಲ್ಲಿ ತಪ್ಪಾಗಿ ಬಂಧನದಲ್ಲಿಡದಂತೆ ನೋಡಿಕೊಳ್ಳಬೇಕು ಎಂದು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ." ಇದೇ ದಾಟಿಯಲ್ಲಿ ಸಾಗಿದೆ ಅವರ ಹೇಳಿಕೆ.

ಆದ್ದರಿಂದ ಮುಝಫ್ಫರ್‌ನಗರದ ಭೀಕರ ಗಲಭೆಗಳ ನಂತರ ಉತ್ತರ ಪ್ರದೇಶ ರಾಜ್ಯದ ಪಶ್ಚಿಮ ಭಾಗದಲ್ಲಿ ಕೋಮು ಸೆಳೆತಗಳು ಮುಂದುವರೆಯುತ್ತಿವೆ, ಅಷ್ಟೇ ಅಲ್ಲ, ಅವು ದೇಶದ ಇತರ ಭಾಗಗಳಿಗೂ ಪಿಡುಗಾಗಿ ಹರಡುವಂತೆ ಕಾಣುತ್ತಿದೆ. ಈ ಅಂಕಣದಲ್ಲಿ ಈ ಹಿಂದೆ ಹೇಳಿರುವಂತೆ 'ವಿಕಾಸ ಪುರುಷ' ನಿಜವಾಗಿ 'ವಿನಾಶಪುರುಷ'ನಾಗಿ ಪ್ರಕಟಗೊಳ್ಳಬಹುದು. ಈ ರೀತಿಯಲ್ಲಿ ಬಿಜೆಪಿಯ ಚುನಾವಣಾ ಬೆಂಬಲದ ಅಗತ್ಯಗಳಿಗಾಗಿ ಕೋಮುವಾದಿ ಸೆಳೆತಗಳನ್ನು ತೀಕ್ಷ್ಣಗೊಳಿಸಲು ಬಿಡಲಾಗದು. ಆಧುನಿಕ ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ರಕ್ಷಿಸಬೇಕಾದರೆ, ಕ್ರೋಢೀಕರಿಸಬೇಕಾದರೆ ಇದು ಅನಿವಾರ್ಯ. ●

ಎಡಪಕ್ಷಗಳ ದ.ಕ.....

ಪುಟ 6 ರಿಂದ

ಕಾಯಿದೆ 2012 ನ್ನು ರೂಪಿಸಿದೆ. ಕಾಯ್ದೆಯು ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ಜಾ-ರಿಯಾದರೆ ಅವರಿಗೆ ನ್ಯಾಯ ಸಿಗಬಹುದು. ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂಬುದಾಗಿ ಸಿಐಟಿಯು ದ.ಕ,.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಹೇಳಿದರು.

ಅವರು ಮಂಗಳೂರಿನಲ್ಲಿ ಅಕ್ಟೋಬರ್ 1 ರಂದು ನಡೆದ ಬೀದಿಬದಿ ವ್ಯಾಪಾರಿಗಳ ಸಂಘ (ಸಿಐಟಿಯು) ದ ಎರಡನೇ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಬೀದಿ ಬದಿ ವ್ಯಾಪಾರಿಗಳನ್ನು ಕೆಲವು ಜನ ಅನಾಗರಿಕರು, ನೈರ್ಮಲ್ಯಕ್ಕೆ ಧ-ಕ್ಕೆ ತರುವ ಸಂಸ್ಕೃತಿ ಹೀನರು ಎಂಬಂತೆ



ಬಿಂಬಿಸಿದ್ದರು. ಕೆಲವರಂತೂ ಬಾಂಗ್ಲಾದೇಶದ ಅಕ್ರಮ ವಲಸಿಗರು ಬೀದಿ ವ್ಯಾಪಾರದಲ್ಲಿ ತೊಡಗಿದ್ದಾರೆ ಎಂದೆಲ್ಲಾ ಆರೋಪಿಸಿದರು. ಧಾರ್ಮಿಕವಾಗಿ ಒಡಕು ಮೂಡಿಸುವ ಪ್ರಯತ್ನವೂ ನಡೆಯಿತು. ಸಿಐಟಿಯು ಬೀದಿ ಬದಿ ವ್ಯಾಪಾರಿಗಳನ್ನು ಒಗ್ಗೂಡಿಸಿದ್ದಲ್ಲದೆ, ಅವರ ಬಗ್ಗೆ ಸಮಾಜದಲ್ಲಿ ಮನೆ ಮಾಡಿದ್ದ ತಪ್ಪು ತಿಳುವಳಿಕೆಗಳನ್ನು ಹೋಗಲಾಡಿಸಿದೆ ಎಂದರು.

ಯಾವತ್ತೂ ಉಳ್ಳವರ ಪರ ವಹಿಸುವ ಕಾಂಗ್ರೆಸ್ ಸರ್ಕಾರ 2 ಕೋಟಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸುವ ಉದ್ದೇಶದಿಂದಲೇ ಈ ಕಾಯ್ದೆ ಜಾರಿಗೆ ತಂದಿದೆ. ಕೇವಲ ಕಾಯ್ದೆ ಜಾ-ರಿಯಾದರೆ ಸಾಲದು. ಅವರಿಗೆ ಗುರುತಿನ ಚೀಟಿ, ಬಿಪಿಎಲ್ ಕಾರ್ಡು, ಉಚಿತ ಮನೆ ನಿವೇಶನಗಳನ್ನು ನೀಡಬೇಕು. ಅವರ ಮಕ್ಕಳು ಉತ್ತಮ ಶಿಕ್ಷಣ ಪಡೆದು ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳುವಂತಾಗಬೇಕು ಎಂದು ವಸಂತ ಆಚಾರಿ ನುಡಿದರು.

ಸಂಘದ ಗೌರವಾಧ್ಯಕ್ಷ ಸುನಿಲ್ ಕುಮಾರ್ ಬಜಾಲ್ ಮಾತನಾಡಿ, ಬೀದಿ ಬದಿ ವ್ಯಾಪಾರಿಗಳು ಯಾರದ್ದೋ ತಲೆ ಒಡೆದು ಬದುಕುವವರಲ್ಲ. ಹಿಂದೆ ಪೋಲೀಸರನ್ನು ಪಾಲಿಕೆ ಅಧಿಕಾರಿಗಳನ್ನು ಕಂಡಾಗ ಸರಕು ಸರಂಜಾಮು ಹಿಡಿದು ಓಡುತ್ತಿದ್ದ ಬೀದಿ ಬದಿ ವ್ಯಾಪಾರಿಗಳು ಈ ದಬ್ಬಾಳಿಕೆಯನ್ನು ತಡೆಯುವ ಮಟ್ಟಿಗೆ ಬೆಳೆದಿದ್ದಾರೆ. ಮೂರು ತಿಂಗಳ ಕಾಲ ಸಂಘಟಿತ ಹೋರಾಟ ನಡೆದದ್ದ-ರಿಂದ ಪಾಲಿಕೆ ಟೈಗರ್ ಕಾರ್ಯಾಚರಣೆಯನ್ನು ಕೈಬಿಡಬೇಕಾಯಿತು. ಪಾಲಿಕೆಯ ಟೈಗರ್ ಅನ್ನು ಹಿಮ್ಮೆಟ್ಟಿಸಿದ್ದು ಕೆಂಬಾವುಟ ಎಂದರು.

ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಡಿವೈಎಫ್‌ಐ ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಸಂಘದ ಅಧ್ಯಕ್ಷ ಮೊಹಮ್ಮದ್ ಮುಸ್ತಾಫಾ, ಕಾರ್ಯದರ್ಶಿ ಸಂತೋಷ್ ಮತ್ತಿತರರು ಉಪಸ್ಥಿತರಿದ್ದರು. ●

ಮನೆ ನಿರ್ಮಿಸಿಕೊಂಡವರಿಗೆ.....

ಪುಟ 16 ರಿಂದ

ಅಧಿಕಾರಿಗಳು,ಕುಂಟೋಜಿ,ಗೋಗೇರಿ, ರಾಜೂರ ಮತ್ತು ರಾಂಪೂರ ಗ್ರಾಮ ಪಂಚಾಯಿತಿ ಪಿ.ಡಿ.ಓ ಗಳು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಆಗಮಿಸಿ ಧರಣಿ ಸ್ಥಳದಲ್ಲಿಯೇ ಸಭೆ ನಡೆಯಿಸಿ ಧರಣಿನಿರತರ ಬೇಡಿಕೆಗಳ ಕುರಿತು ಸುದೀರ್ಘ ಚರ್ಚೆ ನಡೆಯಿಸಿದರು.

ಸಂಘದ ಅಧ್ಯಕ್ಷ ಬಾಲು ರಾಠೋಡ ಮಾತನಾಡಿ ಬಗರ್ ಹುಕುಂ ಸಾಕುವಳಿದಾರರಿಗೆ ಹಕ್ಕುಪತ್ರ ಮತ್ತು ರೇಷನ್ ಕಾರ್ಡ ಸಮಸ್ಯೆ ಕುರಿತು ಎತ್ತಿದ ಪ್ರಶ್ನೆಗೆ ತಹಶೀಲ್ದಾರರು ಬಗರ್ ಹುಕುಂ ಸಾಗುವಳಿದಾರರಿಗೆ ಸಂಬಂದಿಸಿದ ಪ್ರಕರಣಗಳ ಇತ್ಯರ್ಥಕ್ಕೆ ಸರ್ಕಾರ ಅಧಿಕೃತವಾಗಿ ಸುತ್ತೋಲೆ ಹೊರಡಿಸಿಲ್ಲ. ಸರ್ಕಾರ ಅನುಮತಿ ನೀಡಿದ ತಕ್ಷಣ ಈ ಕುರಿತ ಪ್ರಕರಣಗಳನ್ನು ವಿಚಾರಣೆಗೆ ಕೈಗೆತ್ತಿಕೊಂಡು ಅರ್ಹರಿಗೆ ಭೂವಿ ವಿತರಿಸಲಾಗುವುದು. ಮತ್ತು ಪಡಿತರ ಚೀಟಿ ವಿತರಣೆಗೆ ಸಂಬಂಧಿಸಿ ಸರ್ವೆ ಕಾರ್ಯಾ ಪ್ರಾರಂಭಗೊಂಡಿದ್ದು, ಅರ್ಹರರಿಗೆ ರೇಷನ್ ಕಾರ್ಡ ವಿತರಿಸಲಾಗುವುದು ಎಂದು ಭರವಸೆ ನೀಡಿದರು.


ಕಾರ್ಯದರ್ಶಿ ಕಳಕೇಶ ಉಕ್ಕಿಸಲ ಮಾತನಾಡಿ ಉದ್ಯೋಗ ಖಾತ್ರಿಯೋಜನೆಯಲ್ಲಿ ಉದ್ಯೋಗ ನೀಡಲು ಅಧಿಕಾರಿಗಳು ಸತಾಯಿಸುತ್ತಿದ್ದಾರೆ, ಕುಂಟೋಜಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಭ್ರಷ್ಟಾಚಾರ ನಡೆದಿದೆ.ಸರ್ಕಾರದ ಯೋಜನೆಯಲ್ಲಿ ಮನೆ ನಿರ್ಮಿಸಿಕೊಂಡ ಫಲಾನುಭವಿಗಳಿಗೆ ಹಣನೀಡಿಲ್ಲ. ಜೊತೆಗೆ ರಾಜೂರ ಗ್ರಾಮ ಪಂಚಾಯಿಯಲ್ಲಿ ಬಸವ ವಸತಿ ಯೋಜನೆ ಅಡಿಯಲ್ಲಿ ಆಯ್ಕೆಗೊಂಡ ಫಲಾನುಭವಿಗಳು ಕಾಮಗಾರಿ ಆದೇಶ ಪತ್ರ ಪಡೆದು ಮನೆ ನಿರ್ಮಿಸಿಕೊಂಡಿದ್ದಾರೆ ಆದರೆ ಈಗ ಪಂಚಾಯಿತಿಯವರು 21 ಫಲಾನುಭವಿಗಳ ಆಯ್ಕೆಯನ್ನು ರದ್ದುಗೊಳಿಸಿಸಿರುವುದಾಗಿ ಹೇಳುತ್ತಿದ್ದಾರೆ. ಮತ್ತು ಮಳೆಯಿಂದ ಬೆಳೆ ಹಾಗೂ ಮನೆಗಳಿಗೆ ಹಾನಿಯುಂಟಾಗಿದೆ. ಈ ಕುರಿತು ತುರ್ತು ಸಮಿಕ್ಷೆ ಕಾರ್ಯ ನಡೆಯುತ್ತಿಲ್ಲ ಇದಕ್ಕೆ ಏನು ಕ್ರಮಗಳನ್ನು ಕೈಗೊಂಡಿದ್ದಿರಿ ಎಂದು ತಾಲೂಕ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕೇಳಿದ ಪ್ರಶ್ನೆಗೆ ಅಧಿಕಾರಿಗಳು ಈ ವಾರದಲ್ಲಿ ಮನೆ ನಿರ್ಮಿಸಿಕೊಂಡವರಿಗೆ ಹಣ ನೀಡಲಾಗುವುದು, ಮಳೆಯಿಂದ ಹಾನಿಗೀಡಾದ ಮನೆ ಮತ್ತು ಬೆಳೆ ಸಮೀಕ್ಷೆಗೆ ಈಗಾಗಲೇ ತಂಡ ರಚನೆಯಾಗಿದ್ದು ತಕ್ಷಣ ಹಾನಿಗೊಳಗದವರಿಗೆ ಪರಿಹಾರ ನೀಡಲಾಗುವುದು, ಉದ್ಯೋಗ ಖಾತ್ರಿ ಯೋಜನೆಯಲ್ಲಿ ನಡೆದಿರುವ ಭ್ರಷ್ಟಾಚರದ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ. ಅಲ್ಲದೇ ಉದ್ಯೋಗ ನೀಡಲು ಮುಂದಾಗದ ಪಂಚಾಯ್ತಿಯವರ ವಿರುದ್ಧ ಕ್ರಮ ಜರುಗಿಸುತ್ತೇವೆ ಎಂದರಲ್ಲದೇ ಈ ವಿಷಯಗಳನ್ನು ವಿವರವಾಗಿ ಚರ್ಚಿಸಲು ಅಕ್ಟೋಬರ್ 15 ರಂದು ಸಂಘಟಕರ ಸಭೆ ಕರೆಯಲು ತೀರ್ಮಾನಿಸಲಾಯಿತು.

ಚರ್ಚೆಯಲ್ಲಿ ಎಂ.ಎಸ್.ಹಡಪದ, ಮಾರುತಿ ಚಿಟಗಿ, ಫೀರು ರಾಠೋಡ, ಬಸವರಾಜ ಶೀಲವಂತರ, ಎಚ್ಚರಪ್ಪ ಬಡಿಗೇರ, ಕಳಕಪ್ಪ ಹೊಸಮನಿ, ಉಮೇಶ ಮಾಳೋತ್ತರ, ಯಮನೂರಪ್ಪ ಮಾದರ, ಕರಿಯಪ್ಪ ಮಾದರ, ಕರಿಯಮ್ಮ ಗುರಿಕಾರ, ಪಾಲ್ಗೊಂಡಿದ್ದರು.

– ಬಾಲು ರಾಠೋಡ

JANASHAKTHI KANNADA VARA PATRIKE OCT 13, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Satua
Licensed to Post without prepayment License No. WPP-283

ಕುಂದಾಪುರ : ನಿವೇಶನ ರಹಿತರಿಂದ ಅಹೋರಾತ್ರಿ ಧರಣಿ



ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಸಮಿತಿ ಕರೆಯ ಮೇರೆಗೆ ರಾಜ್ಯಾದ್ಯಂತ ನಡೆದಂತೆ ಕುಂದಾಪುರ ತಾಲೂಕು ತಹಶೀಲ್ದಾರರ ಕಚೇರಿ ಎದುರು ನಿವೇಶನ ರಹಿತರು ಅಹೋರಾತ್ರಿ ಧರಣಿ ಮುಷ್ಕರ ನಡೆಸಿದರು.

ಸಂಘದ ರಾಜ್ಯ ಅಧ್ಯಕ್ಷ ನಿತ್ಯಾನಂದಸ್ವಾಮಿ ಧರಣಿ ಮುಷ್ಕರವನ್ನು ಉದ್ಘಾಟಿಸಿ ಮಾತನಾಡುತ್ತಾ, ಕುಂದಾಪುರ ತಾಲೂಕಿನ ಬಡ ನಿವೇಶನ ರಹಿತರು ನಿವೇಶನ ಕೋರಿ ಅರ್ಜಿಗಳನ್ನು ಸಲ್ಲಿಸಿ ಒಂದು ವರ್ಷ ಕಳೆದರೂ ಅವುಗಳನ್ನು ಇದುವರೆಗೂ ಪರಿಶೀಲಿಸದೆ ಇರುವುದನ್ನು ಖಂಡಿಸಿದರು. ಅರ್ಜಿಗಳ ಪರಿಶೀಲನೆಯನ್ನು ಕೈಗೆತ್ತಿಕೊಳ್ಳುವ ವರೆಗೂ ಧರಣಿ ಮುಷ್ಕರ ಅಹೋರಾತ್ರಿ ಅನಿರ್ದಿಷ್ಟವಾಗಿ ನಡೆಯಲಿದೆ ಎಂದು ಘೋಷಿಸಿದ ಅವರು ಕಾರ್ಪೋರೇಟ್ ಕಂಪನಿಗಳಿಗೆ ರೈತರ ಭೂಮಿಯನ್ನು ದಾನಮಾಡಲು ಬಾರೀ ಮುತುವರ್ಜಿ ವಹಿಸುವ ಸರ್ಕಾರ ಬಡ ನಿವೇಶನ ರಹಿತರಿಗೆ ನಿವೇಶನಗಳನ್ನು ಮಂಜೂರು ಮಾಡಲು ಅಷ್ಟೇ ಆಸಕ್ತಿ ಯಾಕೆ ತೋರುವುದಿಲ್ಲ ಎಂದು ಪ್ರಶ್ನಿಸಿದರು. ಗ್ರಾಮಗಳಲ್ಲಿ ಮತ್ತು ಪುರಸಭೆ ವ್ಯಾಪ್ತಿಯಲ್ಲಿ ಶ್ರೀಮಂತರು ಒತ್ತುವರಿ ಮಾಡಿಕೊಂಡಿರುವ ಸರ್ಕಾರಿ ಭೂಮಿಯನ್ನು ಮುಲಾಜಿಲ್ಲದೆ ಸ್ವಾಧೀನಪಡಿಸಿಕೊಂಡು ನಿವೇಶನ ರಹಿತರಿಗೆ ನಿವೇಶನಗಳನ್ನು ವಿತರಣೆ ಮಾಡಲು ಉಪಯೋಗಿಸಬೇಕು ಎಂದು ಸಲಹೆ ನೀಡಿದ ಅವರು ವೈಯಕ್ತಿಕ ನಿವೇಶನಗಳನ್ನು ವಿತರಿಸಲು ಜಾಗದ ಕೊರತೆ ಎದುರಾದರೆ ವಸತಿ ಸಮುಚ್ಚಯ ನಿರ್ಮಿಸಿ ಸಮಸ್ಯೆಯ ಪರಿಹಾರಕ್ಕೆ ಮುಂದಾಗಬೇಕೆಂದು ಒತ್ತಾಯಿಸಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ. ಶಂಕರ್, ಕುಂದಾಪುರ ಪುರಸಭೆಯ ಅಧ್ಯಕ್ಷೆ ಕಲಾವತಿ, ಕೂಲಿಕಾರರ ಸಂಘದ ಜಿಲ್ಲಾ ಅಧ್ಯಕ್ಷ ದೋಗು ಸುವರ್ಣ, ರೈತ ಸಂಘದ ಮುಖಂಡರಾದ ಯು. ದಾಸ ಭಂಡಾರಿ, ಹೆಂಚು ಕಾರ್ಮಿಕ ಮುಖಂಡ ಎಚ್. ನರಸಿಂಹ, ತಾಲೂಕ ಪಂಚಾಯತ್ ಸದಸ್ಯೆ ಶಶಿಕಲಾ ಪೂಜಾರಿ, ಕಟ್ಟಡ ಕಾರ್ಮಿಕ ಸಂಘದ ಮುಖಂಡ ಸುರೇಶ್ ಕಲ್ಲಾಗರ ಮೊದಲಾದವರು ಧರಣಿನಿರತರನ್ನು ಉದ್ದೇಶಿಸಿ ಮಾತನಾಡಿದರು.

ಆರಂಭದಲ್ಲಿ ಕೂಲಿಕಾರರ ಸಂಘದ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್ ಕೋಣಿ ಎಲ್ಲರನ್ನು ಸ್ವಾಗತಿಸಿದರಲ್ಲದೆ ತಹಶಿಲ್ದಾರರು ಭರವಸೆ ಕೊಟ್ಟಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಸಭೆಯನ್ನು ನಡೆಸದೆ ಹೋದರೆ ಧರಣಿ ಮುಷ್ಕರ ಅನಿರ್ದಿಷ್ಟವಾಗಿ ಮುಂದುವರೆಯಲಿದೆ ಎಂದು ಎಚ್ಚರಿಸಿದರು. ಮೊದಲ ದಿನ ನಡೆದ ಧರಣಿಯಲ್ಲಿ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿದ್ದರು. ರಾತ್ರಿ ಪಾಳಿಯಲ್ಲಿ ನೂರಾರು ಸಂಖ್ಯೆಯಲ್ಲಿ ಪುರುಷರು ಪಾಲ್ಗೊಂಡಿದ್ದರು. ಹೆಂಚು ಕಾರ್ಮಿಕ ಸಂಘ (ಸಿಐಟಿಯು)ದ ಕಾರ್ಯಕರ್ತರು ನಿವೇಶನ ರಹಿತರ ಬೆಂಬಲಾರ್ಥವಾಗಿ ರಾತ್ರಿ ಪಾಳಿಯಲ್ಲಿ ಭಾಗವಹಿಸಿದ್ದರು.

ಎರಡನೇ ದಿನದ ಧರಣಿಯಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಯಾದವ ಶೆಟ್ಟಿ ಅವರು ಆಗಮಿಸಿ ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದರು. ಕೆಂಬಾವುಟಕ್ಕೆ ಭೂಮಿಗಾಗಿ, ಭೂ ಸುಧಾರಣೆಗಳಿಗಾಗಿ ಹೋರಾಟ ನಡೆಸಿದ ಚರಿತ್ರೆ ಇದೆ. ನಾವು ನಮ್ಮ ಬೇಡಿಕೆ ಈಡೇರುವ ವರೆಗೂ ಹೋರಾಟವನ್ನು ನಿಲ್ಲಿಸುವವರಲ್ಲ ಎಂದು ಹೇಳಿದರು. ಪುರಸಭಾ ಸದಸ್ಯೆ ಗುಣರತ್ನ, ನಿವೇಶನ ರಹಿತರ ಹೋರಾಟ ಸಮಿತಿಯ ಅಧ್ಯಕ್ಷ ಕರಿಯ ದೇವಾಡಿಗ, ಸಿಪಿಐ(ಎಂ) ತಾಲೂಕು ಕಾರ್ಯದರ್ಶಿ ಮಹಾಬಲ ವಡೇರಹೋಬಳಿ ಮೊದಲಾದವರು ಮಾತನಾಡಿದರು.

ಆರಂಭದಲ್ಲಿ ಎರಡನೇ ದಿನದ ಹೋರಾಟಕ್ಕೆ ಎಲ್ಲರನ್ನು ಸ್ವಾಗತಿಸಿದ ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡು-ಕೋಣೆ, ಅಧಿಕಾರಿಗಳು ಜಂಟಿ ಸಭೆಯನ್ನು ಕರೆಯಬೇಕೆಂದು ಆಗ್ರಹಿಸಿದರು.

11.00 ಗಂಟೆಗೆ ತಹಶಿಲ್ದಾರರು ಮುಖಂಡರನ್ನು ಸಭೆಗೆ ಆಹ್ವಾನಿಸಿದರು. ತಹಶಿಲ್ದಾರರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ, ಪುರಸಭಾ ಅಧಿಕಾರಿಗಳು ಭಾಗವಹಿಸಿದ್ದರು. ನಿವೇಶನ ರಹಿತರ ಪರವಾಗಿ ನಿತ್ಯಾನಂದಸ್ವಾಮಿ, ರಾಜೀವ ಪಡುಕೋಣೆ, ವೆಂಕಟೇಶ ಕೋಣಿ, ಯಾದವ ಶೆಟ್ಟಿ, ಗುಣರತ್ನ, ಕರಿಯ ದೇವಾಡಿಗ, ದಾಸಭಂಡಾರಿ, ನಾಗರತ್ನ ಮೊದಲಾದವರು ಭಾಗವಹಿಸಿದ್ದರು.

ನಿವೇಶನ ರಹಿತರು ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಲು ವಿಳಂಬ ಆಗಿರುವ ಬಗ್ಗೆ ತಹಶಿಲ್ದಾರರು ವಿಷಾದ ವ್ಯಕ್ತಪಡಿಸಿದರು. ವಾರಕ್ಕೆ 20 ಕನಿಷ್ಠ ರಂತೆ ಎಲ್ಲಾ ಅರ್ಜಿಗಳನ್ನು 3 ತಿಂಗಳೊಳಗೆ ಪರಿಶೀಲಿಸಿ ಪಿ.ಡಿ.ಓ. ಗಳಿಂದ ವರದಿ ಪಡೆಯಲಾಗುವುದೆಂದೂ ನವಂಬ ತಿಂಗಳಲ್ಲಿ ಇದೇ ರೀತಿ ಇನ್ನೊಂದು ಸ ನಡೆಸಿ ಪ್ರಗತಿಯನ್ನು ಪರಿಶೀಲಿಸುವುದೆಂ ಸಭೆಯಲ್ಲಿ ನಿರ್ಧರಿಸಲಾಯಿತು. ಅ ಅವಧಿಯಲ್ಲಿ ಲಭ್ಯ ಇರುವ ಸರ್ಕಾ ಭೂಮಿಯ ಬಗ್ಗೆ ಮಾಹಿತಿಗಳನ ಸಂಗ್ರಹಿಸುವುದಾಗಿಯೂ ಯೋ ಬೆಲೆಗೆ ತಮ್ಮ ಖಾಸಗಿ ಭೂಮಿಯನ ಮಾರಾಟ ಮಾಡಲು ಸಿದ್ಧರಿರುವವರನ ಒಟ್ಟಾಗಿ ಗುರುತಿಸುವುದೆಂದು ಅಭಿಪ್ರಾ ಮಾಡಲಾಯಿತು. ಸಭೆಯ ನಡುವಳ ಮತ್ತು ತೀರ್ಮಾನಗಳ ಪ್ರತಿಯನ ಸಂಘದ ಮುಖಂಡರಿಗೆ ನೀಡುವುದೆಂದ ನಿರ್ಧರಿಸಲಾಯಿತು. ಇದರೊಂದಿ ಎರಡು ದಿನಗಳ ಧರಣಿ ಮುಷ್ಕರವನ ಹಿಂಪಡೆಯಲಾಯಿತು.

ಎರಡೂ ದಿನಗಳ ಈ ಧರಣ ಮುಷ್ಕರದಲ್ಲಿ ಹಟ್ಟಿಯಂಗಡಿ, ತಲ್ಲೂರು ಕಾವ್ರಾಡಿ, ಕರ್ಕುಂಜೆ, ಗುಲ್ವಾಡಿ, ಹಕ್ಲಾಡಿ ಗುಜ್ಜಾಡಿ, ಬಸ್ರೂರು, ಹೆಮ್ಮಾಡಿ, ಕೋಟೇಶ್ವರ ಆಲೂರು, ಅಂಪಾರು, ಬೀಜಾಡಿ ನಾಡಾ, ನಾವುಂದೆ, ಕಂದಾವರ, ಕೋಣಿ ಹಂಗಳೂರು, ಆನಗಳ್ಳಿ, ಬಳ್ಕೂರು, ತ್ರಾಸಿ ಹಾಗೂ ಕುಂದಾಪುರ ಪುರಸಭಾ ವ್ಯಾಪ್ತಿಯ 2000 ಕ್ಕೂ ಹೆಚ್ಚು ಅರ್ಜಿದಾರ ನಿವೇಶನ ರಹಿತರು ಭಾಗವಹಿಸಿದ್ದರು.

ವರದಿ: ವೆಂಕಟೇಶ ಕೋಣಿ

ಮನೆ ನಿರ್ಮಿಸಿಕೊಂಡವರಿಗೆ ವಾರದಲ್ಲಿ ಬಾಕಿ ಹಣ ಬಿಡುಗಡೆ-ಅಧಿಕಾರಿಗಳ ಭರವಸೆ ಧರಣಿ ಮುಕ್ತಾಯ



ಗಜೇಂದ್ರಗಡ: ಗ್ರಾಮೀಣ ಪ್ರದೇಶದಲ್ಲಿ ಬಸವ-ಇಂದಿರ ಆವಾಸ ಯೋಜನೆಯ ಅಡಿಯಲ್ಲಿ ಮನೆ ನಿರ್ಮಿಸಿಕೊಂಡವರಿಗೆ ವಾದಲ್ಲಿ ಹಣ ಬಿಡುಗಡೆ ಮಾಡುವ ಅಧಿಕಾರಿಗಳ ಭರವಸೆ ಹಿನ್ನೆಲೆಯಲ್ಲಿ ಸೆ. 30 ರಿಂದ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ನೇತೃತ್ವದ ನಡೆಯುತ್ತಿದ್ದ ಪ್ರತಿಭಟನೆಯನ್ನು 2ನೇ ದಿ ಹಿಂಪಡೆಯಲಾಯಿತು.

ಪ್ರತಿಭಟನಾ ಸ್ಥಳಕ್ಕೆ ತಹಶೀಲ್ದಾರರು ತಾಲೂಕ ಪಂಚಾಯಿತಿ ಕಾರ್ಯನಿರ್ವಾಹ

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout,
BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-
560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12,
18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross,
Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th C
BANGALORE-560086 Editor: NITHYANAND